
# ಎಸ್.ಎಮ್. ಖೇಡಗಿ

ಪ್ರೊ. ಎ.ಎಲ್.ನಾಗೂರ



ಕರ್ನಾಟಕ ನಾಟಕ ಅಕಾಡೆಮಿ

ರಂಗ ಸಂಪನ್ನರು ಮಾಲಿಕೆ

♦

# ಶ್ರೀ ಎಸ್.ಎಮ್. ಖೇಡಗಿ

ಪ್ರೊ. ಎ.ಎಲ್. ನಾಗೂರ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - ೫೬೦ ೦೦೨

**S.M. KHEDAGI (Rangasampannaru Malike)**
by **Prof. A.L. Nagura**
Published by **Mr. Siddaraju**, Registrar, Karnataka Nataka Academy,
Kannada Bhavana, J.C.Road, Bengaluru - 560 002.
Phone: 080-22237848

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | ೨೦೧೬ |
| ಪ್ರತಿಗಳು | : | ೧೦೦೦ |
| ಪುಟಗಳು | : | viii + ೭೨ |
| ಬೆಲೆ | : | ರೂ. ೬೦/- |

**ಪ್ರಕಾಶಕರು**
**ಸಿದ್ದರಾಜು,** ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡಭವನ, ಜೆ.ಸಿ.ರಸ್ತೆ
ಬೆಂಗಳೂರು - ೫೬೦ ೦೦೨
ದೂರವಾಣಿ: ೦೮೦ - ೨೨೨೩೭೮೪೮

ರಕ್ಷಾಪುಟ ವಿನ್ಯಾಸ:
ಕೃಷ್ಣ ರಾಯಚೂರು

ಮುದ್ರಕರು:
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೬ ರಿಂದ ೩೦ ರ ವರೆಗೆ ನಡೆದ ರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟಣೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯ ಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟನಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

**ಎಲ್.ಬಿ.ಶೇಖ (ಮಾಸ್ತರ)**
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟಣೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗ ಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟಣೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ ೨೩ ಜುಲೈ ೨೦೧೪ ರಂದು ನಡೆದ ಪ್ರಕಟಣಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟಣೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. ೫-೬ ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟಣೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ

ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

೨೦೧೫ರಲ್ಲಿ ಪ್ರಕಟಣಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಸಂಪಾದಕನ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟಣೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ನಾಟಕಕಾರ, ಸಂಗ್ರಾಹಕ ಖೇಡಗಿ**

'ಉತ್ತರ ಕರ್ನಾಟಕದ ಆಡುಭಾಷೆಯನ್ನು ಮೆದುಗೊಳಿಸಿ, ಹದಗೊಳಿಸಿ ರಂಗಕ್ಕೆ ತಂದ ನಾಟಕಕಾರ' ಎಂದು ಖ್ಯಾತರಾದವರು ಶೇಖ್ ಮೊಹಿದ್ದೀನ್ ಖೇಡಗಿ ಅವರು. ಉತ್ತಮ ನಟ, ನಿರ್ದೇಶಕರೂ ಹೌದು. ವೃತ್ತಿ ರಂಗಭೂಮಿಯ ಬಹುತೇಕ ನಾಟಕ ಕೃತಿಗಳು ಪ್ರಕಟನೆಯಾಗದೆ ಮೂಲೆ ಗುಂಪಾಗಿವೆ. ಪ್ರಕಟಿತ ಕೃತಿಗಳೂ ಈಗ ಲಭ್ಯವಿಲ್ಲ. ಆದರೆ ಖೇಡಗಿ ಅವರ ಬಳಿ ಅಂತಹ ಕೆಲವಾದರೂ ನಾಟಕಗಳು ಲಭ್ಯ.

ವಿಜಯಪುರದಲ್ಲಿ ಉಪನ್ಯಾಸಕರಾಗಿರುವ ಪ್ರೊ. ಎ.ಎಲ್. ನಾಗೂರ ಅವರು ಕನ್ನಡ, ಹಿಂದಿ ಮತ್ತು ಮರಾಠಿ ಸಾಂಸ್ಕೃತಿಕ ರಂಗದ ಕೊಳುಕೊಡುವಿಕೆಯ ಹಲವು ಮಹತ್ವದ ಸಂಗತಿಗಳನ್ನು ಇತ್ತೀಚಿನ ವರ್ಷಗಳಲ್ಲಿ ಬೆಳಕಿಗೆ ತಂದಿದ್ದಾರೆ. ನಾಟಕಗಳ ಬಗ್ಗೆಯೂ ಅವರದು ಅಂತಹದೇ ಚಿಕಿತ್ಸಕ ದೃಷ್ಟಿಕೋನ. ಖೇಡಗಿಯವರ ಬಗ್ಗೆ ಬರೆಯುತ್ತಲೇ ವಾಗ್ವಾದ ಹುಟ್ಟುಹಾಕಬಲ್ಲ ಹಲವು ಮುಖ್ಯ ಸಂಗತಿಗಳನ್ನು ಇಲ್ಲಿ ಚರ್ಚಿಸಿದ್ದಾರೆ.

**– ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು:
**ಜಗುಚಂದ್ರ ಕೆ.**
**ಉಮೇಶ ಸಾಲಿಯಾನ**
**ಶಿವಶಂಕರ ಹಾಲ್ಕುರಿಕೆ**

# ಕರ್ನಾಟಕ ನಾಟಕ ಅಕಾಡೆಮಿ

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು

ಸದಸ್ಯರು

ರಾಜಪ್ಪ ಕಿರಗಸೂರು
ಕಲ್ಪನಾ ನಾಗನಾಥ್
ಪಿ. ತಿಪ್ಪೇಸ್ವಾಮಿ
ಎಂ.ಎಸ್. ಗುಣಶೀಲನ್
ಮುದ್ದಣ್ಣ ರಟ್ಟೆಹಳ್ಳಿ
ಅನ್ನಪೂರ್ಣ ಸಾಗರ
ಗುಡಿಹಳ್ಳಿ ನಾಗರಾಜ
ಎಚ್. ಷಡಾಕ್ಷರಪ್ಪ ಹೊಸಮನಿ
ಶ್ರೀಪಾದ ಭಟ್
ಉಮೇಶ ಸಾಲಿಯಾನ್
ವಿ.ಎನ್. ಅಕ್ಕಿ
ಬಿ.ಎಂ. ರಾಮಚಂದ್ರ
ಎನ್.ಕೆ. ರಾಮಕೃಷ್ಣ
ಎ. ವರಲಕ್ಷ್ಮಿ
ಎಸ್.ಕೆ. ಕೊನೆಸಾಗರ
ಹಾಲ್ಕುರಿಕೆ ಶಿವಶಂಕರ್
ಎಲ್.ಎಚ್. ರಂಗನಾಥಪ್ಪ
ಕೆ. ಜಗುಚಂದ್ರ

ರಿಜಿಸ್ಟ್ರಾರ್:
ಸಿದ್ದರಾಜು

ಯೋಜನಾ ಸಹಾಯಕರು:
ಕೆ. ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣಾ, ಸುಶೀಲಮ್ಮ

# ಲೇಖಕರ ನುಡಿ

ಬಿಜಾಪುರ ಜಿಲ್ಲೆಯ ರಂಗಕಲಾವಿದ, ನಿರ್ದೇಶಕ, ಹವ್ಯಾಸಿ ವೃತ್ತಿರಂಗಭೂಮಿ ಮಾಲೀಕ, ನಟರಾಜ ಪುಸ್ತಕಾಲಯದ ಸ್ಥಾಪಕರಾದ ಶ್ರೀ ಎಸ್.ಎಮ್. ಖೇಡಗಿಯವರ ರಂಗಬದುಕು ಈಗ ಹೆಚ್ಚುಕಡಿಮೆ ಅರ್ಧಶತಮಾನಕ್ಕೆ ಹತ್ತಿರವಾಗುತ್ತಿದೆ. ಒಟ್ಟು ೫೧ ನಾಟಕಗಳನ್ನು ಬರೆದು ಅದರ ಹಲವಾರು ಪ್ರಕಾರಗಳಲ್ಲಿ ತಾನು ಸೈ ಎಂದು ತೋರಿಸಿಕೊಟ್ಟವರಿವರು. ಯಾರ ಜೊತೆಗೂ ಪೈಪೋಟಿಗೆ ಬೀಳದೇ ತಮ್ಮ ಅದ್ಭುತ ಪ್ರತಿಭೆಯಿಂದ ರಾಜ್ಯದ ರಂಗಾಸಕ್ತರ ಮನಗೆದ್ದವರಿವರು. ಅನೇಕ ಖ್ಯಾತ ಕಂಪನಿಗಳು ನಾಟಕವೊಂದನ್ನು ಬರೆದುಕೊಡಲು ಒತ್ತಾಯಿಸಿದಾಗ ಶ್ರೀ ಖೇಡಗಿಯವರು ತಿಂಗಳೊಪ್ಪತ್ತಿನಲ್ಲಿ ನಾಟಕವೊಂದನ್ನು ಸಿದ್ಧಪಡಿಸಿಕೊಡುತ್ತಿದ್ದರು. ಅವರ ಎಲ್ಲ ನಾಟಕಗಳು ಕನಿಷ್ಟ ನೂರು ಪ್ರಯೋಗಗಳನ್ನು ಕಂಡಿವೆ. ಯಾವುದರಲ್ಲೂ ಸೋಲಿಲ್ಲ! ೭೦ರ ಮುಸ್ಸಂಜೆಯಲ್ಲೂ ಸದಾ ರಂಗಚಟುವಟಿಕೆಗಳಲ್ಲಿ ನಿರತರಾಗಿ ಆದರ್ಶಪ್ರಾಯರಾಗಿ ಕಾಣುತ್ತಾರೆ. ಅವರ ಸಂಪೂರ್ಣ ಬದುಕು ಸ್ಫಟಿಕ ಮಿಶ್ರಿತ ಜಲದಂತೆ!

ಶ್ರೀ ಖೇಡಗಿಯವರ ಕುರಿತಾಗಿ ಅಕಾಡೆಮಿಗೆ ಪುಸ್ತಕವೊಂದನ್ನು ಬರೆದು ಕೊಡಲು ಅಧ್ಯಕ್ಷರಾದ ಶ್ರೀ ಎಲ್.ಬಿ. ಶೇಖ್ ಅವರು ಫೋನ್ ಮಾಡಿ ತಿಳಿಸಿದಾಗ ನಾನು ಸಂತೋಷದಿಂದಲೇ ಸ್ವೀಕರಿಸಿದೆ. ಖೇಡಗಿಯವರ ಜೊತೆಗೆ ಅನೇಕ ಬಾರಿ ಸಂದರ್ಶನಗಳನ್ನು ನಡೆಸಿ ಅವರ ನಾಟಕದ ಕೆಲ ಪುಸ್ತಕಗಳನ್ನು ತಿರುವಿ ಹಾಕಿ ನನ್ನ ಬುದ್ಧಿಗೆ ನಿಲುಕಿದಷ್ಟು ಈ ಪುಸ್ತಕದ ಮುಖಾಂತರ ಅರ್ಪಿಸುತ್ತಿದ್ದೇನೆ. ಕಳೆದ ಮೂರು ನಾಲ್ಕು ವರ್ಷಗಳಿಂದ ನಾನು ರಾಜ್ಯದಾದ್ಯಂತ ತಿರುಗಾಡಿ ಕೆಲವು ರಂಗ ಕಲಾವಿದರ ಕುರಿತು ಹೊಸ ಮಾಹಿತಿಯನ್ನು ಕಲೆ ಹಾಕಿದ್ದೇನೆ. ನಾನು ಪಟ್ಟ ಶ್ರಮ ಅಷ್ಟಿಷ್ಟಲ್ಲ. ರಂಗಭೂಮಿಯು ಸಂಕೀರ್ಣವಾದುದು, ರಂಗಕಲಾವಿದರು, ರಂಗಸಂಗೀತಗಾರರು, ನಾಟಕಕಾರರು ಅಜ್ಞಾತರಾಗಿಯೇ ಉಳಿದಿದ್ದಾರೆ. ಅಂತಹವರ ಕುರಿತಾಗಿ ನಾಟಕ ಅಕಾಡೆಮಿಯು ರಂಗಸಂಪನ್ನರು ಮಾಲಿಕೆ ಮುಂದುವರಿಸಿದ್ದು ಸ್ತುತ್ಯಾರ್ಹ.

ಭೀಮಾ ತೀರದ 'ರಂಗಭೀಮ' ಶ್ರೀ ಎಸ್.ಎಮ್. ಖೇಡಗಿಯವರು ಕನ್ನಡಿಗರೆಲ್ಲ ರಿಗೂ ಈ ಕೃತಿಯ ಮುಖಾಂತರ ಪರಿಚಯವಾಗಲೆಂದು ನನ್ನ ಆಶಯ. ಆಗಾಗ ಸಲಹೆಗಳನ್ನು ನೀಡುತ್ತ ಪ್ರೋತ್ಸಾಹಿಸುತ್ತಿದ್ದ ನಾಟಕ ಅಕಾಡೆಮಿ ಸದಸ್ಯರೂ, ಪತ್ರಕರ್ತ ಮಿತ್ರರೂ ಆದ ಶ್ರೀ ಗುಡಿಹಳ್ಳಿ ನಾಗರಾಜ ಇವರನ್ನು ಸ್ಮರಿಸದೇ ಇರಲಾರೆ.

**ಪ್ರೊ. ಎ. ಎಲ್. ನಾಗೂರ**

ಬಿಜಾಪುರ

# ಅಖಂಡ ಬಿಜಾಪುರ ಜಿಲ್ಲೆಯ ವೃತ್ತಿರಂಗಭೂಮಿ ಪರಿಚಯ

ಬಂಗಾಳದಲ್ಲಿ ಪಾಶ್ಚಾತ್ಯ ಮಾದರಿಯ ರಂಗಭೂಮಿಯ ಜನಪ್ರಿಯತೆಯನ್ನು ಕಂಡುಕೊಂಡ ಪಾರ್ಸಿಗಳು ಇದನ್ನೊಂದು ಲಾಭದಾಯಕ ಉದ್ದಿಮೆಯಾಗಿ ಮಾಡಿಕೊಳ್ಳುವ ಸಲುವಾಗಿ ವೃತ್ತಿ ರಂಗಭೂಮಿಯನ್ನು ಮರಾಠಿ ಸೀಮೆಯಲ್ಲಿ ಹುಟ್ಟುಹಾಕಿದರು. ಮರಾಠಿ ವೃತ್ತಿ ನಾಟಕಗಳು ಕನ್ನಡ ಸೀಮೆಗಳಲ್ಲೂ ಪ್ರಯೋಗಗೊಂಡವು. ಮರಾಠಿ ನೆಲದ ಕಿರ್ಲೋಸ್ಕರ ನಾಟಕ ಮಂಡಳಿ, ಗಜಾನನ ನಾಟಕ ಮಂಡಳಿಗಳು ಬಿಜಾಪುರ ಜಿಲ್ಲೆಯಲ್ಲಿ ಮರಾಠಿ ನಾಟಕಗಳ ಪ್ರದರ್ಶನ ನಡೆಸಿ ಬಹಳಷ್ಟು ಕ್ರಾಂತಿ ಮಾಡಿವೆ. ರಾಣಾ ಭೀಮದೇವ, ಪಾಣಿಪತ್‌ಚಾ, ಮುಕಾಬಿಲ, ಮೊದಲಾದ ನಾಟಕಗಳು ಧಾರವಾಡದ ರಂಗಭೂಮಿಯ ಪ್ರದರ್ಶನ ಕಂಡ ಮೇಲೆ ಬಿಜಾಪುರದಲ್ಲಿ ಕೌಜಲಗಿ ಶ್ರೀನಿವಾಸರಾಯರೂ ಸೇರಿದಂತೆ ಕೆಲ ಕನ್ನಡ ಪದವೀಧರರೂ 'ರಾಣಾ ಭೀಮದೇವ' ಎಂಬ ಮರಾಠಿ ನಾಟಕವನ್ನು ಅತ್ಯುತ್ತಮವಾಗಿ ಆಡಿದರೆಂದು ತಿಳಿಯಲಾಗಿದೆ. ಹೀಗೆ ಅಚ್ಚಕನ್ನಡಿಗರೂ ಸುಶಿಕ್ಷಿತರೂ ಆದವರು ಅನ್ಯಭಾಷೆಯ ನಾಟಕಗಳನ್ನಾಡಿ ಆ ಭಾಷೆಗೆ ಪ್ರೋತ್ಸಾಹಿಸುತ್ತಿರುವುದನ್ನು ಕಂಡ ಕನ್ನಡಾಭಿಮಾನಿಗಳಲ್ಲಿ ಅಸಮಾಧಾನ ಹುಟ್ಟಿತು. ರಬಕವಿಯ ವಾಮನರಾವ್ ಮಾಸ್ತರರು(೧೮೮೩-೧೯೩೫) ಮರಾಠಿಯ ಹಲವಾರು ನಾಟಕಗಳನ್ನು ಕನ್ನಡಕ್ಕೆ ಅಳವಡಿಸಿದರು. 'ವಿಶ್ವಗುಣಾದರ್ಶ ನಾಟಕ ಮಂಡಳಿ' ಕರ್ನಾಟಕದ ತುಂಬ ಸುತ್ತಾಡಿ ಕಂಪನಿ ನಾಟಕಗಳನ್ನು ಪ್ರಚಾರಕ್ಕೆ ತಂದರು. ಮರಾಠಿ ಮೇಲಿದ್ದ ಸೆಳೆತವನ್ನು ತುಸು ಕನ್ನಡದ ಕಡೆಗೆ ಹೊರಳಿಸುವಲ್ಲಿ ಭಾಗಶಃ ಯಶಸ್ವಿಯಾದರು. ಅವರು ಕನ್ನಡಿಸಿದ ನಾಟಕಗಳೆಂದರೆ 'ಸಂದೇಹ ಸಾಮ್ರಾಜ್ಯ', 'ಪಾರ್ವತಿಯ ಸತ್ವ ಪರೀಕ್ಷಾ', 'ವೀರ ಅಭಿಮನ್ಯು' ಮುಂತಾದವು. ಈ ನಾಟಕಗಳು ಕನ್ನಡ ರಂಗಭೂಮಿಯ ಹೆಸರನ್ನು ಮೇಲ್ಮಟ್ಟಕ್ಕೆ ಒಯ್ದವು. ಜನರಲ್ಲಿ ಇವರು ರಂಗಭೂಮಿಯ ಅತ್ಯುತ್ತಮ ಸಾಹಿತಿಯೆಂಬ ಭಾವನೆ ಮೂಡುವಂತೆ ಇವರ ರಂಗಭೂಮಿಯ ಚಟುವಟಿಕೆ ಗಳಿದ್ದವು. ಆಗಿನ ಸಮಯದಲ್ಲಿ ಪೌರಾಣಿಕ ನಾಟಕಗಳೇ ಹೆಚ್ಚು ಪ್ರಚಲಿತವಿದ್ದುದರಿಂದ, ಕಾಲ್ಪನಿಕ ಸನ್ನಿವೇಶಗಳನ್ನು ಅತಿರಂಜಿತವಾಗಿ ಪ್ರದರ್ಶಿಸಲು ಬಹಳ ಅವಕಾಶವಿತ್ತು. ವಾಮನ ಮಾಸ್ತರರಂತಹ ಪ್ರಯೋಗ ಶೀಲ ನಟ ನಾಟಕಕಾರರು ಪ್ರೇಕ್ಷಕರ ಬದಲಾಗುತ್ತಿದ್ದ

ಅಭಿರುಚಿಗಳನ್ನು ಗಮನಿಸಿ ನಾಟಕ ರಂಗದ ಆಂತರಿಕ ಕ್ರಿಯೆಗಳಿಗೆ ಪ್ರಾಮುಖ್ಯತೆ ನೀಡಿದರು. ವೃತ್ತಿ ರಂಗಭೂಮಿಯ ಮೇಲೆ ಸುಮಾರು ೧೯೨೦ರವರೆಗೆ ಪೌರಾಣಿಕ ನಾಟಕಗಳನ್ನೇ ಹೆಚ್ಚಾಗಿ ಪ್ರದರ್ಶಿಸಲಾಗುತ್ತಿತ್ತು. ಶರಣರ ಮತ್ತು ಸಂತರ ಬಗೆಗಿನ ನಾಟಕಗಳನ್ನು ಕ್ವಚಿತ್ತಾಗಿ ಆಡಿಸಲಾಗುತ್ತಿತ್ತು. ಆದರೂ ಅವನ್ನು ಪೌರಾಣಿಕ ವಾತಾವರಣದಲ್ಲಿಯೇ ಪ್ರದರ್ಶಿಸುತ್ತಿದ್ದುದರಿಂದ ಪ್ರೇಕ್ಷಕರು ಅವನ್ನು ಪೌರಾಣಿಕ ನಾಟಕಗಳೆಂದೇ ಕರೆಯುತ್ತಿದ್ದರು.

ಬಾಗಲಕೋಟೆಯ ಎಲ್.ಎಸ್.ಇನಾಂದಾರರು(೧೮೫೫) ಪೌರಾಣಿಕ, ಐತಿಹಾಸಿಕ ನಾಟಕಗಳ ಕ್ಷೇತ್ರದಿಂದ ಪ್ರೇಕ್ಷಕರ ಒಲವನ್ನು ಸಾಮಾಜಿಕ ನಾಟಕಗಳ ಕಡೆಗೆ ತಿರುಗಿಸಿದರು. ದಿನದ ಬಡ್ಡಿಯ ಮೇಲೆ ಸಾಲ ನೀಡಿ ಬಡವರ ಬದುಕಿಗೆ ಹಿಂಸೆ ಕೊಡುವವರ ದೌರ್ಜನ್ಯವನ್ನು ತಮ್ಮ 'ಪಠಾಣಪಾಶಾ' ಎಂಬ ನಾಟಕದಲ್ಲಿ ಚಿತ್ರಿಸಿದರು. ಕರ್ನಾತಕದ ಏಕೀಕರಣಕ್ಕೆ ಪ್ರಚೋದನೆ ಕೊಡುವ ಕಥೆಯನ್ನು 'ಹಳ್ಳಿಯಿಂದ ದಿಲ್ಲಿಯವರೆಗೆ' ಎಂಬ ನಾಟಕದಲ್ಲಿ ಚಿತ್ರಿಸಿದರು. ಇನಾಂದಾರರು ದುರ್ಭಿಕ್ಷೆ, ಧರ್ಮಪತ್ನಿ, ಜಹಾಗೀರದಾರ, ಸಾಹುಕಾರ ಎಂಬ ಸಾಮಾಜಿಕ ನಾಟಕಗಳನ್ನು ವೈಭವಶಾಲಿ ನಾಟಕ ಮಂಡಳಿಗಾಗಿ ಬರೆದು ಈ ನಾಟಕ ಮಂಡಳಿಯನ್ನು ಏಣಗಿ ಬಾಳಪ್ಪನವರ ಜೊತೆಗೆ ಕಟ್ಟಿ ನಡೆಸಿದರು.

ಕಂದಗಲ್ ಹನುಮಂತರಾಯರು (೧೮೯೫–೧೯೬೬) ಮರಾಠಿಯ ನಾಟಕಗಳಂತೆಯೇ ಕನ್ನಡದಲ್ಲಿಯೂ ನಾಟಕಗಳನ್ನು ಬರೆದು ಉತ್ತಮವಾಗಿ ಪ್ರದರ್ಶಿಸ ಬೇಕೆಂದು ಆಶಿಸಿ, ಸಂಧ್ಯಾರಾಗ ಎಂಬ ನಾಟಕಗಳನ್ನು ಗೆಳೆಯರ ತಂಡವೊಂದನ್ನು ರಚಿಸಿಕೊಂಡು ಮೊದಲ ಪ್ರಯೋಗ ನಡೆಸಿದರು. ಈ ನಾಟಕಕ್ಕೆ ಖ್ಯಾತ ಸಾಹಿತಿ ಆಲೂರ ವೆಂಕಟರಾಯರು ಮತ್ತು ಮುದವೀಡು ಕೃಷ್ಣರಾಯರಿಂದ ಮೆಚ್ಚುಗೆ ದೊರೆಯಿತು. ಆನಂತರ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯನ್ನಾದರಿಸಿ,ಭಾರತದ ಸ್ವಾತಂತ್ರ ಚಳವಳಿಗೆ ಪ್ರಚೋದನೆ ನೀಡುವ ವರಪ್ರದಾನ ಎಂಬ ಐತಿಹಾಸಿಕ ನಾಟಕ ಬರೆದರು. ಅತಿಯಾದ ಸಂಗೀತ ಅತಿಯಾದ ಅಭಿನಯವೇ ಪ್ರಧಾನ ವಾಗಿದ್ದುದನ್ನು ಬದಲಿಸಿ ನಾಟಕಗಳಲ್ಲಿ ಗದ್ಯಕ್ಕೆ ಪ್ರಾಶಸ್ತ್ಯ ನೀಡಿದರು. ಪೌರಾಣಿಕವಾಗಲಿ ಸಾಮಾಜಿಕವಾಗಲಿ ನಾಟಕಗಳಲ್ಲಿ ಪ್ರಾಸಯುಕ್ತ ಭಾಷೆ, ಅಲಂಕಾರಗಳನ್ನು ಬಳಸಿದರು. ಗ್ರಾಂಥಿಕ, ಹಳೆಗನ್ನಡ ಪದ ಪ್ರಯೋಗಗಳಿಂದ ಸಂಭಾಷಣೆಯಲ್ಲಿ ಗಂಭೀರ ಗತ್ತುಗಳನ್ನು ಮೇಳೈಸಿ ಸೇರಿಸಿ ಪಾತ್ರ ಮತ್ತು ಸನ್ನಿವೇಶಗಳಿಗೆ ಘನತೆಯನ್ನು ತಂದುಕೊಟ್ಟ ಹೆಗ್ಗಳಿಕೆ ಅವರದು. ೧೯೩೦–೪೦ರ ದಶಕದಲ್ಲಿ ಸಾಮಾಜಿಕ ನಾಟಕಗಳು ಹೇರಳವಾಗಿ ಪ್ರದರ್ಶನಗೊಂಡವು. ಸೂಳಿಬಾವಿಯ ಪಿ. ಬಿ. ಧುತ್ತರಗಿಯವರು(೧೯೨೮)

ಕಂದಗಲ್ಲರ ಮಾತಿನ ಚಮತ್ಕಾರವನ್ನೇ ತಮ್ಮ ನಾಟಕಗಳ ರಚನೆಯಲ್ಲೂ ಮುಂದುವರೆಸಿ ನಲವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಸಂಪತ್ತಿಗೆ ಸವಾಲ್ ನಾಟಕ ವಿವಿಧ ಭಾಷೆಗಳಲ್ಲಿ ಚಲನಚಿತ್ರಗೊಂಡು ಅತ್ಯಂತ ಖ್ಯಾತಿಯ ತುದಿಗೇರಿಸಿತು.

ಗುಳೇದಗುಡ್ಡದ ಎಚ್. ಆರ್. ಭಸ್ಮೆಯವರು (೧೯೨೯-೮೯) ರಾಜಕೀಯ ಮತ್ತು ಕೌಟುಂಬಿಕ ಸಮಸ್ಯೆಗಳನ್ನು ವಸ್ತುವಾಗಿಸಿ,ಸುಮಾರು ನೂರೈವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದರು.

ಶ್ರೀ ಹುಚ್ಚೇಶ್ವರ ನಾಟ್ಯ ಸಂಘದ ಬಿ. ಆರ್. ಅರಿಷಿಣಗೋಡಿ ಅವರು (೧೯೩೯) ಇಲ್ಲಿಗೆ ಬಂತೋ ಸಂಗಯ್ಯಾ, ಲಂಚ ಸಾಮ್ರಾಜ್ಯ, ಬಸ್ ಕಂಡಕ್ಟರ್, ಹೆಣ್ಣು ಮಗಳು, ಸೈನಿಕ ಸಹೋದರಿ ಮುಂತಾದ ೧೫ ನಾಟಕಗಳನ್ನು ಬರೆದಿದ್ದಾರೆ.

ಟಿ. ಕೆ. ಮಹ್ಮದ ಅಲಿ (ಹುನಗುಂದ) ಅವರು ಬಾರಕೋಲ ಮಾವಾ, ಹುಂಬ ಮೆಚ್ಚಿದ ಹುಡುಗಿ, ಸೊಸೆ ಹಾಕಿದ ಸವಾಲು, ಬಸರಕೋಡದ ಪವಾಡ ಬಸವೇಶ್ವರ ಮೊದಲಾಗಿ ಸುಮಾರು ಐವತ್ತು ನಾಟಕಗಳನ್ನು ಬರೆದಿದ್ದಾರೆ.

ಇನ್ನು ವಿಭಜಿತ ಬಿಜಾಪುರ ಜಿಲ್ಲೆಯ ವಿಷಯಕ್ಕೆ ಬಂದಾಗ ಇಂಡಿ ತಾಲೂಕಿನ ಮೋಹನಚಂದ ಕಿರಣಗಿ, ಇವರು ಆದರ್ಶ ಪ್ರೇಮ ಮತ್ತು ಅಣ್ಣತಂಗಿ ಎಂಬ ಎರಡು ನಾಟಕಗಳನ್ನು ಬರೆದು ಅನೇಕ ಸಲ ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ. ಇವರು ರಂಗಕಲಾವಿದರೂ ಅಹುದು. ಇವರಿಗೆ ೧೯೭೭ರಲ್ಲಿ ನಾಟಕ ಅಕಾಡೆಮಿಯ ಪುರಸ್ಕಾರ ದೊರೆತಿದೆ. ಆದರ್ಶ ಶಿಕ್ಷಕರಾಗಿಯೂ ಇವರು ರಾಷ್ಟ್ರ ಪ್ರಶಸ್ತಿ ಪಡೆದಿದ್ದಾರೆ.

ಭೀಮಾತೀರದ ಖೇಡಗಿಯ ಶೇಖ್ ಮೋಹಿದ್ದೀನ್ ಖೇಡಗಿಯವರು ನಾಟಕಕಾರರು, ರಂಗಕಲಾವಿದರೂ, ರಂಗನಿರ್ದೇಶಕರು, ಹವ್ಯಾಸಿ ವೃತ್ತಿರಂಗಭೂಮಿ ಕಂಪನಿ ಮಾಲೀಕರು ಆಗಿರುವ ಇವರು ತಂಗಿ ಕೊಟ್ಟ ಕಾಣಿಕೆ, ಹೇಳಿದರೆ ಹೆತ್ತವರಾಣೆ, ಮಾತು ಅಂಗಾರ ಮೌನ ಬಂಗಾರ, ಮುಂತಾಗಿ ೫೧ ನಾಟಕಗಳನ್ನು ಬರೆದಿದ್ದಾರೆ. ಇವರ ಕೆಚ್ಚೆದೆ ವೀರ ಮತ್ತು ಸಂಗೊಳ್ಳಿ ರಾಯಣ್ಣಾ ಇವರಿಗೆ ಹೆಸರುಗಳಿಸಿ ಕೊಟ್ಟ ನಾಟಕಗಳು. ಇವರು ೧೯೯೪ನೇ ಸಾಲಿನ ನಾಟಕ ಅಕಾಡೆಮಿಯ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ ಮತ್ತು ಬಿಜಾಪುರದಲ್ಲಿ ರಂಗಚೇತನ ಸಂಸ್ಥೆ(ಹವ್ಯಾಸಿ) ಮತ್ತು ವೃತ್ತಿರಂಗಭೂಮಿ ನಾಟಕಗಳ ರಾಜ್ಯದ ಏಕೈಕ ಪುಸ್ತಕ ಭಂಡಾರವನ್ನು ಸ್ಥಾಪಿಸಿ ಹೆಸರುವಾಸಿಯಾಗಿದ್ದಾರೆ.

ಗುಣದಾಳ ಗ್ರಾಮದ ಕೆ. ಎನ್. ಸಾಳುಂಕೆಯವರು(೧೯೩೬-೧೯೭೮)

ಕಂದಗಲ್ಲರ ಬಡತನದ ಭೂತ ನಾಟಕವನ್ನು ಅನುಸರಿಸಿ ಗೌರಿಶಂಕರ ಎಂಬ ನಾಟಕ ರಚಿಸಿ ಆಡಿದರು. ಹಲವಾರು ಘಟನೆಗಳನ್ನು ಆಯ್ದು ನಾಟಕಗಳನ್ನು ಬರೆದರು. ಈ ನಟರಿಗೆ ಅಭಿನಯಿಸಲು ಮತ್ತು ಉಚ್ಚರಿಸಲು ಕಷ್ಟವೆನಿಸಿದವು. ಚಲನಚಿತ್ರಗಳ ಪ್ರಭಾವವೂ ಹೆಚ್ಚಾಗತೊಡಗಿದ್ದು, ವೃತ್ತಿ ರಂಗಭೂಮಿಯು ಈ ಸ್ಪರ್ಧೆಯನ್ನೆದುರಿಸಬೇಕಾಯಿತು. ಈಅಂಶಗಳನ್ನು ಗಮನಿಸಿದ ಸಾಳುಂಕೆಯವರು ನಟರ ವ್ಯಕ್ತಿತ್ವಕ್ಕೆ, ಅವರ ಸಾಮರ್ಥ್ಯಕ್ಕೆ ಹೆಚ್ಚು ಒತ್ತು ಕೊಡದೇ ರಂಜನೀಯವಾದ ಸರಸ ಸಾಹಿತ್ಯವುಳ್ಳ ನಾಟಕಗಳನ್ನು ಬರೆದರು. ಜೀವಾನುಭವದ ದೃಷ್ಟಾಂತಗಳು, ಜನಪದ ಸೊಬಗಿನ ಹಾಡುಗಳು ಮತ್ತು ನುಡಿಮುತ್ತುಗಳು ಇವರ ನಾಟಕಗಳಲ್ಲಿನ ಆಕರ್ಷಣೆಯಾದುವು. ಇಂಥದೇ ನಟ ನಟಿಯರೇ ಬೇಕೆಂಬ ನಿಯಮಗಳಿಲ್ಲದೇ ಆಕರ್ಷಕವಾಗಿರುವ ಯಾರಾದರೂ ಸಂಭಾಷಣೆಯನ್ನು ಮಂಡಿಸುವ ಜಾಣ್ಮೆಯಲ್ಲಿ ಜನರನ್ನು ಮೆಚ್ಚಿಸಬಹುದಾದ ವಿಧಾನದಿಂದಾಗಿ ಇವರ ನಾಟಕಗಳು ಹಲವಾರು ನಾಟಕ ಮಂಡಳಿಗಳಿಂದ ಪ್ರದರ್ಶಿತಗೊಂಡು ಆ ಮಂಡಳಿಗೆ ಹಣ ಸಂಪಾದಿಸಿಕೊಟ್ಟವು. ದಾರಿದೀಪ, ಹೊಸಬಾಳು, ಕಣ್ಣಿದ್ದರೂ ಬುದ್ಧಿಬೇಕು, ಇತ್ಯಾದಿ ಗ್ರಾಮೀಣ ಮತ್ತು ನಾಗರಿಕ ಸಮಸ್ಯೆಗಳನ್ನು ಕುರಿತಾದ ಸಾಮಾಜಿಕ ನಾಟಕಗಳನ್ನು ಸಾಳುಂಕೆಯವರು ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ರಚಿಸಿದ್ದಾರೆ. ಅವರು ಮರಾಠಿಯಿಂದ ಕನ್ನಡಕ್ಕೆ ಸಾಕಷ್ಟು ನಾಟಕಗಳನ್ನು ಅನುವಾದಿಸಿ ಕೊಡುಗೆ ನೀಡಿದ್ದಾರೆ. ರಾಜಮೆಚ್ಚಿದ ದಾಸಿ, ವಿಷಕನ್ಯೆ, ಅಮೃತಕನ್ಯೆ ಹಾಗೂ ಭಕ್ತ ಮಾರ್ಕಂಡೇಯ ಎಂಬ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳನ್ನು ಇವರು ರಚಿಸಿದ್ದಾರೆ. ಇವರ 'ಬದುಕು ಬಂಗಾರವಾಯಿತು' ಮತ್ತು 'ಗುಣ ನೋಡಿ ಹೆಣ್ಣು ಕೊಡು' ನಾಟಕಗಳು ಚಲನಚಿತ್ರಗಳಾಗಿವೆ.

## ಖೇಡಗಿಯವರ ಜನನ ಮತ್ತು ಭೀಮಾತೀರ

ಬಿಜಾಪುರ ಜಿಲ್ಲೆ ಇಂಡಿ ತಾಲೂಕಿನ ಭೀಮಾ ನದಿ ದಂಡೆಯಲ್ಲಿರುವ ಚಿಕ್ಕ ಗ್ರಾಮವೇ ಖೇಡಗಿ. ಕನ್ನಡ ನಾಡಿನ ಖ್ಯಾತ ಅರಸ ಆರನೇಯ ವಿಕ್ರಮಾದಿತ್ಯನ ರಾಣಿಯ ತವರೂರು ಮತ್ತು ಬಸವರಾಜೇಂದ್ರವಿರಕ್ತ ಸ್ವಾಮಿಗಳ ಸಿದ್ಧಾರೂಢರ ಸಮಕಾಲೀನರಾದ ರಾಚಾರೂಢರ ನೆಲೆಯೂ ಹೌದು. ಐತಿಹಾಸಿಕ ಮತ್ತು ಅಧ್ಯಾತ್ಮಿಕ ಮಹತ್ವದ ಈ ಊರಿನಲ್ಲಿ ಶೇಖ್ ಮೋಹಿದ್ದೀನ್ ಖೇಡಗಿಯವರು ೧೯-೦೧-೧೯೪೩ರಲ್ಲಿ ಜನಿಸಿದರು. ಇವರ ತಂದೆ ಚಾಂದಸಾಬ, ತಾಯಿ ವಜೀರಬಿ. ಚಾಂದಸಾಹೇಬರು ೧೯೨೨ರಲ್ಲಿ ಭಾರತೀಯ ವೈಮಾನಿಕ ದಳದಲ್ಲಿ ಸಿವಿಲ್ ಡ್ರೈವರ್ ಆಗಿ ನೇಮಕಗೊಂಡಿದ್ದರು. ಅವರು ಮಿಲಿಟರಿ ಸೇರಿದಾಗ

ಹದಿನಾರರ ಪ್ರಾಯ. ೧೯೩೩ರಲ್ಲಿ ಎರಡನೆಯ ಜಾಗತಿಕ ಮಹಾಯುದ್ಧದಲ್ಲೂ ಭಾಗವಹಿಸಿ ಆರು ವರ್ಷ ಸೇವೆ ಮಾಡಿದ ಮೇಲೆ ಲೋಕಸಹಾಯಕ ಸೇನೆಯಲ್ಲಿ ಸೇವೆಗೈದು ತದನಂತರ ಪುಣೆಯಲ್ಲಿ ಸಿವಿಲ್ ಡ್ರೈವರ್ ಆಗಿ ನಿವೃತ್ತರಾದರು. ಅವರು ನಿವೃತ್ತರಾದಮೇಲೆ ತಲವಾರನ್ನು ಕಾಣಿಕೆಯಾಗಿ ಸಮರ್ಪಿಸಲಾಗಿತ್ತು.

ಖೇಡಗಿಯವರ ಪೂರ್ವಿಕರು ಮಹಾರಾಷ್ಟ್ರದ ಅಕ್ಕಲಕೋಟ ತಾಲೂಕು ಕಡಬಗಾವ ಮೂಲದವರು. ೧೯೪೭ರಿಂದ ಈಚೆಗೆ ಪ್ರಾರಂಭಗೊಂಡ ರಜಾಕಾರ ಹಾವಳಿಯಲ್ಲಿ ಈ ಕುಟುಂಬ ಬಂದು ಕನ್ನಡ ನಾಡಿನ ಖೇಡಗಿಯಲ್ಲಿ ಸುರಕ್ಷಾನೆಲೆ ಕಂಡುಕೊಂಡಿತು. ಚಾಂದಸಾಬ್ ಮತ್ತು ವಜೀರಬಿ ದಂಪತಿಗಳಿಗೆ ಒಟ್ಟು ಏಳು ಜನ ಮಕ್ಕಳು. ಶೇಖ್ ಮೊಹಿದ್ದೀನ್, ಮಹಾಬೂಬಿ, ಖಾಜಾಸಾಬ್, ಶಮಶಾದಬೇಗಂ, ಶೌಕತ್ ಅಲಿ, ಅಬ್ದುಲ ಅಜೀಜ ಮತ್ತು ಪಾಕೀಜಾ ಹೀಗೆ ಒಟ್ಟು ನಾಲ್ಕು ಗಂಡು, ಮೂರು ಹೆಣ್ಣು. ಇವರೆಲ್ಲರೂ ವಿದ್ಯಾವಂತರು.

## ಖೇಡಗಿ ಪರಿಸರ

ವಿರಕ್ತರ ಮತ್ತು ಆರೂಢರ ನೆಲೆಯಾಗಿದ್ದ ಖೇಡಗಿಯಲ್ಲಿ ಅಧ್ಯಾತ್ಮಿಕ ಪರಿಸರ ಪಸರಿಸಲು ಈ ನೆಲೆಗಳು ಬಹುಕಾರಣ. ಆರೂಢ ಪರಂಪರೆಯ ರಾಚರೂಢ ಸ್ವಾಮಿಗಳು ನೀಲಿ ಹೊತ್ತಿಗೆಯನ್ನು ಕರತಲಾಮಲಕ ಮಾಡಿಕೊಂಡಿದ್ದರು. ಅವರು ದರ್ಪಿಷ್ಟ ವಾಮಾಚಾರಿಗಳ ಹುಟ್ಟನ್ನಡಗಿಸಿದವರು ಮತ್ತು ಹಣಿದವರು. ಊರಿಗೆ ಆಗಮಿಸಿದ ಯಾವನೇ ಮಾಟ ಮಂತ್ರದವರು ರಾಚಾರೂಢರನ್ನು ಮೊದಲಿಗೆ ಭೇಟಿಯಾಗಿಯೇ ಬರುತ್ತಿದ್ದರು. ಇವೆಲ್ಲವುಗಳನ್ನು ಕಣ್ತುಂಬ ನೋಡುತ್ತ ಆಡ್ತಾ ಆಡ್ತಾ ಇದ್ದ ಶೇಖ್ ಮೊಹಿದ್ದೀನನ ಮೇಲೆ ಅರಿವಿಲ್ಲದಂತೆ ಬೇರುಬಿಟ್ಟುಕೊಂಡವು. ಖೇಡಗಿ ಗ್ರಾಮವು ಮಹಾನ್ ವಿದ್ವತ್ತುಳ್ಳ ಪ್ರತಿಭಾಶಾಲಿಗಳ ಗ್ರಾಮವೆಂದು ಬೇರೆ ಹೇಳಬೇಕಿಲ್ಲ. ಆ ಗ್ರಾಮದಲ್ಲಿದ್ದುದು ಎಪ್ಪತ್ತು ಮನೆಗಳು. ಶಿಕ್ಷಣ ಮುಗಿಸಿ ಮಿಲಿಟರಿಯೋ, ಮಾಸ್ತರಿಕೆಗೋ , ಅಂಚೆಕಛೇರಿಗೋ ಸೇರಿಕೊಂಡವರೇ ಬಹಳ ಜನ. ಹಿಡಿ ಗಾತ್ರದ ಊರು ತನ್ನೊಡಲಲ್ಲಿ ಅನೇಕ ಪ್ರತಿಭಾಶಾಲಿಗಳನ್ನು ಸಾಕಿಕೊಂಡಿತ್ತು. ಈ ಅಸಾಮಾನ್ಯ ಪ್ರತಿಭೆಗಳು ಖೇಡಗಿ ಗ್ರಾಮದ ಕೀರ್ತಿಯನ್ನು ಪಸರಿಸಲು ಬಹುಕಾರಣರು. ಊರಲ್ಲಿ ಬಯಲಾಟ, ರಾಧಾನಾಟ, ಮಲ್ಲಮ್ಮನಾಟ, ನಂಬೆಕ್ಕನಾಟಗಳು ನಡೆಯುತ್ತಿದ್ದವು. ಸಿನೆಮಾ ಸರ್ಕಸು ನೋಡಲು ಮಾತ್ರ ಇಂಡಿಗೋ ಬಿಜಾಪುರಕ್ಕೋ ಹೋಗಬೇಕಾಗುತ್ತಿತ್ತು.

## ಶಾಲೆಗೆ ಚಕ್ಕರ್... ಹಲಸಂಗಿಗೆ ಹಾಜರ್

ಶೇಖ್ ಮೊಹಿದ್ದೀನರ ಮಾತೃಭಾಷೆ ಉರ್ದು. ಆಗಿನ ಕಾಲದಲ್ಲಿ ಒಂದೋ ಎರಡೋ ಮುಸ್ಲಿಂ ಸಮುದಾಯದವರ ಮನೆಗಳು ಗ್ರಾಮಗಳಲ್ಲಿ ಕಂಡುಬರುತ್ತಿದ್ದವು. ಉರ್ದು ಶಾಲೆಗಳು ಈಗೀಗ ಹೆಚ್ಚುಕಡಿಮೆ ದೊಡ್ಡ ಗ್ರಾಮಗಳಲ್ಲಿ ಕಂಡುಬರುತ್ತವೆ. ಗ್ರಾಮಗಳಲ್ಲಿ ವಾಸಕ್ಕಿದ್ದ ವಿವಿಧ ಭಾಷಿಕರು ಆಯ್ದುಕೊಳ್ಳುತ್ತಿದ್ದುದು ಕನ್ನಡ ಮಾಧ್ಯಮ ಶಾಲೆಗಳನ್ನು. ಖೇಡಗಿ ಗ್ರಾಮದಲ್ಲಿ ಶೇಖ್ ಮೊಹಿದ್ದೀನ್ ಏಳನೇಯ ತರಗತಿಯವರೆಗೆ ಓದಿದರು. ಅಭ್ಯಾಸದ ಕಡೆಗೆ ನೆಟ್ಟಗೆ ಲಕ್ಷ್ಯವಹಿಸದ ಶೇಖ್ ಮೊಹಿದ್ದೀನ್ ಗುಡಿ ಗುಂಡಾರ ಸುತ್ತಮುತ್ತ ಆಡುತ್ತ, ಹುಡುಗರೊಡನೆ ಜಿಗಿದಾಡುತ್ತ, ಜಗಳಾಡುತ್ತ ಬಯಲಾಟ, ಪಾರಿಜಾತ, ನಾಟಕ ಎಂದು ಶಾಲೆ ಬಿಟ್ಟು ತಿರುಗುತ್ತ ಹಾಗೂ ಹೀಗೂ ಮಾಡಿ ಮುಲ್ಕಿಯಲ್ಲಿ ಜಯಸಾಧಿಸಿದರು. ಬಾಲಕನಾಗಿದ್ದಾಗ ಯಾರ್‍ಯಾರೋ ಒಯ್ದು ಶಾಲೆಗೆ ಬಿಟ್ಟುಬರುತ್ತಿದ್ದರು, ಅವರೆಲ್ಲರ ಕಣ್ಣು ತಪ್ಪಿಸಿ ಊರೂರು ಸುತ್ತಲಿಕ್ಕೆ ಹೋಗುತ್ತಿದ್ದ ಬಾಲಕ ಊರಲ್ಲಿ ಎಲ್ಲರಿಗೂ ತಲೆನೋವು ಆಗಿದ್ದ. ಶ್ಯಾಣೇತನ ರಗಡಿತ್ತು ಆದರ ಕುಂತ ಓದುವ ಸುಳಿಯವನಾಗಿದ್ದ. ಒಮ್ಮೆ ಹಲಸಂಗಿಯಲ್ಲಿ ಗೆಳೆಯರ ಬಳಗದ ವತಿಯಿಂದ ಕವಿಗೋಷ್ಠಿಯೊಂದನ್ನು ಹಮ್ಮಿಕೊಳ್ಳಲಾಗಿತ್ತು. ಬೇಂದ್ರೆ, ಮಧುರಚೆನ್ನರು ಆ ಗೋಷ್ಠಿಯಲ್ಲಿದ್ದರು. ಅವರು ಕವನ ಓದುವ ಶೈಲಿ, ಬಳಸು ಭಾಷೆ ಎಲ್ಲರ ಕಣ್ಣುತಪ್ಪಿಸಿ ಅಲ್ಲಿಗೆ ಹೋಗಿದ್ದ ಶೇಖ್ ಮೊಹಿದ್ದೀನನನ್ನು ಆಕರ್ಷಿಸದೇ ಬಿಡಲಿಲ್ಲ. ಈತ ಹೀಗೆಲ್ಲ ಶಾಲೆ ಬಿಡುವುದು ಊರೂರು ಸುತ್ತುವುದನ್ನು ನೋಡಿದ ಹಿರಿಯರೊಬ್ಬರು "ನೀನು ಮನಸ್ಸಕೊಟ್ಟ ಸಾಲಿ ಕಲತರ.. ನಿನ್ನಂಥವರು ನಾಲ್ಕು ಜನ ಆಗ್ತಾರ" ಎನ್ನುವ ಬೋಧೆಗೆ ಈ ಹುಡುಗ ಕಿವಿಗೊಡಲಿಲ್ಲ. ಸಿರಿವಂತರ ಮಕ್ಕಳ ಜೊತೆಗೆ ಬರೀ ವಿರೋಧ ಕಟ್ಟಿಕೊಂಡಿದ್ದ. ಸಿರಿವಂತರ ಸೊಕ್ಕು ವಿರೋದಿಸುವ ನಿಲುವು ನಿಧಾನವಾಗಿ ಅಂಕುರಿಸತೊಡಗಿತ್ತು.

## ಹಾಂಗೂ ಹಿಂಗೂ ಮ್ಯಾಟ್ರಿಕ್ ಪಾಸ್...

ಶೇಖ್ ಮೊಹಿದ್ದೀನ ಊರಾಗ ಉಡಾಳಗಿರಿ ಮಾಡುತ್ತ, ಆಟ ಅಡುತ್ತ, ನೆನಪಾದಾಗೊಮ್ಮೆ ಶಾಲೆಗೆ ಹೋಗಿ ಏಳನೆತ್ತೆ ಪಾಸಾಗಿದ್ದು ಒಂದುಕಡೆಗಿರಲಿ, ಶಾಲೆಗೆ ಹೋಗದೇನೇ ಮ್ಯಾಟ್ರಿಕ್ ಪಾಸಾದ. ಯಾರೋ ಹೋಗಿ ಹೆಸರು ಹಚ್ಚಿದರು. ಆಗ ಮ್ಯಾಟ್ರಿಕ್ ಪರೀಕ್ಷೆ ಕೇಂದ್ರ ಹಲಸಂಗಿಯಲ್ಲಿತ್ತು. ನೇರವಾಗಿ ಪರೀಕ್ಷೆಗೆ ಮಾತ್ರ ಹೋದ ಈತ ಓದದೇ ಪಾಸಾಗಿದ್ದುದು ಬೆರಗು ಹುಟ್ಟಿಸುತ್ತದೆ.

## ಗಜ್ಜರಿಕಾಯಿ ತಿಂದು ನೀರು ಕುಡದಂಗ್. .

ಶೇಖ್ ಮೊಹಿದ್ದೀನನಿಗೆ ಸಂಬಂಧಿಗಳಲ್ಲೊಬ್ಬರು ಈತ ಮ್ಯಾಟ್ರಿಕ್ ಪಾಸಾದ ಮೇಲೆ ಹೆಣ್ಣು ಕೊಡುತ್ತೇವೆಂದು ಮಾತು ಕೊಟ್ಟಿದ್ದರು. ಮ್ಯಾಟ್ರಿಕುಲೇಶನ್ ಮುಗಿದ ಮೇಲೆ ಆ ಕನ್ಯೆ ನೋಡಲಿಕ್ಕೆ ಹೋದಾಗ ಕನ್ಯೆಯ ತಂದೆ ಊರು ಉಡಾಳನೆಂದು ಜಗದ್ಜಾಹಿರಾತಾಗಿದ್ದ ಈತನಿಗೆ ಹೆಣ್ಣುಕೊಡಲಿಕ್ಕೆ ಅಂಜಿಬಿಟ್ಟ. ಊರು ತುಂಬ ಒಂದೇ ಧ್ವನಿ ಕೇಳಿಬರುತ್ತಿತ್ತು. "ವಜೀರಬಾಯಿಯ ಮಗ ಶೇಖ್ಯಾಗ ಕನ್ಯಾ ಕೊಟ್ಟಿರೆಂದರ ಗಜ್ಜರಿಕಾಯಿ ತಿಂದು ನೀರು ಕುಡದಂಗ್" ಅಂತ ಸಾರಾಸಪಾಟಾಗಿ ಢಂಗರಾ ಹೊಡೆದಂಗ ಹೇಳಿಬಿಡ್ತಿದ್ದರು. ಇದು ಒಂದು ನಮೂನೆಯಾದರ ಇನ್ನು ಕೆಲವು ಕನ್ಯಾ ಪಿತೃಗಳ "ಈ ಹುಡುಗುಗ ನಾಟಕದ ಹುಚ್ಚು ತಲಿಗೇರ್ಯೆತಿ, ಅವನಿಗಿ ಹೊಲ ಇಲ್ಲ ಮನಿ ಇಲ್ಲ ಉಡಾಳಗಿರಿನ ಅವನ ಆಸ್ತಿ, ಕನ್ಯಾ ಕೊಡಲ್ಲಿಪ್ಪೋ ಕೊಡಲ್ಲ. . " ಎಂದು ಒಲ್ಯಾಗ ನೀರು ಹಾಕಿದಂಗ ಮಾತಾಡಿಬಿಡ್ತಿದ್ರು.

## "ಹುಡುಗ ಭಾಳ ಭಲೋ. . ಆಧ್ರ ಸುಳಿ ಸುಮಾರ"

ಕನ್ಯಾ ಪಿತೃಗಳ ಬಿರುನುಡಿಗಳು ಶೇಖ್ ಮೊಹಿದ್ದೀನನ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಿದ್ದಲ್ಲದೇ ಈತನ ಉಡಾಳಗಿರಿಯೇ ಈ ಸ್ಥಿತಿಗೆ ಮೂಲ ಕಾರಣ ಅಂತ ತಂದೆ ತಾಯಿಗಳಿಗೆಲ್ಲ ಸಂಕಟಕ್ಕಿಟ್ಟುಕೊಂಡು ಬಿಟ್ಟಿತು. ಈ ಪರಿಸ್ಥಿತಿ ದೂರಗೊಳಿಸಲೋಸುಗ ಇವರ ಚಿಕ್ಕಮ್ಮನ ಗಂಡನೊಬ್ಬ ಮಾಸ್ತರಿಕೆ ಮಾಡಿಕೊಂಡಿದ್ದ. ಆತ ಮಧ್ಯ ಪ್ರವೇಶ ಮಾಡಿ ಆಗಾಗ ಬಂದು ಕನ್ಯೆ ನೋಡಲಿಕ್ಕೆ ಶೇಖ್ ಮೊಹಿದ್ದೀನರನ್ನು ಕರೆದುಕೊಂಡು ಹೋಗುತ್ತಿದ್ದ. ಅವರೆದುರಿಗೆ ಈ ಮಾಸ್ತರ ಶೇಖ್ ಮೊಹಿದ್ದೀನನ ತಾರೀಫು ಮಾಡುವ ಬಗೆ ಹೀಗಿತ್ತು "ಹುಡುಗೇನೋ ಭಲೋ ಅದಾನ್ರೀ.. ಸುಳಿ ಒಂಥ ಸುಮಾರದ್ರೀ". ಮಾಸ್ತರನ ತಾರೀಫಿನಲ್ಲಿ ನಿರ್ಭಿಡೆ ಮತ್ತು ನೇರತೆ ಇತ್ತು. ಕನ್ಯಾಪಿತೃಗಳು ಇಂಥಾ ಹುಡುಗನ ಉಸಾಬರಿ ಬೇಡೆಂದು ಸಂಬಂಧ ನಿರಾಕರಿಸುವುದು, ನಿತ್ಯ ನಿರಂತರವಾಯಿತು. ಶೇಖ್ ಮೊಹಿದ್ದೀನ್ ಆ ಮಾಸ್ತರ ಸಾಹೇಬನಿಗೆ ಹಿಂಗೇಕೆ ಹೇಳ್ತೀಯೋ ಕಾಕಾ ಎಂದು ಕೇಳಿದರೆ "ನಾ ಇದ್ದದ್ದ ಹೇಳೀನಿ, ಬ್ಯಾರೆ ಏನ್ ಹೇಳೀನೋ ಮಗನಾ" ಅಂತ ಬೆದರಿಸಿ ಬಾಯಿಗೆ ಹೊಲಿಗೆ ಹಾಕಿ ಬಿಡುತ್ತಿದ್ದ.

## ನಾಟಕಕಾರನಾಗಲು – 'ಬೇಸಮೆಂಟ್'.

ಇವರ ಸೋದರ ಮಾವನು ನಾಟಕ ಕಂಪನಿ ಸೇರಿ ಭಾರಿ ಫೇಮಸ್ ಆಗಿದ್ದ. ಅವನು ಆಡುತ್ತಿದ್ದ ನಾಟಕಗಳನ್ನು ಮತ್ತು ಖೇಡಗಿಯಲ್ಲಿ ಅಮೇಚುರ್

ಕಂಪನಿಗಳು ಆಡುತ್ತಿದ್ದ ನಾಟಕಗಳನ್ನು ನೋಡುತ್ತ ನೋಡುತ್ತ 'ಬರೆದರೆ ನಾಟಕವನ್ನೇ ಬರೀಬೇಕು' ಎಂದು ಅಂತರಾಳ ಪಿಸುಗುಡುತ್ತಿತ್ತು. ಖ್ಯಾತ ಕನ್ನಡ ನಾಟಕಕಾರರ ಒಂದಿಷ್ಟು ಸಂಭಾಷಣೆಗಳನ್ನು ಕದ್ದು ತಮ್ಮೊಂದಿಷ್ಟು ನಾಟಕದ ಸಂಭಾಷಣೆಗಳನ್ನು ಸೇರಿಸಿ ಮೇಲೆ ಕೆಳಗೆ ಮಾಡಿ ಕೃತಿಚೌರ್ಯದ ವಾಸನೆ ಬಡಿಯದಂತೆ ಪಂಡಿತರಲ್ಲದವರ ಮುಂದೆ ಆ ಸಂಭಾಷಣೆಗಳನ್ನು ಗತ್ತಿನಿಂದ ಹೇಳಿ, ಅಭಿನಯಿಸಿ ಶೇಖ್ ಮೊಹಿದ್ದೀನ್ ತೋರಿಸುತ್ತಿದ್ದರು. ಪ್ರತಿಯಾಗಿ ಅವರಿಂದ 'ಭಾರಿ ಐತಿ' 'ಬೆಸ್ಟ್ ಬರದೀ', 'ಭಾರೀ ಶ್ಯಾಣೆ ಅದಿ' ಎನ್ನುವ ನುಡಿಚಪ್ಪರಿಕೆಗಳು ಸಿಗುತ್ತಿದ್ದವು. ನಾಟಕದ ಎ. ಬಿ. ಸಿ. ಡಿ ಗೊತ್ತಿಲ್ಲದ ಆ ಜನರ ಶಹಬ್ಬಾಸಗಿರಿಗಳು ಸಂಪೂರ್ಣವಾಗಿ ಸ್ವಂತ ನಾಟಕವನ್ನು ಬರೆಯಲು ಪೀಠಿಕೆ ಹಾಕಿದವು. ಶ್ಯಾಣೆ ಜನರ ಎದುರಿಗೆ ಮತ್ತೊಬ್ಬ ಶ್ಯಾಣ್ಯಾ ಕಾಲಕಸವಾಗಿ ಕಾಣುತ್ತಾನೆ ಎನ್ನುವ ಶೇಖ್ ಮೊಹಿದ್ದೀನ್‌ರ ತಂತ್ರ ಈ ನಿಟ್ಟಿನಲ್ಲಿ ಮುಳ್ಳಿಲ್ಲದ ಹಾದಿಯನ್ನೇ ತೋರಿಸಿತು.

## ನಾಟ್ಯಕವಿರಾಜರ ಸಾತ್ವಿಕ ಕೋಪವೂ ಅಭಿಮಾನವೂ

ಕನ್ನಡ ವೃತ್ತಿರಂಗಭೂಮಿ ನಾಟಕಕಾರರಲ್ಲಿ ಕಂದಗಲ್ಲ ಹನುಮಂತರಾಯರು, ನಲವಡಿ ಶ್ರೀಕಂಠ ಶಾಸ್ತ್ರಿಗಳು, ಚಿಕ್ಕೋಡಿಯ ಶಿವಲಿಂಗ ಶಾಸ್ತ್ರಿಗಳು, ಗದುಗಿನ ಎಚ್. ಟಿ. ಮಹಾಂತೇಶ ಶಾಸ್ತ್ರಿಗಳದ್ದು ದೊಡ್ಡ ಹೆಸರು. ಆಗಿನ ಕಾಲದಲ್ಲಿ ನಾಟಕ ಬರೆಯುವವರು ದೊಡ್ಡ ಪಂಡಿತರೇ ಆಗಿರುತ್ತಿದ್ದರು. ಪ್ರಮುಖವಾಗಿ ಹಳೆಗನ್ನಡ ಸಾಹಿತ್ಯದ ಅಧ್ಯಯನ ಮಾಡಿಕೊಂಡೇ ರಂಗಸಾಹಿತ್ಯದ ಫೀಲ್ಡಿಗೆ ಇಳಿಯುತ್ತಿದ್ದರು. ಎಚ್. ಟಿ. ಮಹಾಂತೇಶ ಶಾಸ್ತ್ರಿಗಳಿಗೆ ನಾಟ್ಯಕವಿರಾಜ ಎಂಬ ಬಿರುದಿದೆ. ೧೯೬೫ರಲ್ಲಿ ಶೇಖ್ ಮೊಹಿದ್ದೀನ್ ಖೇಡಗಿಯವರು ಸೌದತ್ತಿ ಕ್ಯಾಂಪಿನಲ್ಲಿ ಮಹಾಂತೇಶ ಶಾಸ್ತ್ರಿಗಳ ಸೇವೆ ಮಾಡುತ್ತಿದ್ದರು. ಶಾಸ್ತ್ರಿಗಳು ಆ ಕಂಪನಿಗೆ ತಮ್ಮದೇ ನಾಟಕ ಕಲಿಸಲು ಬಂದಿದ್ದರು. ನಾಟಕದ ಒಂದು ಸಂಭಾಷಣೆಯಲ್ಲಿ ಆಕಸ್ಮಿಕವಾಗಿ ಸೊನ್ನೆಯೊಂದು ಸೇರಿಕೊಂಡು ಬಿಟ್ಟಿತು. ಶೇಖ್ ಮೊಹಿದ್ದೀನರು "ಈ ಡೈಲಾಗ್‌ನ್ಯಾಗ ಪೂಜಿ ಸೇರಿಬಿಟ್ಟೈತಿ ಅದು ಸರಿಯೇನ್ರಿ ಶಾಸ್ತ್ರೀಗಳೇ?" ಎಂದು ಕೇಳಿದಾಗ ಅವರು ದುರುಗುಟ್ಟಿಕೊಂಡು "ಲೇ ಸಾಹೇಬಾ, ನನ್ನ ಸೇವಾ ಮಾಡಾಕ ನಿನಗಿಟ್ಟಾರೋ ನಿನ್ನ ಸೇವಾ ಮಾಡಾಕ ನನಗಿಟ್ಟಾರೋ, ನೀನು ಮ್ಯಾಗ್ ಎಷ್ಟ್ ಅದಿ ಕೆಳಗೂ ಎಷ್ಟೇ ಅದಿ" ಎಂದು ಒಳಗೊಳಗೇ ಈತ ಮಾಡಿದ ದೋಷನಿದಾನಕ್ಕೆ ಅಭಿಮಾನ ಪಡುತ್ತ ಮೇಲೆ ನಸುಕೋಪದಿಂದ ನುಡಿದರು. ಒಂದು ರೀತಿಯಲ್ಲಿ ಅವರು ಈತನ

ಪಾಂಡಿತ್ಯವನ್ನು ಅಳೆದುಬಿಟ್ಟಂತಾಗಿತ್ತು. ಶಾಸ್ತ್ರಿಗಳ ಸೇವೆ ಮತ್ತು ಒಡನಾಟಗಳಿಂದ ಖೇಡಗಿಯವರ ರಂಗಸಾಹಿತ್ಯ ಪ್ರಬಲವಾಗುತ್ತ, ಹುರಿಗಟ್ಟುತ್ತ ಹೋಯಿತು. ಮತ್ತೊಮ್ಮೆ ಆ ಶಾಸ್ತ್ರಿಗಳು ಖೇಡಗಿಯವರಿಗೆ ಈ ಕಿವಿಮಾತನ್ನು ಉಸುರಿದರು. "ನಿನಗಿಂತ ದೊಡ್ಡವರಾದವರ ಜೋಡಿ ಸಹವಾಸ ಮಾಡಿದರ ಮಿಂಚತೀದಿ, ಇರದಿದ್ದರ ಹಾಳಾಗತೀದಿ". ಖೇಡಗಿಯವರು ಮೊದಲ ಸಾಲನ್ನು ಮಾತ್ರ ಆಯ್ದುಕೊಂಡರು. ಗುರುಬೋಧೆ ಶಿಷ್ಯನನ್ನು ಪರ್ವತದಂತೆ ಬೆಳೆಯಿಸುವಲ್ಲಿ ಮೈಲುಗಲ್ಲಾಯಿತೆಂದು ಬೇರೆ ಹೇಳಬೇಕಿಲ್ಲ.

## ಮೊದಲ 'ಕಾಣಿಕೆ' (ರಂಗಪ್ರವೇಶ... ನಿರ್ದೇಶನ)

ಖೇಡಗಿಯವರ ತಾಯಿಯ ತಮ್ಮ ನಾಟಕದ ಗೀಳು ಬೆಳೆಸಿಕೊಂಡು ಈಗಾಗಲೇ ದೊಡ್ಡ ನಟನಾಗಿ ಬೆಳೆದಿದ್ದ. ಅವನು ಆಡುವ ಕಂಪನಿಗಳಿಗೆ ಬಾಲಕ ಶೇಖ್ ಮೊಹಿದ್ದೀನನಿಗೆ ಕರೆದೊಯ್ಯುತ್ತಿದ್ದ. ಈ ಹುಡುಗನಲ್ಲಿ ತುಡಿತ ಇರುವುದರಿಂದ ಪಾತ್ರಗಿಟ್ಟಿಸಲು ಹೆಚ್ಚು ಪರದಾಡಬೇಕಾಗಲಿಲ್ಲ. ೧೯೬೩ರಲ್ಲಿ ಪಟ್ಟದಕಲ್ಲಿನ ಬಸಯ್ಯನವರ ಕಂಪನಿಯಲ್ಲಿ ಶೇಖ್ ಮೊಹಿದ್ದೀನ್ ಪಾತ್ರಕ್ಕೆ ಬಣ್ಣ ಬಳಿದುಕೊಂಡು ಮೊದಲ ಅಡಿಯಿಟ್ಟರು. ನಾಟಕದ ಗೀಳು ಕ್ಯಾಸ್ಟಿಂಗ್‌ನ ಮೂಲಕ ಅನಾವರಣ ಗೊಂಡಿತು. ೧೯೬೭ರಲ್ಲಿ ಪಡೆಸೂರ ಬಸವರಾಜರ ಕಂಪನಿಗೆ ಬರೆದ ಮೊದಲ ಸಾಮಾಜಿಕ ನಾಟಕ 'ಕಾಣಿಕೆ' ಸಿದ್ಧಪಡಿಸಿಕೊಟ್ಟು ಅದರ ನಿರ್ದೇಶನವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

## ನಿಶ್ಚಯಕಾರಣ ಮತ್ತು ಅಪ್ಪಾಲಾಲ ಕಂಪನಿ

ಹೆಣ್ಣುಕೊಡಲಿಕ್ಕೆ ಕನ್ಯಾಪಿತೃಗಳು ನಿರಾಕರಿಸುತ್ತಿರುವುದನ್ನು ದೊಡ್ಡ ಸವಾಲಾಗಿ ತೆಗೆದುಕೊಂಡ ಖೇಡಗಿಯವರ ಅಜ್ಜ(ಅವ್ವನ ಚಿಕ್ಕಪ್ಪ) ನೇತೃತ್ವ ವಹಿಸಿ ೧೯೬೫ರಲ್ಲಿ ಬಿಜಾಪುರ ತಾಲೂಕಿನ ಶಿವಣಗಿ ಗ್ರಾಮದ ಮುಮತಾಜ್(ಸಲೀಮಾ) ಜೊತೆ ಸಂಬಂಧವನ್ನು ಕುದುರಿಸಿಬಿಟ್ಟರು. ಖೇಡಗಿ ನಿಶ್ಚಯಕಾರಣ ನಡೆಯುವಾಗ ಹೋಗಿದ್ದು ಬಿಜಾಪುರದಲ್ಲಿ ಕ್ಯಾಂಪ್ ಹಾಕಿದ್ದ ಅಪ್ಪಾಲಾಲ್‌ರು ಖೇಡಗಿಯವರು ಕನ್ಯೆಯ ವಿಷಯವಾಗಿ ಮಾತನಾಡಲು ಇನ್ನೇನು ಬರಬೇಕೆನ್ನುವಷ್ಟರಲ್ಲಿ ನಿಶ್ಚಯಕಾರಣವಾದ ಸುದ್ದಿ ಕೇಳಿ ಮರಳಿಬಂದರಂತೆ. ಖೇಡಗಿಯವರಿಂದ ಮುಂದುವರೆದ ನಾಟಕದ ಹುಚ್ಚು ಬೀಗರು ಹೆಣ್ಣು ಕೊಡುವುದಿಲ್ಲವೆಂದು ಕ್ಯಾತೆ ತೆಗೆಯುವವರೆಗೆ ಬಂತು. ಹಂಗೂ ಹಿಂಗೂ ಮಾಡಿ ೧೯೬೮ರಲ್ಲಿ ಮದುವೆ ಕಾರ್ಯ ಮುಕ್ತಾಯಗೊಂಡಿತು. ಖೇಡಗಿಯವರೀಗ ಹೆಜ್ಜೆ ಹಾಕಿದ್ದು ಒಂದು

ನಾಟಕದ ಕಡೆ ಮತ್ತೊಂದು ಸಂಸಾರದ ಕಡೆಗೆ. ಅವರಿಗೆ ಎರಡೂ ಒಲಿದವು. ಶ್ರದ್ಧಾವಂತನಿಗೆ, ಬದ್ಧನಾದವನಿಗೆ ಬಾಳು, ವೃತ್ತಿಗಳು ಸುಗಮವಲ್ಲದೇ ಇನ್ನೇನು?

## ದೊಡ್ಡ ಪಗಾರ

ಮದುವೆ ನಂತರ ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕಂಪನಿಯಲ್ಲಿ ದೊಡ್ಡ ನಟನಾಗಿ ಹೆಸರುಗಳಿಸಿದ ಖೇಡಗಿಯವರಿಗೆ ನಿಜವಾಗಲು ಶುಕ್ರದೆಸೆ. ಅವರು ಪಡೆಯುತ್ತಿದ್ದ ಸಂಬಳ ೧೨೫ರೂಪಾಯಿ. ಇವರಿಗಿಂತಲೂ ಎರಡು ದಶಕಗಳ ಹಿಂದಿನ ನಟರಿಗೆ ಸಿಗುತ್ತಿದ್ದುದು ೬-೧೦ರೂಪಾಯಿ ಪಗಾರ. ಖೇಡಗಿಯವರ ಈ ಪಗಾರ ಅಂದಿನ ಕಾಲದ ದೊಡ್ಡ ಅಧಿಕಾರಿಯೂ ಪಡೆಯದ ಭಾರಿ ಮೊತ್ತ. ಮುಂದೆ ಚಿತ್ತರಗಿ ಕಂಪನಿ ಬಿಟ್ಟು ೧೯೭೮ರ ವರೆಗೆ ನಾಟಕಗಳನ್ನು ಬರೆಯಲಿಕ್ಕೆ ಶುರುಹಚ್ಚಿಕೊಂಡರು. ಚಿತ್ತರಗಿ ಕಂಪನಿಯ ಒಂದು ವಿಶೇಷತೆಯೆಂದರೆ ಅವರು ಬಹಳ ಅಚ್ಚುಕಟ್ಟಾಗಿ ನಾಟಕಗಳನ್ನು ಆಡುತ್ತಿದ್ದುದು. ಒಂದು ನಾಟಕ ಬದಲಾದರೆ ಮುಂದಿನ ನಾಟಕದಲ್ಲಿ ಮೊದಲ ನಾಟಕಕ್ಕೆ ಬಳಸಿದ ಬ್ಯಾನರ್, ಸೀನರಿ, ಡ್ರೆಸ್‌ಗಳು ಬಳಸಲಾಗುತ್ತಿರಲಿಲ್ಲ. ಒಂದೊಂದು ನಾಟಕ ೧೫೦ರಿಂದ ೨೦೦ ಪ್ರಯೋಗಗಳನ್ನು ಕಾಣುತ್ತಿತ್ತು.

## ದುರಂತದಲ್ಲೂ ಮೆರೆದ ಶ್ರದ್ಧೆ... ಪೂರ್ಣಗೊಳಿಸಿದ ಜವಾಬ್ದಾರಿ.

೧೯೭೨ರಲ್ಲಿ ಧುತ್ತರಗಿ ಕಂಪನಿ ಇಲಕಲ್ಲಿನಲ್ಲಿ ಕ್ಯಾಂಪ್ ಹಾಕಿತ್ತು. ಖೇಡಗಿಯವರ ಸೋದರ ಮಾವನದು ಅದರಲ್ಲಿ ಪ್ರಮುಖ ಪಾತ್ರ, ಖೇಡಗಿಯವರದು ಕಿರುಪಾತ್ರ. ಖೇಡಗಿಯವರ ಮಾವ ತಾತ್ಕಾಲಿಕವಾಗಿ ಇಲಕಲ್ಲಿನಲ್ಲಿ ಮನೆ ಮಾಡಿಕೊಂಡಿದ್ದರು. ಅವರ ಚಿಕ್ಕ ಮಕ್ಕಳಿಬ್ಬರು ಕಾಯಿಲೆಯಿಂದ ಏಕಾಏಕಿ ಏಕಕಾಲಕ್ಕೆ ಅಸುನೀಗಿದವು. ಇನ್ನೊಂದು ತಾಸಿನಲ್ಲಿ ನಾಟಕ ಶುರುವಾಗುತ್ತದೆ. ಬಿಟ್ಟರೆ ಅನ್ನಕ್ಕೆ ಕಲ್ಲು ಬೀಳುತ್ತದೆ. ಏನು ಮಾಡುವುದು ಎಂಬ ಆತಂಕದಿಂದ ಮಕ್ಕಳಿಬ್ಬರ ಹೆಣವನ್ನು ಬಟ್ಟೆಯಲ್ಲಿ ಸುತ್ತಿ, ಮನೆಗೆ ಕೀಲಿ ಹಾಕಿ ಅಳಿಯ ಮಾವ ಇಬ್ಬರೂ ಸ್ಟೇಜ್‌ಮೇಲೆ ಜವಾಬ್ದಾರಿಯನ್ನು ಪೂರ್ಣಗೊಳಿಸಿದರು. ಮುಖದ ಮೇಲೆ ಅಳುಕಿನ ಛಾಯೆ ಎಲ್ಲೂ ಕಂಡಿರಬಾರದು ಎಂದು ಬಹಳ ಎಚ್ಚರಿಕೆ ವಹಿಸಿದ್ದರು. ನಾಟಕ ಮುಗಿದಮೇಲ್ ನಡೆದ ಹಕೀಕತ್ತನ್ನು ಎಲ್ಲರಿಗೆ ತಿಳಿಸಿ ಆದರ್ಶ ಮೆರೆದರು.

## ಸುಳ್ಳುಮಾಡಿದ ಪ್ರೇಕ್ಷಕರ ಹೇಳಿಕೆ.

೧೯೮೦ರಲ್ಲಿ ಇಲಕಲ್ಲಿನಲ್ಲಿ ಖ್ಯಾತ ಕಂಪನಿಯೊಂದು ಖೇಡಗಿ ವಿರಚಿತ

'ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ' ಎಂಬ ಸಾಮಾಜಿಕ ನಾಟಕವನ್ನು ಆಡುತ್ತಿತ್ತು. ಸ್ಥಳೀಯ ಪ್ರೇಕ್ಷಕರು ಕಂಪನಿ ಮಾಲೀಕರ ಮುಂದೆ "ನಾಟಕಾ ಏನೇನೂ ಛಲೋ ಇಲ್ಲಾ, ಸುಮ್ಮನೆ ಆಡಲಾಕತ್ತೀರಿ" ಎಂದು ಹೇಳುತ್ತಿದ್ದರು. ಖೇಡಗಿಯವರ ಎದುರಿಗೆ "ನಾಟಕಾ ಭಾರಿ ಐತ್ರೀ" ಅಂತಿದ್ರು, ಆ ನಾಟಕ ೮೦ ಪ್ರಯೋಗ ಕಂಡು ಭಾರಿ ರೊಕ್ಕಾ ನೀಡಿತು. ಸುಳ್ಳ ಹೇಳಿದವರ ನಾಲಿಗೆ ಮ್ಯಾಗ ಚೂರಿ ಹಾಕಿದಂಗ್ ಆಗಿತ್ತು. ಈ ನಾಟಕ ಖೇಡಗಿಯವರು ಬರೆದ ಅತ್ಯುತ್ತಮ ನಾಟಕಗಳಲ್ಲಿ ಒಂದು. ಈ ನಾಟಕದಿಂದ ಖೇಡಗಿಯವರ ಸಾಮರ್ಥ್ಯ, ಜನಪ್ರಿಯತೆಗಳು ಕವಲೊಡೆದು ಕೊಂಡವು. ಈ ನಾಟಕದ ಹೆಸರೂ ಕೂಡ ಆಕರ್ಷಕವಾಗಿದೆ. ರೀತಿ ಮತ್ತು ನೀತಿಗಳು ವ್ಯಕ್ತಿಯ ಬದುಕಿನಲ್ಲಿ ಎಷ್ಟು ಮಹತ್ವದ ಪಾತ್ರಗಳನ್ನು ವಹಿಸುತ್ತವೆ ಮತ್ತು ಆದರ್ಶಕ್ಕೂ ಕಾರಣವಾಗಬಲ್ಲವೂ ಎಂಬುದನ್ನು ಒತ್ತಿ ಹೇಳುವ ನೀತಿಬೋಧಕ ನಾಟಕವಿದು.

## ಸಂಭಾಷಣೆ ಕಳ್ಳರು.

ಬಿಜಾಪುರದಲ್ಲಿ ಖೇಡಗಿಯವರ "ನಿಮ್ಮ ಹೆಂಡತಿ ನಾನಲ್ಲ"(೧೯೭೦ರ ಗುಡಿಗೇರಿ ಕಂಪನಿ) ನಾಟಕಪ್ರಯೋಗ ನಡೆದಿತ್ತು. ಆಗ ಅದೇ ತಾನೆ ಟೇಪ್ ರಿಕಾರ್ಡಗಳು ಹುಟ್ಟಿಕೊಂಡಿದ್ದ ಕಾಲ. ಕೆಲವು ಪ್ರೇಕ್ಷಕರು ಈ ನಾಟಕದ ಕಥೆ, ಸಂಭಾಷಣೆ ಸನ್ನಿವೇಶಗಳನ್ನು ಅರಿವೆ ಚೀಲದಲ್ಲಿ ಟೇಪ್ ರಿಕಾರ್ಡರ್ ಇಟ್ಟುಕೊಂಡು ಬಂದು ಯಾರಿಗೂ ಕಾಣದಂತೆ ಮುದ್ರಿಸಿಕೊಳ್ಳುತ್ತಿದ್ದರು. ಕಾಣದಂತೆ ನಡೆಯುತ್ತಿದ್ದ ಈ ಮುದ್ರಿಕೆ ತಡೆಯುವುದಂತೂ ಅಸಾಧ್ಯದ ಮಾತಾಗಿತ್ತು.

## ಒಂದೇ ನಾಟಕ ನಲವತ್ತೆಂಟು ಸಾರಿ ನೋಡಿದನಾ ಬಾಲಕ!.

ಸಿನೆಮಾಗಳನ್ನು ೪೦-೫೦ಬಾರಿ ನೋಡಿದ ಸುದ್ದಿ ನಾವು ನೀವೆಲ್ಲ ಕೇಳಿದ್ದೇವೆ ಓದಿದ್ದೇವೆ. ನಾಟಕವನ್ನು ಬಹಳವಾದರೆ ೫-೬ಸಾರಿ ನೋಡಬಹುದೇನೋ! ಬಿಜಾಪುರದಲ್ಲಿ ಖೇಡಗಿ ವಿರಚಿತ ನಾಟಕವೊಂದನ್ನು ಕಂಪನಿಯವರು ಆಡುತ್ತಿದ್ದಾಗ ಬಾಲಕನೊಬ್ಬನು ಸ್ಟೇಜ್ ಮೇಲೆ ಬಂದು (ಮಧ್ಯಂತರ ವೇಳೆ) ಈ ನಾಟಕವನ್ನು ತಾನು ನಲವತ್ತೆಂಟು ಸಾರಿ ನೋಡಿರುವುದಾಗಿ ಎಲ್ಲರೆದುರು ೪೮ ಟಿಕೇಟುಗಳನ್ನು ತೋರಿಸಿದ. ಪ್ರೇಕ್ಷಕರಿಂದ ಚಪ್ಪಾಳೆ ಸುರಿಮಳೆ, ಕಂಪನಿ ಮಾಲೀಕರಿಗೆ ದೂರಾದ ಆತಂಕ, ಖೇಡಗಿಯವರ ಮನದಲ್ಲಿ ಸಾರ್ಥಕ ಭಾವ. ಒಬ್ಬ ನಾಟಕಕಾರ ಮತ್ತು ಪಾತ್ರಗಳನ್ನು ಜೀವಂತವಾಗಿ ಇಡಬಲ್ಲ ವಸ್ತುವೆಂದರೆ ಪ್ರೇಕ್ಷಕ ಮಹಾಶಯನ ಸ್ತುತಿ ಮಾತ್ರ.

## 'ಕನ್ನಡವೀರ ರಣಮಸ್ತಖಾನ'

೧೯೭೭ರಲ್ಲಿ ಗಳಗನಾಥರ ಕಥೆಯನ್ನಾಧರಿಸಿ ಎಚ್. ಎನ್. ಸಾಳುಂಕೆಯವರು ಬರೆದ 'ಕನ್ನಡಿಗರ ಕರ್ಮಕಥೆ' ಅರ್ಥಾತ್ 'ಕನ್ನಡವೀರ ರಣಮಸ್ತಖಾನ' ನಾಟಕವೊಂದನ್ನು ಕಂಪನಿಯೊಂದು ಪ್ರದರ್ಶಿಸುತ್ತಿತ್ತು. ಐತಿಹಾಸಿಕ ನಾಟಕವೆಂದ ಮೇಲೆ ಕೆಚ್ಚೆದೆ ಮತ್ತು ಪಂಚಿಂಗ್ ಡೈಲಾಗ್‌ಗಳು ಅದರ ಹೊರಮೈಗಳಾಗಿರುತ್ತವೆ. ನಾಟಕದ ಉನ್ನತಾವನತಿಗೆ ಬಹುಮಟ್ಟಿಗೆ ಡೈಲಾಗ್‌ಗಳು ಪ್ರಮುಖ ಕಾರಣಗಳು. ನಾಟಕದ ಕೊನೆಯ ಸೀನರಿ ಕುರಿತಾಗಿ ತಕರಾರಾಗಿ ಕಂಪನಿ ಮಾಲೀಕರು ಅಂತ್ಯ ಭಾಗವನ್ನು ಬರೆಯಲು ಖೇಡಗಿಯವರಿಗೆ ಬಿನ್ನವಿಸಿಕೊಂಡರು. ಖೇಡಗಿಯ ಪ್ರತಿಭೆ ಪ್ರಜ್ವಲಿಸಲು ಇದು ಸಕಾಲವಾಯಿತು. ಒಂದು ಕ್ಷಣ ದೇವಧ್ಯಾನ ಗುರುಧ್ಯಾನ ಮಾಡಿ ಕೊನೆಯ ಸೀನರಿ ಪೂರ್ಣಗೊಳಿಸಿಂಯೇ ಬಿಟ್ಟರು. ನಾಟಕ ಹಣ, ಕೀರ್ತಿ ಎಲ್ಲವನ್ನೂ ತಂದುಕೊಟ್ಟಿತೆಂದು ಬೇರೆ ಹೇಳಬೇಕಿಲ್ಲ. ಈ ನಾಟಕಕ್ಕೆ ಹೇಮರಾಜ ಕೆಂಧೂಳಿ ರಾಣಿಮಹಲ್ ಸೀನರಿ ಬರೆದಿದ್ದರು.

## ಪುಣೆಯಲ್ಲಿ 'ಸ್ಟೋರ್ ಕೀಪರ್'ನಾಗಿ ಕನ್ನಡ ನಾಟಕ ಆಡಿದ್ದು.

ಮ್ಯಾಟ್ರಿಕುಲೇಶನ್ ಮುಗಿದ ನಂತರ ಎಲ್ಲಿಯಾದರೂ ಕೆಲಸ ಹುಡುಕಲು ಮನೆಯಲ್ಲಿ ಒತ್ತಾಯ ಮಾಡುತ್ತಿದ್ದರು. ಒಲ್ಲದ ಮನಸ್ಸಿನಿಂದ ಪುಣೆಯ ಪೆಪ್‌ಕೊ ಕಂಪನಿಯಲ್ಲಿ ಒಂದೆರಡು ವರ್ಷ ಖೇಡಗಿ ಕೆಲಸ ಮಾಡಿದರು. ಕೆಲಸ ಇಲ್ಲದ ವೇಳೆಯಲ್ಲಿ ಪುಣೆಯ ಗ್ರಂಥಾಲಯಕ್ಕೆ ಹಾಜರಿ ಹಾಕಿ ದಿನಕ್ಕೊಂದು ಕನ್ನಡ ನಾಟಕದ ಪುಸ್ತಕವನ್ನು ಎರವಲು ತಂದು ಓದುತ್ತಿದ್ದರು. ಆ ಗ್ರಂಥಾಲಯದಲ್ಲಿ ಒಂದು ದಿನಕ್ಕೆ ಒಂದು ಪುಸ್ತಕವನ್ನು ನೀಡುತ್ತಿದ್ದರು. ಶೇಖ್ ಮೊಹಿದ್ದೀನ್‌ಗೋ ದಿನಕ್ಕೆ ಎರಡು ಮೂರು ನಾಟಕದ ಪುಸ್ತಕಗಳನ್ನು ಒಂದೇ ದಿನದಲ್ಲಿ ಓದಿ ಮುಗಿಸಬೇಕೆನ್ನುವ ಆತುರ. ತ. ರಾ. ಸು, ಕಂದಗಲ್ಲ, ಬೀಚಿ, ಭೈರಪ್ಪ, ಅತ್ರೆ, ರಾಮ ಗಡ್ಕರಿ, ಗುಲಶನ್ ನಂದಾ ಮುಂತಾದವರ ಕೃತಿಗಳನ್ನು ಅತ್ಯಾಸಕ್ತಿಯಿಂದ ಓದುತ್ತಿದ್ದರು. ಹಿಂದಿ ಮತ್ತು ಮರಾಠಿ ಕೃತಿಗಳನ್ನು ಓದುವುದನ್ನು ಕಲಿತುಕೊಂಡರು. ಈ ಸಾಹಿತ್ಯ ಕೃತಿಗಳ ಜೊತೆಗೆ ರಾಮಾಯಣ, ಮಹಾಭಾರತ, ಕುರಾನ್ ಗ್ರಂಥಗಳನ್ನು ಓದುತ್ತ ಓದುತ್ತ ಜ್ಞಾನ ಭಂಡಾರ ತುಂಬತೊಡಗಿತು. ಈ ಜ್ಞಾನದ ಜೊತೆಗೆ ವಿಮರ್ಶಾ ಶಕ್ತಿ ಮೊಳಕೆಯೊಡೆಯಿತು. ಪಂಡಿತರೊಬ್ಬರ ಜೊತೆಗೆ ವಾದಿಸುವ ಶಕ್ತಿಯನ್ನು ಅರ್ಜಿಸಿಕೊಂಡ ಶೇಖ್ ಮೊಹಿದ್ದೀನ್ ಖೇಡಗಿಯವರು

ಬೆಳಗಿನವರೆಗೂ ಅವರ ಜೊತೆ ಕೂಳಿನ ಖಬರಿಲ್ಲದೇ ಚರ್ಚೆಗಿಳಿಯುತ್ತಿದ್ದರು. ಇವರ ಚರ್ಚೆ ಎರಡು-ಮೂರು ದಿನಗಳವರೆಗೆ ವಿಸ್ತರಣೆಯಾಗುತ್ತಿತ್ತು. ದೊಡ್ಡವರ ಜೊತೆಗೂ ಚರ್ಚೆ, ವಾದ ಮಾಡುವ ದೊಡ್ಡ ಚಟ ಅಂಟಿಕೊಂಡುಬಿಟ್ಟಿತು.

ನಾಟಕ ಕೃತಿಗಳನ್ನು ಮನೆಗೆ ತಂದು ಓದಿದಮೇಲೆ ಕೋಣೆಯಲ್ಲಿ ಏಕಾಂಗಿ ಯಾಗಿದ್ದುಕೊಂಡು ನಾಯಕ ಪಾತ್ರ ತಾನೇ ಆಗಿ ಅಭಿನಯಿಸುತ್ತಾ ಪಾತ್ರಗಳೂ ತನಗೆ ಒಲಿಯುತ್ತವೆ ಎಂಬುದು ಅವರಿಗೆ ಸ್ವಯಂ ವೇದ್ಯವಾಯಿತು.

ಪುಣೆಯ ಕನ್ನಡಿಗರನ್ನೆಲ್ಲ ಒಗ್ಗೂಡಿಸಿ ತಾವು ಹುಟ್ಟುಹಾಕಿದ ಬಸವೇಶ್ವರ ನಾಟ್ಯ ಸಂಘದಿಂದ 'ದಸರಾ' ನಾಟಕವನ್ನಾಡಲು ಶುರುವಿಟ್ಟುಕೊಂಡರು. ಮರಾಠಿ ನೆಲದಲ್ಲಿ ಕನ್ನಡ ನಾಟಕಗಳನ್ನಾಡಿ ಎಲ್ಲರನ್ನು ಒಗ್ಗೂಡಿಸಲು ರಂಗದ ಮುಖಾಂತರ ಯತ್ನಿಸಿದ್ದು ಸಾಮಾನ್ಯ ಕೆಲಸವೆ?. ಕರ್ನಾಟಕದಲ್ಲಿಯೇ ಕನ್ನಡಿಗರಿಗೆ ಅನಾಥ ಪ್ರಜ್ಞೆ ಕಾಡುತ್ತಿರುವಾಗ ಹೊರರಾಜ್ಯದಲ್ಲಿನ ಈ ಪ್ರಜ್ಞಾಪೂರ್ವಕ ಕೆಲಸ ಖುಷಿ ನೀಡುತ್ತದೆ. ೧೯೩೦-೪೦ರ ಭಾಗದಲ್ಲಿ ಗಡಿನಾಡಿನಲ್ಲಿದ್ದ ಮೈಂದರಗಿಯ ನಾಗಪ್ಪ ಬೋರಾಮಣಿಯವರ ಕಂಪನಿ ಲಾತೂರ್, ಉಸ್ಮಾನಾಬಾದ್, ಔರಂಗಬಾದ್‌ಗಳಲ್ಲಿ ಕನ್ನಡ ನಾಟಕಗಳ ಮೂಲಕ ರಂಗಯಾತ್ರೆ ಕೈಗೊಂಡು ವಿಜಯ ಸಾಧಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಯೋಗ್ಯ.

## ಖೇಡಗಿಯವರ ನಾಟಕ ಬರವಣಿಗೆಯ ಪೂರ್ವತಯ್ಯಾರಿ ಹೀಗೆ...

ಖೇಡಗಿಯವರ ನಾಟಕಗಳು ಒಟ್ಟು ನಾಲ್ಕು ಪ್ರಕಾರದವು. ಅವು ಪೌರಾಣಿಕ, ಐತಿಹಾಸಿಕ, ಜಾನಪದ ಮತ್ತು ಸಾಮಾಜಿಕ. ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳನ್ನು ಬರೆಯುವ ಮೊದಲು ಆ ವಿಷಯಕ್ಕೆ ಸಂಬಂಧಿಸಿದ ಕೃತಿಗಳನ್ನು ಅಧ್ಯಯನ ಮಾಡುವುದು, ಕ್ಷೇತ್ರ ಸಂದರ್ಶನ ಕೈಗೊಳ್ಳುವುದು ಮತ್ತು ಜನಪದ ಹೇಳಿಕೆಗಳನ್ನು ದಾಖಲಿಸಿಕೊಂಡು ಹೊಸಬಗೆಯಲ್ಲಿ ನಾಟಕಗಳನ್ನು ಕಟ್ಟಿಕೊಡುವ ಕೆಲಸ ಖೇಡಗಿಯವರದಾಗಿತ್ತು. ಭಿನ್ನತೆ ಮೆರೆದರೆ ಮಾತ್ರ ಒಬ್ಬ ಲೇಖಕನ ಪ್ರಯತ್ನ ಎದ್ದುಕಾಣಲು ಸಾಧ್ಯ. ಈ ಒಳಗುಟ್ಟನ್ನು ಅರಿತುಕೊಂಡು ಹೊಸಬಗೆಯನ್ನು ಖೇಡಗಿಯವರು ಅಳವಡಿಸಿಕೊಳ್ಳಲೇಬೇಕಾಯಿತು. ಈಗಾಗಲೇ ಹೇಳಿದಂತೆ ನಾಟಕದ ನಿಜ ವಿಮರ್ಶಕರೆಂದರೆ ಪ್ರೇಕ್ಷಕರು ಎನ್ನುವ ಮಾತು, ಇದು ನಿತ್ಯ ಸತ್ಯ. ಪ್ರೇಕ್ಷಕರ ವಿಮರ್ಶೆಯನ್ನು ಲೆಕ್ಕಿಸದ ನಾಟಕಗಳು. ಅವಸರ ಅವಸರವಾಗಿ ಓಡಿ ಹಳ್ಳಕ್ಕೆ ಬಿದ್ದಂತೆ, ಇಲ್ಲವೇ ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡು ಆಪಾಯಗಳನ್ನು ಮೈಮೇಲೆ ಹಾಕಿಕೊಂಡಂತೆ. ಇದು 'ಒನ್ ವೇ' ಮಾದರಿ. ಈ ಒನ್ ವೇ ಮಾದರಿಯನ್ನು ನಿರ್ಲಕ್ಷಿಸಿ ಪ್ರೇಕ್ಷಕರ ವಿಮರ್ಶೆಯನ್ನು

ಪಡೆದುಕೊಂಡು ಅವರ ಬೇಕು ಬೇಡಗಳನ್ನು ಅರಿತುಕೊಂಡು ಅತ್ಯುತ್ತಮವಾದ ನಾಟಕಗಳನ್ನು ಕೊಟ್ಟವರು ಖೇಡಗಿಯವರು.

ಕಥೆ, ಕಾದಂಬರಿ, ನಾಟಕ ಮುಂತಾದವುಗಳನ್ನು ಬರೆಯುವುದು ಸುಲಭವಲ್ಲದ ಕೆಲಸ. ಖೇಡಗಿಯವರ ನಾಟಕಗಳು ಹೆಚ್ಚಿನವು ದುರಂತ ಪ್ರಧಾನವಾದವುಗಳು. ಇಂತಹ ನಾಟಕಗಳನ್ನೇ ಏಕೆ ಬರೆದಿರಿ ಎಂದುನಾನು ಪ್ರಶ್ನಿಸಲಾಗಿ ಅವರು ಹೇಳಿದ್ದು ಹೀಗೆ.

"ಒಳ್ಳೆಯವನಿಗೆ ಒಳ್ಳೆಯದೇ ಆಗಬೇಕೆಂಬ ಕಾನೂನು ಇಲ್ಲ. ಜಗತ್ತಿನಲ್ಲಿ ಒಳ್ಳೆಯವರಿಗೆ ಕೆಟ್ಟದ್ದು, ಕೆಟ್ಟವರಿಗೆ ಒಳ್ಳೆಯದು ಆಗುತ್ತಲೇ ಇದೆ. ಪ್ರಕೃತಿಯಲ್ಲಿ ಅಸಮವೂ ಸಹಜವಾದದ್ದು, ಅದನ್ನು ಎಲ್ಲರೂ ಸ್ವೀಕರಿಸಲೇಬೇಕು. ನಾಟಕ ನೋಡಲು ಬಂದ ಪ್ರೇಕ್ಷಕ ಬರೀ ಪ್ರೇಕ್ಷಕನಾಗಿ ಹೋದರೆ ಪ್ರಯೋಜನವಿಲ್ಲ, ಆ ನಾಟಕದ ವಿಮರ್ಶಕನಾಗಿ ಹೋಗಬೇಕು".

ನಾಟಕಗಳ ಸಂಭಾಷಣೆ ಮತ್ತು ಹಾಡುಗಳನ್ನು ಸಂಪೂರ್ಣವಾಗಿ ತಾವೇ ರಚಿಸುತ್ತಿದ್ದ ಖೇಡಗಿಯವರು ಅದರ ಚಾಲ್‌ಗಳನ್ನು ನುರಿತ ಸಂಗೀತಗಾರರಿಂದ ಅಳವಡಿಸುತ್ತಿದ್ದರು. ತಾವೇ ಪಾತ್ರ ವಹಿಸುತ್ತಿರುವಾಗ ಖೇಡಗಿಯವರು ಹಾಡುವುದಿಲ್ಲ. ಮತ್ತೊಬ್ಬರ ಹಾಡಿನಲ್ಲಿರುವ ದೋಷಗಳನ್ನು ಗ್ರಹಿಸಬಲ್ಲರು.

## ಕಂಪನಿ ಮಾಡಲಿಲ್ಲವೇಕೆ?

ನಟನಾಗಿ, ನಿರ್ದೇಶಕನಾಗಿ ಹವ್ಯಾಸಿ ರಂಗತಂಡದ ಮುಖ್ಯಸ್ಥನಾಗಿ ಹೆಚ್ಚುಕಡಿಮೆ 'ಆಲ್‌ರೌಂಡರ್' ಆಗಿರುವ ಭೀಮಾತೀರದ 'ಈ ರಂಗಭೀಮ' ಏಕೆ ನಾಟಕ ಕಂಪನಿಯೊಂದನ್ನು ಕಟ್ಟಿಕೊಂಡಿಲ್ಲ ಎನ್ನುವ ಪ್ರಶ್ನೆ ಮೂಡುವುದು ಸಹಜ. ಈ ಕುರಿತು ಖೇಡಗಿಯವರಿಗೆ ಪ್ರಶ್ನಿಸಿದರೆ ಅವರ ಖುಲ್ಲಂ ಖುಲ್ಲಾ ಹೇಳಿಕೆ ಹೀಗಿತ್ತು, ಅದರ ಹಿಂದೆ ಎಚ್ಚರಿಕೆಯೂ, ಸ್ವಾಭಿಮಾನವೂ ಇತ್ತೆನ್ನುವುದು ಸುಳ್ಳಲ್ಲ.

"ನಾ ಯಾರಿಗೂ ಎಪ್ಪಾ ಎನ್ನವನಲ್ಲ, ಅದಕ್ಕ ಕಂಪನಿ ಮಾಡಲಿಲ್ಲ. ನಾನ ಪೈಪೋಟಿಗೆ ಬಿದ್ದರೂ ಇಲ್ಲಿತನಕ ಸೋತಿಲ್ಲ, ಪಾತ್ರಕ್ಕ ಹೆಚ್ಚು ಒಲವು ತೋರಿಸಿಲ್ಲ. ನಾಟಕ ಬರೆಯುವುದೇ ನನ್ನ ದೊಡ್ಡ ಕೆಲಸ ಆಗೈತಿ"

## ತನ್ನ ಸಾಮರ್ಥ್ಯ ತಾನೇ ತಿಳಿದಾಗ ಇನ್ನೇನಿನ್ನೇನೋ!

ಬೀಳಗಿಯಲ್ಲಿ ಕಂದಗಲ್ಲರ ನಾಟಕೋತ್ಸವ ನಡೆತುತ್ತಿದ್ದ ಸಂದರ್ಭವದು. ಅಮೀರಬಾಯಿಯವರ ಅಭಿಮಾನಿ ಲಾಡಸಾಹೇಬರು ಮತ್ತು ದುರ್ಗಾದಾಸರು

ಅಲ್ಲಿಗೆ ಬಂದಿದ್ದರು. ಅಂದು 'ಚಿತ್ರಾಂಗ'ದ ನಾಟಕವನ್ನು ಆಡಲಾಗುತ್ತಿತ್ತು. ದುರ್ಗಾದಾಸರು ತಾವು ಅರ್ಜುನನ ಪಾತ್ರ ಮಾಡುವುದಾಗಿಯೂ, ಬಬ್ರುವಾಹನನ ಪಾತ್ರವನ್ನು ಖೇಡಗಿಯವರೇ ಮಾಡಬೇಕೆಂದು ಕೇಳಿಕೊಂಡರು. ಖೇಡಗಿಯವರಿಗೆ ತಮಗೆ ಯಾವ ಪಾತ್ರಗಳೂ ಹೊಂದುತ್ತವೆ ಮತ್ತು ತನ್ನ ಸಾಮರ್ಥ್ಯ ಏನೆನ್ನುವುದು ಗೊತ್ತಿತ್ತು. ತಾವು ಅದಕ್ಕೆ ಯೋಗ್ಯನಲ್ಲ ಎಂದು ಹೇಳಿ ಬಬ್ರುವಾಹನನ ಪಾತ್ರವನ್ನು ತಿರಸ್ಕರಿಸಿದರು. ಯಾವುದೇ ಮನುಷ್ಯನ ಅಹಂ ಗುಣವು ಶನಿಯಾಗಿ ಕಾಡುತ್ತದೆ, ತನ್ನ ಶರೀರ ಶಾರೀರಗಳ ಕೆಪಾಸಿಟಿಗಳನ್ನು ಅರ್ಥೈಸಿಕೊಳ್ಳದೇ ಹೋದರೆ ಕಲಾವಿದನು ತನ್ನ ಆತ್ಮವನ್ನು ವಂಚಿಸಿಕೊಂಡಂತೆ. ಆತ್ಮವನ್ನೇ ವಂಚಿಸಿಕೊಂಡಾಗ ಪ್ರಬುದ್ಧತೆ ಹೇಗೆ ತಾನೆ ಬಂದೀತು?

### ಕಲಾವಿದರು ಹೀಗಿರಬೇಕು...

"ಪಾತ್ರಧಾರಿಯ ನಟನೆ, ಸಂಭಾಷಣೆ ಕುರಿತಾಗಿ ಪ್ರೇಕ್ಷಕರು ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು. ಇರದಿದ್ದರೆ ಆತ ಕೊಟ್ಟದ್ದನ್ನೇ ಸ್ವೀಕರಿಸಬೇಕಾಗುತ್ತದೆ . ಇತ್ತೀಚೆಗೆ ಕೆಲ ಕಲಾವಿದರು ಹದ್ದುಬಸ್ತನ್ನು ಮೀರುತ್ತಿದ್ದಾರೆ. ಅಂಥವರಿಗೆ ಪ್ರೇಕ್ಷಕರು ಕಡಿವಾಣ ಹಾಕಬೇಕು" ಎಂದು ಖೇಡಗಿಯವರು ಎಚ್ಚರಿಸುವುದನ್ನು ಮರೆಯುವುದಿಲ್ಲ.

### ಸದಭಿರುಚಿಯ ನಾಟಕಗಳಿಂದ ಎಲ್ಲ ವರ್ಗದವರ ಮನಗೆಲ್ಲುವ ತವಕ

ಕೆಲವು ಕಂಪನಿ ನಾಟಕಗಳನ್ನು ಅಶ್ಲೀಲ ಮತ್ತು ದ್ವಂದ್ವಾರ್ಥ ಸಂಭಾಷಣೆಗಳನ್ನು ತುರುಕಿ ಒಂದೇ ವರ್ಗದ ಪ್ರೇಕ್ಷಕರನ್ನು ಮೆಚ್ಚಿಸಿ ಆರೋಗ್ಯ ಹಾಳು ಮಾಡುವ ಮತ್ತು ಮಾಡಿಕೊಳ್ಳುವ, ಪವಿತ್ರ ರಂಗಭೂಮಿಯ ಹೆಸರಿಗೆ ಕಳಂಕ ತರುವ ಪ್ರಯತ್ನಗಳು ಸುಮಾರು ಎರಡು ಮೂರು ದಶಕಗಳಿಂದಲೂ ನಡೆದು ಬರುತ್ತಿರುವ ಅನಾರೋಗ್ಯಕರ ಬೆಳವಣಿಗೆಯಾಗಿದೆ. ಈ ರೋಗ ಸಿನೆಮಾಕ್ಕೂ ಬಿಟ್ಟಿಲ್ಲ. ಎಲ್ಲಿಯವರೆಗೆ ಸ್ವೀಕರಿಸುವ ಪ್ರೇಕ್ಷಕರಿರುತ್ತಾರೋ ಅಲ್ಲಿಯವರೆಗೆ ಇಂತಹ ಅನಾರೋಗ್ಯಕರ ಚಾಳಿ ನಿತ್ಯನಿರಂತರವಾಗಿರುತ್ತದೆ. ಕರ್ನಾಟಕದ ಕೆಲವು ಕಂಪನಿಗಳು ರಂಗಭೂಮಿಯ ಆರೋಗ್ಯವೇ ಸಾಮಾಜಿಕ ಆರೋಗ್ಯ ಎಂದು ಭಾವಿಸಿ ಶೀಲವಲ್ಲದ ಸಂಭಾಷಣೆಗಳನ್ನು ಕೈಬಿಟ್ಟು ಉತ್ತಮ ಅಭಿರುಚಿ ಬೆಳೆಸಬಲ್ಲ ಕೈಂಕರ್ಯವನ್ನು ಮಾಡುತ್ತಿವೆ. ರಂಗಭೀಷ್ಮ ಏಣಗಿ ಬಾಳಪ್ಪ, ಅರಿಶಿನಗೋಡಿ, ಧುತ್ತರಗಿ ಮುಂತಾಗಿ ಬೆರಳೆಣಿಕೆಯಷ್ಟು ಕಂಪನಿಗಳು ಈ ಮಾರ್ಗವನ್ನು ಅನುಸರಿಸಿಯೇ ರಂಗಸಂಸ್ಕೃತಿಯನ್ನು ಸಿರಿವಂತಗೊಳಿಸುವಲ್ಲಿ

ಬೆವರು ಹನಿಸಿದ್ದಾರೆ ಮತ್ತು ಆದರ್ಶರಾಗಿ ಇದುವರೆಗೂ ಜನಮಾನಸದಲ್ಲಿದ್ದಾರೆ. ಇದೇ ಹಾದಿಯಲ್ಲಿ ಶೇಖ್ ಮೊಹಿದ್ದೀನ್ ಖೇಡಗಿಯವರು ನಡೆದು ಸದಭಿರುಚಿಯ ನಾಟಕಗಳನ್ನು ವೃತ್ತಿರಂಗಭೂಮಿಗೆ ನೀಡಿ ಸರ್ವ ವರ್ಗದವರ ಮನ ಗೆದ್ದುದು. ಸಾಮಾಜಿಕ ಕಾಳಜಿ, ಬಿಗು ನಿಲುವು, ಭವಿಷ್ಯತ್ತಿನ ಪರಿಣಾಮಗಳ ಕುರಿತು ಮೂಡಿದ ಚಿಂತನೆಗಳಿಂದಲೇ ಅವರು ಮೆಚ್ಚುಗೆಯಾಗುವುದು. ಅವರ ನಾಟಕಗಳನ್ನು ಸಮಾಧಾನಚಿತ್ತದಿಂದ ಓದುತ್ತ ಹೋದರೆ ಸಾಮಾಜಿಕ ಚೌಕಟ್ಟಿನೊಳಗೆ ನಡೆಯುವ ನಮ್ಮ ನಿಮ್ಮೆಲ್ಲರ ಸಂಸಾರದೊಳಗಿನ ಹಲವು ವಿದ್ಯಮಾನಗಳೇ ಅಲ್ಲಿ ಪ್ರವಹಿಸುತ್ತವೆ. ಸಾಳುಂಕೆಯವರದ್ದು ಸರಸ ಸಾಹಿತ್ಯವಾದರೆ ಖೇಡಗಿಯವರದ್ದು ವಿರಸವನ್ನು ದೂರಗೊಳಿಸಿ ಸಾಮರಸ್ಯ ಬೆಸೆಯುವ ಸಾಹಿತ್ಯ. ಲೋಕದಲ್ಲಿ ಭಿನ್ನ ಭಿನ್ನ ಗುಣಸ್ವಭಾವದ ಜನರಿರುವಂತೆ ಅವರ ನಾಟಕಗಳಲ್ಲೂ ಅಂತಹ ಪಾತ್ರಧಾರಿಗಳಿದ್ದಾರೆ. ಅವರನ್ನೆಲ್ಲ ಒಗ್ಗೂಡಿಸಿ ಸಾಮರಸ್ಯದ ಹಾದಿಯಲ್ಲಿ ನಡೆಯುವಂತೆ ಮಾಡುವುದು ನಾಟಕಕಾರನ ಪ್ರಧಾನ ಆಶಯ.

## ಖೇಡಗಿಯವರ ಮೇಲೆ ಪ್ರಭಾವ ಬೀರಿದ ನಾಟಕಕಾರರು ಮತ್ತು ನಟರು

ಖೇಡಗಿಯವರ ನಾಟಕಗಳು ಯಶಸ್ವಿಯಾಗಲು ಕಂದಗಲ್ಲ ಹನುಮಂತರಾಯ ಮತ್ತು ಗುಣದಾಳದ ಕೆ. ಎನ್. ಸಾಳುಂಕೆಯವರ ನಾಟಕಗಳು ಬಹುಮಟ್ಟಿಗೆ ಪ್ರೇರಕ. ಕಂದಗಲ್ಲರು ವಿಶೇಷವಾಗಿ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳ ರಚನೆಯಲ್ಲಿ ಪ್ರವೀಣರು. ಪಾತ್ರಗಳ ಯಥೋಚಿತ್ರವನ್ನು ಗಮನಿಸಿ ಪ್ರಾಸಯುಕ್ತ ಹಳೆಗನ್ನಡ ಮಿಶ್ರಿತ ದೀರ್ಘ ಸಂಭಾಷಣೆಗಳನ್ನು ಬರೆಯುತ್ತಿದ್ದರು. ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳ ಜೀವದ್ರವ್ಯವೇ ಆ ಸಂಭಾಷಣೆಗಳು. ಸುದೀರ್ಘ ಸಂಭಾಷಣೆಗಳನ್ನು ಅಸ್ಖಲಿತವಾಗಿ ಹೇಳುವುದು ಕೆಲ ಪಾತ್ರಧಾರಿಗಳಿಗೆ ಸಂಕಟಕ್ಕೀಡುಮಾಡುತ್ತಿತ್ತು. ಅವರನ್ನೆಲ್ಲ ಕಂದಗಲ್ಲರು ಸಂಭಾಳಿಸಿ ಪಾತ್ರದ ಔಚಿತ್ಯ, ಘನತೆ ಆ ಸಂಭಾಷಣೆಗಳಲ್ಲಡಗಿದೆ ಎಂದು ತಿಳಿಹೇಳಿ ಟ್ರ್ಯಾಕಿಗೆ ತಂದುಬಿಡುತ್ತಿದ್ದರು. ಅವರ ನಾಟಕಗಳಿಂದ ರನ್ನ, ಪಂಪ, ಕುಮಾರವ್ಯಾಸರ ಸುಬಗ ಶೈಲಿ ಅಲ್ಲಿ ಜೀವತಳೆಯುತ್ತಿತ್ತು.

ಬಿಜಾಪುರ ತಾಲೂಕು ಗುಣದಾಳದ ಕೆ. ಎನ್. ಸಾಳುಂಕೆಯವರು ಸಾಮಾಜಿಕ ನಾಟಕಗಳ ಬರೆವಣಿಗೆಯಲ್ಲಿ ಸಿದ್ಧಹಸ್ತರು. ಉತ್ತರ ಕರ್ನಾಟಕದ ಗಂಡುಭಾಷೆ, ಜವಾರಿ ಭಾಷೆಯನ್ನು ಹದಗೊಳಿಸಿ, ಮೆದುಗೊಳಿಸಿ ರಂಗಕ್ಕೆ ಅರ್ಪಿಸಿದ ಅವರ ಪ್ರಯತ್ನ ವರ್ಣಿಸಲಸದಳ. ಅವರ ಅನೇಕ ನಾಟಕಗಳು

ಚಲನಚಿತ್ರಗಳಾಗಿ ಮನಗೆದ್ದಿವೆ. ಪ್ರೀತಿ, ಪ್ರೇಮ, ವಿರಹ, ಬಡತನ, ವರದಕ್ಷಿಣೆಯ ಪಿಡುಗು, ಮಲತಾಯಿಯ ಕಿರುಕುಳ ಇತ್ಯಾದಿ ವಸ್ತುಗಳು ಅವರ ನಾಟಕಗಳಲ್ಲಿ ಕೇಂದ್ರ ಸ್ಥಾನ ಪಡೆದಿವೆ. ಈ ಇಬ್ಬರೂ ನಾಟಕಕಾರರ ಶೈಲಿಯನ್ನು ಖೇಡಗಿಯವರು ಕಂಡುಂಡವರಾದರೂ ಅವರದ್ದು ಸಂಪೂರ್ಣ ಭಿನ್ನ ನಡೆ.

ಹಂದಿಗನೂರು ಸಿದ್ರಾಮಪ್ಪ, ಪೀರ್‌ಸಾಬ್, ಯಲಿವಾಳ ಸಿದ್ದಯ್ಯ ಸ್ವಾಮಿ, ಗುಬ್ಬಿ ವೀರಣ್ಣ ಮುಂತಾದವರನ್ನು ಇವರು ಬಹಳೇ ಮೆಚ್ಚಿಕೊಳ್ಳುತ್ತಾರೆ. ಹಂದಿಗನೂರು ಸಿದ್ರಾಮಪ್ಪನವರು ಕೊಟ್ಟ ಪಾತ್ರಗಳನ್ನೆಲ್ಲ ಸ್ವೀಕರಿಸುತ್ತಿದ್ದರು. ಅವರು ಸ್ವೀಕರಿಸಿದ ಸಣ್ಣಪುಟ್ಟ ಪಾತ್ರಗಳೆಲ್ಲ ನಾಯಕ ಪಾತ್ರಗಳಾಗಿರುತ್ತಿದ್ದವು. ಹಾಗೆ ಮಾಡುವ ಛಾತಿ ಸಿದ್ರಾಮಪ್ಪನವರದಾಗಿತ್ತು ಎಂದು ಅಭಿಮಾನ ತುಂಬಿ ಹೇಳುತ್ತಾರೆ ಖೇಡಗಿಯವರು. ಹಂದಿಗನೂರ ಸಿದ್ರಾಮಪ್ಪ ಸತ್ಯಹರಿಶ್ಚಂದ್ರ ನಾಟಕದ ಸಂಭಾಷಣೆ ಮತ್ತು ಪಾತ್ರಗಳು ಖೇಡಗಿಯವರಲ್ಲಿ ಗಾಢ ಪರಿಣಾಮವನ್ನುಂಟು ಮಾಡಿದವು. ಪಾತ್ರಧಾರಿ ತಾನು ಅಳುತ್ತ ಪ್ರೇಕ್ಷಕರನ್ನು ಅಳಿಸಬಾರದೆಂದು ಹೇಳುವ ಖೇಡಗಿಯವರು, "ಪಾತ್ರಧಾರಿಯೊಬ್ಬನ ಸ್ಥಿತಿ, ಅಭಿನಯ ಶೈಲಿ ನೋಡಿಯೇ ಪ್ರೇಕ್ಷಕರಿಗೆ ಅಳುವು ಬರಬೇಕು" ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

**'ಗೌರಿ ಹೋದಳು ಗಂಗೆ ಬಂದಳು' ನಾಟಕದಲ್ಲಿ ಕಾಣಿಸುವ ಸಮಷ್ಟಿ ಹಿತ ಮತ್ತು ಲೋಕಾದರ್ಶ ಪಾತ್ರ**

'ಗೌರಿ ಹೋದಳು ಗಂಗೆ ಬಂದಳು' ಇದು ಖೇಡಗಿಯವರು ಬರೆದ ಜಾನಪದ ವಸ್ತುವುಳ್ಳ ನಾಟಕ. ಜನಪದರ ಬಾಯಿಯಲ್ಲಿ ಉಳಿದಿರುವ ಮತ್ತು ಶಾಲಾ ಪಟ್ಟಿಗಳಲ್ಲಿ ಕಥೆಯಾಗಿ ಮೂಡಿಬಂದ ಕಲ್ಲನಕೇರಿ ಮಲ್ಲನಗೌಡರ ಸೊಸೆ ಭಾಗೀರಥಿ ಕೆರೆಗೆ ಹಾರವಾದ ಕಥೆಯನ್ನು ಕೆಲ ಹೊಸ ಪಾತ್ರಗಳ ಸೃಷ್ಟಿಯಿಂದ ಚೆನ್ನಾಗಿ ಧ್ವನಿಸುವ ಪ್ರಯತ್ನ ಮಾಡಿದ್ದು ಇಲ್ಲಿ ಎದ್ದುಕಾಣುತ್ತದೆ.

ಊರಲ್ಲಿ ನೀರಿಲ್ಲದೇ ಭರಮಗೌಡರ ಬಾವಿಗೆ ನೀರು ತರಲು ಹೋದ ಜನರಿಗೆ ನನ್ನ ಮಾತು ಕೇಳಿದರ ನೀರು ಕೊಡ್ತೇನಿ, ಆ ಕಲ್ಲನಗೌಡರ ಮಾತು ಕೇಳಬ್ಯಾಡ್ರಿ ಎನ್ನುವ ದುರುಳ ಭರಮಗೌಡ. ಕಲ್ಲನಗೌಡರ ಮಗ ಮಾದನಗೌಡನಿಗೆ ಗೌರಿಯ ಜೊತೆ ಮದುವೆ ನಿಶ್ಚಯವಾದ ಸುದ್ದಿ ಈತನ ತ್ರಿಕರಣಗಳನ್ನು ಕೆಂಡವಾಗಿಸುತ್ತದೆ.

ನೀರು ತರಲು ಹೋದ ರಾಮು ಹೇಳುವ ಮಾತಿದು "ಗೌಡ್ರ ದೇವರು ನೀರು ಕೊಟ್ಟಾನಂತ, ತೀರಾ ಇಷ್ಟ ಕಲ್ಲ ಮನಸ್ಸು ಮಾಡಬ್ಯಾಡ್ರಿ, ತಂದೆ ತಾಯಿ ಇದ್ದಂಗ. ನೀವೆ ಹಿಂಗ ಮಾಡಿದ್ರ ಬದುಕುದು ಹ್ಯಾಂಗ್" ಎಂದು ಬೇಡಿಕೊಳ್ಳುವ

ಪರಿ ಜಲಕ್ಷಾಮದ ಭೀಕರ ಸ್ವರೂಪದ ದರ್ಶನ. ಆತ ಒಯ್ದ ನೀರನ್ನು ಭರಮಗೌಡ ಚೆಲ್ಲಿಸುತ್ತಾನೆ, ಆಗ ರಾಮು ಕೋಪದಿಂದ "ತಗೋರ್ಲೆ ಗೌಡ ನಿನ್ನ ನೀರು ಇಲ್ಲೇ ಚೆಲ್ಲತೀನಿ, ನಿನ್ನಂಥವನ ನೀರು ಕುಡದರ ನಮಗ ನರಕ ಬಿಟ್ಟಿದ್ದಲ್ಲ" ಎನ್ನುವ ಮಾತು ಕಲ್ಲು ಮನವನ್ನು ಬಡಿದೆಬ್ಬಿಸಿ ಹೋರಾಟಕ್ಕೆ ಅಣಿಗೊಳಿಸಲು ಪ್ರೇರೇಪಿಸುತ್ತದೆ. ರಾಮುವಿನ ಈ ಮಾತಿನ ಹಿಂದೆ ಮಲ್ಲನಗೌಡ ಇರುವನೆಂಬ ಭ್ರಮೆ ಭರಮಗೌಡನದು. ಊರ ಜನರ ನೀರಿಗಾಗಿ ಹಾಹಾಕಾರ ಕಂಡು ಕೆರೆ ತೋಡಿಸಿದಾಗ ಈ ಕೆರೆಯೂ ಬಂಜೆ! ಕೊನೆಗೆ ಗರ್ಭಿಣಿ ಸೊಸೆ ಭಾಗೀರಥಿಯೇ ಕೆರೆಗೆ ಹಾರವಾಗಿ ನೀರು ಉಕ್ಕಿಸಿ, ನಗೆ ಚಿಮ್ಮಿಸಿ ತನ್ನ ಉದಾತ್ತತೆಯನ್ನು ಮೆರೆದಳು. ಮೂಲ ಕಥೆ ಇಷ್ಟೆ. ನಾಟಕಕಾರರು ಮೂರು ತಾಸುಗಳ ವರೆಗೆ ಪ್ರೇಕ್ಷಕರನ್ನು ಹಿಡಿದಿಡಲು ಕಥೆ ಬೆಳೆಸಿ ರಂಗತಂತ್ರ ಮೆರೆದಿದ್ದಾರೆ. ಉತ್ತರಾರ್ಧದಲ್ಲಿ ಊರ ಜನರಿಗೆ ಭಾಗೀರಥಿ ಬಾಳೆ ತೋಟದ ಆಚೆ ಈಚೆ ಕಾಣಿಸಿದ ಸುದ್ದಿ ಮೂರ್ತ ಸ್ವರೂಪಳಾದ ಅವಳನ್ನು ಅಮೂರ್ತಳನ್ನಾಗಿಸುವ ನಾಟಕಕಾರನ 'ಇಮ್ಯಾಜಿನರಿ ಸೆನ್ಸ್' ಚೆನ್ನಾಗಿ ಕೆಲಸ ಮಾಡಿದೆ. ಅದು ಈ ನಾಟಕದ ಹಿಂದಿರುವ ಗಟ್ಟಿ ಸೂತ್ರ.

'ಜಗವೆಲ್ಲ ನಗುತಿರಲಿ ಜಗದಳವು ಎನಗಿರಲಿ' ಮತ್ತು 'ಈ ಕಾಯ ಲೋಕ ಕಲ್ಯಾಣಕ್ಕಾಗಿ ಸವೆಸಬೇಕು' ಎನ್ನುವ ಭಾಗೀರಥಿಯ ವಿಶಾಲ ಮನಸ್ಸಿನ ಹಿಂದೆ ಜನಪರ ಕಾಳಜಿ, ಸಮಾಜವಾದಿ ಚಿಂತನೆಯ ಸುಳುಹುಗಳು ಮೊಳಕೆಯೊಡೆದುದರ ಗುರುತುಗಳು. ಜನಪದರ ಮನದಲ್ಲಿ ಕರಗದ ಮಂಜುಗಡ್ಡೆಯಾಗಿ, ಜಲದೇವಿಯಾಗಿ ಭಾಗೀರಥಿಯ ಪಾತ್ರ ಹರಳುಗಟ್ಟಿರುವುದನ್ನು ಈ ನಾಟಕದ ಮುಖಾಂತರವೇ ವಿಶೇಷವಾಗಿ ಕಾಣಬೇಕು.

## ಖೇಡಗಿಯವರ 'ಸಂಗೊಳ್ಳಿ ರಾಯಣ್ಣ' ನಾಟಕ ಮತ್ತು ನೆನಪಿಗೆ ಬರುವ ಕಂದಗಲ್ಲರು

ಈ ನಾಟಕ ಖೇಡಗಿಯವರು ರಚಿಸಿದ ಅತ್ಯುತ್ತಮವಾದ ಐತಿಹಾಸಿಕ ನಾಟಕಗಳಲ್ಲಿ ಒಂದು. ಕನ್ನಡ ನಾಡಿನಲ್ಲಿ ೧೯೩೦ರಿಂದ ಈಚೆಗೆ ವೃತ್ತಿರಂಗಭೂಮಿ ಗಳಲ್ಲಿ ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳು ಮೈಕೊಡವಿಕೊಂಡು ಭರಾಟೆಯಿಂದ ಪ್ರದರ್ಶನಗೊಳ್ಳುತ್ತಿದ್ದವು. ಅದೇ ಆಗ ಸ್ವತಂತ್ರ ಪಡೆಯುವ ಹೋರಾಟ ಜೋರಾಗಿದ್ದ ಕಾಲ. ಜನರನ್ನು ಒಗ್ಗೂಡಿಸಬೇಕಾಗಿದ್ದರೆ ನಾಟಕಗಳೂ ಪ್ರಧಾನ ಪಾತ್ರಗಳನ್ನು ವಹಿಸುತ್ತಿದ್ದವು. ಚಲನಚಿತ್ರಗಳಿಗಿಂತಲೂ ಹೆಚ್ಚಿನ ಪರಿಣಾಮ ಬೀರಿದ ಮಾಧ್ಯಮವೆಂದರೆ ಕಂಪನಿ ನಾಟಕಗಳದ್ದು. ಚಿಕ್ಕೋಡಿ ಶಿವಲಿಂಗ

ಶಾಸ್ತ್ರಿಗಳು ಮೊಟ್ಟ ಮೊದಲ ಬಾರಿಗೆ ಸಂಗೊಳ್ಳಿರಾಯಣ್ಣನ ಕುರಿತಾಗಿ 'ಒಂದೇ ಖಡ್ಗ' ಎಂಬ ನಾಟಕವನ್ನು ಬರೆದು ಪ್ರದರ್ಶಿಸುತ್ತಿದ್ದರು. ಬೆಳಗಾವಿ, ಧಾರವಾಡ ಮುಂತಾದ ಭಾಗಗಳಲ್ಲಿ ಈ ನಾಟಕ ಸಂಚಲನವನ್ನೇ ಉಂಟು ಮಾಡಿತ್ತು. ಆಮೇಲೆ ಸಂಗೊಳ್ಳಿ ರಾಯಣ್ಣ ಚಲನಚಿತ್ರವಾಗಿಯೂ ಮೂಡಿಬಂದ. ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳ ನಂತರ ದೀರ್ಘವಾದ, ಗಟ್ಟಿಯಾದ ಗಾಂಭೀರ್ಯ ತುಂಬಿದ ಹೊಸಗನ್ನಡದ ಸಂಭಾಷಣೆಗಳನ್ನು ಕೊಡುವಲ್ಲಿ ತಾನೇನು ಕಮ್ಮಿಯಿಲ್ಲ ಎಂದು 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ನಾಟಕದಿಂದ ತೋರಿಸಿಕೊಟ್ಟಿದ್ದಾರೆ ಬಿಜಾಪುರ ಜಿಲ್ಲೆಯ ಹಿರಿಯ ನಾಟಕಕಾರ, ರಂಗಕಲಾವಿದ ಶ್ರೀ ಖೇಡಗಿಯವರು.

ಸಂಗೊಳ್ಳಿ ರಾಯಣ್ಣನ ಅಭಿಮಾನದ ಆಕ್ರೋಶಭರಿತ ಮಾತುಗಳು ಆಂಗ್ಲಾಧಿಕಾರಿ ಫ್ಲಿಕರಿಂಗನ ಕನ್ನಡಾಂಗ್ಲ ಮಿಶ್ರಿತ ಹಾಸ್ಯ ಉಕ್ಕಿಸುವ ಸಂಭಾಷಣೆಯ ರಚನೆಯಲ್ಲಿ ನಾಟಕಕಾರರು ಪ್ರೇಕ್ಷಕರ ಮನಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ಈ ನಾಟಕದ ಫ್ಲಿಕರಿಂಗ್ ಪಾತ್ರವನ್ನು ಮಾಡಲು ಅನುಭವಿಕ ವ್ಯಕ್ತಿಯೇ ಬೇಕು. ೧೯೪೦ರ ದಶಕದಲ್ಲಿ ಇಂಥ ಪಾತ್ರಗಳನ್ನು ಮಾಡಲು ಹೂವಿನ ಹಡಗಲಿಯ ಹಣ್ಣಿ ವೀರಭದ್ರಪ್ಪನವರನ್ನು ಮೀರಿಸುವವರೇ ಇರಲಿಲ್ಲ. ರಾಯಣ್ಣನ ಕುರಿತಾಗಿ ಹಲವಾರು ಮಾಹಿತಿಗಳನ್ನು ಕಲೆಹಾಕಿ ಲವಲವಿಕೆ ನಿರೂಪಣೆಯಿಂದ ನಾಟಕಕ್ಕೆ ವಿಶಿಷ್ಟ ಕಳೆ ಕಟ್ಟುವಲ್ಲಿ ಖೇಡಗಿಯವರನ್ನು, ಸದ್ಯಕ್ಕಂತೂ ಮೀರಿಸುವವರಿಲ್ಲ. ಇನ್ನೊಂದು ಮಾತು ಹೇಳಬೇಕೆಂದರೆ ಅವರ ಈ ನಾಟಕದ ಸಂಭಾಷಣೆಗಳನ್ನು ಕೆಲವರು ಕದ್ದು ಬಳಸುತ್ತಿರುವುದು ನೋವು ತರಿಸುತ್ತದೆ. ಖೇಡಗಿಯವರು ತಮ್ಮ ಸಂಭಾಷಣೆಗಳನ್ನು ಕದ್ದು ಅವು ತಮ್ಮ ಸ್ವಂತದ್ದೇ ಎನ್ನುವ ಜನರನ್ನು ಕಂಡು ವ್ಯಥೆಪಟ್ಟುಕೊಳ್ಳುತ್ತಾರೆ.

## ಪಾತ್ರಸೃಷ್ಟಿ, ನಾಮಕರಣ, ವೈವಿಧ್ಯತೆ

ಖೇಡಗಿಯವರು ಪಾತ್ರಸೃಷ್ಟಿ ಮಾಡುವುದರಲ್ಲಿ ನಿಸ್ಸೀಮರು. ಅವರ ನಾಟಕಗಳಲ್ಲಿ ವಿವಿಧ ಮನೋಧರ್ಮದ ಪಾತ್ರಗಳು ತಮ್ಮ ಅಂತರಂಗವನ್ನು ಪರಿಣಾಮವಾಗಿ ಬಿಚ್ಚಿಡುತ್ತವೆ. ಮನುಷ್ಯದ ಸ್ವಭಾವದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಬಿಂಬಿಸುತ್ತವೆ. ವೃತ್ತಿರಂಗಭೂಮಿಯ ನಾಟಕಗಳಲ್ಲಿ ದುಷ್ಟ ಮತ್ತು ಶಿಷ್ಟ ಪಾತ್ರಗಳು ಇರಲೇಬೇಕು. ಇವರಿಬ್ಬರ ನಡುವಿನ ತಿಕ್ಕಾಟ ನಾಟಕದ ಹೆಜ್ಜೆಗಳನ್ನು ವಿಸ್ತರಿಸುತ್ತದೆ. ನಾಟಕಕಾರನಿಗೆ ಕಲ್ಪನೆಗೆ ತಕ್ಕಂತೆ ದುಷ್ಟನೋ ಶಿಷ್ಟನೋ ಎದ್ದುಕಾಣುತ್ತಾನೆ. ಖೇಡಗಿಯವರ ನಾಟಕಗಳಲ್ಲಿ ಸ್ತ್ರೀಪಾತ್ರ ಕೇಂದ್ರಿತಕ್ಕೂ ಹೆಚ್ಚಿನ ಆದ್ಯತೆಯಿದೆ. ಹೆಣ್ಣಿನ ಸಹನಶೀಲತೆ, ಪ್ರೀತಿ, ಮಮತೆ, ಮುನಿಸು, ಕುಟಿಲತೆ,

ಕುಹಕ, ಪಾತಿವ್ರತ್ಯತೆ, ಕುಟುಂಬ ಪ್ರೇಮ ಮುಂತಾದ ಮುಖಗಳು ಕಾಣಸಿಗುತ್ತವೆ. ಈ ನಾಟಕಗಳಲ್ಲಿ ಕರ್ತೃವು ತನ್ನ ಸಮಕಾಲೀನ ವೈಚಾರಿಕತೆಗಳನ್ನು ಬಿತ್ತರಿಸಿರುವುದು ವಿಶೇಷ. ಪುರುಷೋತ್ತಮರೂ ಅವರ ನಾಟಕಗಳಲ್ಲಿ ಇಣುಕುತ್ತಾರೆ. ಸಮಕಾಲೀನ ಸಾಮಾಜಿಕ ಅಧ್ಯಯನದ ದೃಷ್ಟಿಯಿಂದ(ರಂಗ ಸಾಹಿತ್ಯ ಮುಖೇನ) ಖೇಡಗಿಯವರ ನಾಟಕಗಳು ಮುಖ್ಯವಾದವು.

ಖೇಡಗಿಯವರ ನಾಟಕಗಳು ಸಾಮಾಜಿಕ, ಐತಿಹಾಸಿಕ, ಭಕ್ತಿಪ್ರಧಾನ ಮತ್ತು ಜಾನಪದ ಪ್ರಕಾರದವು. ಅವರ ಸಾಮಾಜಿಕ ನಾಟಕಗಳು ರೂಢಿಗತ ಸಾಮಾಜಿಕ ಚೌಕಟ್ಟಿನವು. ಸಮಕಾಲೀನ ಸಮಾಜದ ಗುಣದೋಷಗಳನ್ನು ಹೇಳಿ, ನಿವಾರಿಸುವ ಸೂತ್ರವೂ ಅಲ್ಲಲ್ಲಿ ಕಂಡುಬರುತ್ತದೆ. ಮನುಜನಲ್ಲಿರುವ ದ್ವೇಷ, ಅಸೂಯೆ, ವಿಶ್ವಾಸದ್ರೋಹ, ಅನ್ಯಾಯ, ಅತ್ಯಾಚಾರ ಮುಂತಾದವುಗಳನ್ನು ತೊಳೆದುಹಾಕಿ ಶಾಂತಿ, ಸೌಹಾರ್ದತೆ, ಭಾವೈಕ್ಯತೆ, ಶ್ರಮಜೀವತ್ವ, ಸಾಂಸಾರಿಕ ಗುಣ, ಪರಂಪರೆ , ಸಂಸ್ಕೃತಿಗಳ ಪ್ರೇಮವನ್ನು ಒಡಮೂಡಿಸುವುದನ್ನು ಕೂಡ ಕಾಣುತ್ತೇವೆ. ಈ ನಿಟ್ಟಿನಲ್ಲಿ 'ನಿಮ್ಮ ಹೆಂಡತಿ ನಾನಲ್ಲ'. 'ಮಾತು ಅಂಗಾರ ಮೌನ ಬಂಗಾರ'. 'ತಾಯಿಯ ಋಣ ಹಾಲಿನ ಗುಣ', 'ಅಪ್ಪನ ಗಂಡ ಅವ್ವ' ಮುಂತಾದ ನಾಟಕಗಳನ್ನು ಹೆಸರಿಸಬಹುದು. ಹಾಳಾಗುತ್ತಿರುವ ಸಾಮಾಜಿಕ ಸಂಬಂಧಗಳನ್ನು ನಾಟಕದ ಮುಖಾಂತರ ಒಗ್ಗೂಡಿಸಿ ಅದನ್ನು ಪ್ರೇಕ್ಷಕರಿಗೆ ಉಣಬಡಿಸುವ ರೀತಿ ರುಚಿಕಟ್ಟನ್ನಾಗಿ ಮಾಡುವಲ್ಲಿ ಖೇಡಗಿಯವರನ್ನು ಮೀರಿಸುವವರಿಲ್ಲ. ಸಾಮಾಜಿಕ ಸಂಬಂಧಗಳನ್ನು ಪೋಷಿಸುವಲ್ಲಿ ಅವರ 'ಕನೆಕ್ಟಿವಿಟಿ ಥಿಯರಿ' ಚೆನ್ನಾಗಿ ಕೆಲಸ ಮಾಡುತ್ತದೆ. ಖೇಡಗಿಯವರು ಬರೆದ ೫೧ ನಾಟಕಗಳಲ್ಲಿ ಪ್ರತಿ ಸಾಮಾಜಿಕ ನಾಟಕ ಒಂದೊಂದು ನವೀನ ಸಮಸ್ಯೆಗಳನ್ನೇ ಬಿಚ್ಚಿಡುತ್ತದೆ ಮತ್ತು ಅದಕ್ಕೆ ಪರಿಹಾರವನ್ನೂ ಸೂಚಿಸುತ್ತದೆ. ಸಮಸ್ಯೆ ಇದ್ದಾಗ ಪರಿಹಾರವೂ ಬೇಕಲ್ಲವೇ?

ನರಗುಂದದ ಬಾಬಾಸಾಹೇಬ ಮತ್ತು ಸಂಗೊಳ್ಳಿ ರಾಯಣ್ಣ ನಾಟಕಗಳು ರಾಷ್ಟ್ರ ಪ್ರೇಮ ಜಾಗೃತಿಯಲ್ಲಿ ತ್ಯಾಗ, ಬಲಿದಾನಗಳನ್ನು ಒತ್ತುಕೊಟ್ಟು ಹೇಳುವಲ್ಲಿ ವೀರರ ಸಾಹಸಗಾಥೆಗಳನ್ನು ಮನದ ಮೂಲೆ ಮೂಲೆಯಲ್ಲಿ ಅನುರಣಿಸುವಂತೆ ಮಾಡುವಲ್ಲಿ ಸಾಕಷ್ಟು ಯಶಸ್ವಿಯಾಗಿವೆ. ಖೇಡಗಿಯವರಿಗೆ ಅವರ ಸಾಮರ್ಥ್ಯವನ್ನು , ಪಾತ್ರಶಕ್ತಿಯನ್ನು ಒರೆಗಲ್ಲಿಗೆ ಹಚ್ಚಿ ಮೇರು ಶೃಂಗಕ್ಕೇರಿಸಿದ ನಾಟಕವೆಂದರೆ 'ಸಂಗೊಳ್ಳಿ ರಾಯಣ್ಣ'. ಇದು ಅವರ ನೆಚ್ಚಿನ ಪಾತ್ರವೂ ಅಹುದು. ಈ ಪಾತ್ರಕ್ಕೆ ಬೇಕಿದ್ದುದು ಆಕ್ರೋಶಭರಿತ ಬಿರುಸಿನ, ತಟ್ಟುಮಾತುಗಳು. ಅವುಗಳ ಪ್ರಮಾಣ ಇಲ್ಲಿ ಹೇರಳ.

ಭಕ್ತಿಪ್ರಾಧಾನ ನಾಟಕಗಳಲ್ಲಿ 'ಯಲ್ಲಾಲಿಂಗೇಶ್ವರ ಮಹಾತ್ಮೆ', 'ಗರಗದ ಮಡಿವಾಳೇಶ್ವರ ಮಹಾತ್ಮೆ' 'ಶಂಕರಲಿಂಗ ಮಹಾತ್ಮೆ' ಖೇಡಗಿಯವರ ಅಧ್ಯಯನ ಪ್ರತಿಭೆಯನ್ನು ಢಾಳಾಗಿ ಕಾಣಬಹುದು. ಭಾವೈಕ್ಯತೆ ಬೆಸೆದ ಆಯಾಯ ಪ್ರದೇಶದ ಖ್ಯಾತ ಸಂತರ, ಶರಣರ, ಸಿದ್ಧಿಪುರುಷರ ಕಥಾನಕಗಳನ್ನು ಒಳಗೊಂಡವು. ಸಮಾಜವನ್ನು ಉದ್ಧರಿಸುವಲ್ಲಿ ಈ ಸಂತರ ಪವಾಡ, ಕಾಯಕ ಜೀವನ, ನೀತಿಬೋಧೆ ಮುಂತಾದವುಗಳ ಅತ್ಯುತ್ತಮ ನಿರೂಪಣೆ ಇರುವುದನ್ನು ಕಾಣುತ್ತೇವೆ.

ಈ ನಾಲ್ಕೂ ಪ್ರಕಾರದ ನಾಟಕಗಳಲ್ಲಿ ಪಾತ್ರಗಳು ನಾಟಕದ ಮುಕ್ತಾಯದವರೆಗೂ ಜೀವಂತವಾಗಿ ಇಡುವುದಕ್ಕೆ ಬಲವಾದ ಕಾರಣವೆಂದರೆ ಆಡುನುಡಿಯ, ಗ್ರಾಂಥಿಕ ಭಾಷೆಯ ಜಾಣತನದ ಮಿಶ್ರಣ ಮತ್ತು ಲವಲವಿಕೆಯ ಸಂಭಾಷಣೆಗಳು. ಪ್ರೇಕ್ಷಕರು ಈ ಸಂಭಾಷಣೆಗಳನ್ನು ಸದಾ ಗುನುಗುಟ್ಟುವಂತೆ ಸೃಷ್ಟಿಸಿದ ಪಾತ್ರ, ಪಡೆದ ವಸ್ತು ಮಾಡುವಲ್ಲಿ ಪ್ರೇರಕವೂ ಹೌದು. ಅವರ ನಾಟಕಗಳಲ್ಲಿ ಪ್ರಜ್ಞೆಯಿಲ್ಲದೇ ಸೃಷ್ಟಿಸಿದ ಪಾತ್ರ, ವಸ್ತು, ಸಂಭಾಷಣೆಗಳಿಲ್ಲ ಅಥವಾ ಸುಖಾಸುಮ್ಮನೆ ಏನೋ ಒಂದನ್ನು ಬರೆದು ರಂಗಭೂಮಿಗೆ ನೀಡುವ ಖೋಟಾ ಪ್ರಯತ್ನವೂ ಇಲ್ಲ. ಹಾಗಾಗಿ ಸುಮಾರು ಐದು ದಶಕಗಳಿಂದ ಅವರ ನಾಟಕಗಳು ಬೆಲೆ ಮತ್ತು ಮೌಲ್ಯವನ್ನು ಒಂದಿನಿತೂ ನಷ್ಟ ಮಾಡಿಕೊಳ್ಳದ '೨೪ಕ್ಯಾರೆಟ್'ನ ಪ್ರಮಾಣದವು. ವೃತ್ತಿರಂಗಭೂಮಿ ಸಾಹಿತ್ಯಕಾರರ ಮತ್ತು ರಂಗಕಲಾವಿದರಲ್ಲಿ ಎರಡನೆಯ ಘಟ್ಟಕ್ಕೆ ಸೇರಿದ ಇವರು ಪಿ. ಬಿ. ಧುತ್ತರಗಿ, ಸಾಳುಂಕೆ ಮುಂತಾದವರ ಸಾಲಿನಲ್ಲಿ ಸೇರುವ ಅಪರೂಪದ ನಾಟಕಕಾರರು.

ಯಾವುದೇ ನಾಟಕವಿರಲಿ ಪಾತ್ರಧಾರಿಯ ಹೆಸರು ಒಪ್ಪುವಂತಿರಬೇಕು, ಉಚಿತಯೋಗ್ಯವೂ ಆಗಿರಬೇಕು. ಉದಾ: ಟೋಣಪನೊರ್ವನಿಗೆ ಮಲ್ಲಪ್ಪ ಎಂದು ಹೆಸರಿಡುವುದು, ದುಷ್ಟನೊಬ್ಬನಿಗೆ ಗಾಂಧಿಯ ಹೆಸರನ್ನಿಡುವುದು ಎಲ್ಲೋ ಔಚಿತ್ಯ ಮೀರಿದ್ದನ್ನು ಸೂಚಿಸುತ್ತದೆ ಮತ್ತು ಆಭಾಸವುಂಟು ಮಾಡುತ್ತದೆ. ಖೇಡಗಿಯವರು ನಾಟಕ ರಚಿಸುವಾಗ ಪಾತ್ರಗಳ ಧೋರಣೆ, ಗುಣ, ಸ್ವಭಾವ, ರೀತಿ, ನೀತಿ. ಒಲವು, ಚೆಲುವು ಮುಂತಾದವುಗಳನ್ನು ಲಕ್ಷ್ಯಿಸಿ ರೌದ್ರ, ಶಾಂತ, ವೀರ ರಸಕ್ಕೊಪ್ಪುವಂತೆ ಪಾತ್ರಗಳಿಗೆ ನಾಮಕರಣ ಮಾಡಿದ್ದಾರೆ. ನಾಟಕದ ದೃಶ್ಯ ಮತ್ತು ಪಾತ್ರಗಳ ಕುರಿತು ಪೂರ್ವಾಲೋಚಿಸಿ ಒಂದು ತಿಂಗಳಿಂದ ಮೂರು ತಿಂಗಳೊಳಗೆ ಹಸ್ತಪ್ರತಿಗಳನ್ನು ತಯಾರಿಸುವಲ್ಲಿ ಅವರು ಸಿದ್ಧಹಸ್ತರು.

ಖೇಡಗಿಯವರು ಬರೆದ ನಾಟಕಗಳಲ್ಲಿ ಅವರು ವಿಲನ್, ನಾಯಕ ಮತ್ತು ಹಾಸ್ಯಗಾರನಿಗೆ ನಾಟಕಗಳಲ್ಲಿ ಪಾತ್ರಗಳನ್ನು ಬದಲಿಸುತ್ತಿರುವುದು

ಕಂಡುಬರುತ್ತದೆ. ನಟನಾದವನು ಒಂದೇ ಪಾತ್ರಕ್ಕೆ ಜೋತುಬೀಳಬಾರದು. ಆಕಸ್ಮಿಕಗಳು ಉಂಟಾದಾಗ ಎದುರಿಸುವ ಧೈರ್ಯ ಬರಬೇಕೆಂಬ ಧೋರಣೆ ಅಲ್ಲಿ ಅಡಕವಾಗಿದೆ.

## "ನಾಟಕಗಳೆಂದರೆ ಸಂಚಾರಿ ವಿಶ್ವವಿದ್ಯಾಲಯ"

ನಾಟಕಗಳ ಕುರಿತು ಚಿಂತನಾಪೂರ್ವಕವಾಗಿ ಖೇಡಗಿಯುವರ ಅನಿಸಿಕೆಗಳಿವು. "ನಾಟಕಗಳಿಂದ ಸಮಾಜಕ್ಕೆ ಮನರಂಜನೆ ಸಿಗಬೇಕು, ಬದುಕನ್ನು ಸುಧಾರಿಸುವ ಸಂದೇಶಗಳಿರಬೇಕು. ಬದುಕಿನ ಚಿಂತನೆ ನಾಟಕಗಳ ಮುಖಾಂತರ ನಡೆಯಬೇಕು. ಇಂದು ನಾಟಕ ನೋಡಿ ಮರುದಿನ ಮರೆತುಬಿಡುವಂತಾಗ ಬಾರದು. ಕೆಲವು ದಿನಗಳವರೆಗೂ ನಾಟಕದ ಸನ್ನಿವೇಶಗಳು ತಲೆಯಲ್ಲಿ ಗುಯ್‌ಗುಡುತ್ತಿರಬೇಕು, ರಿಕ್ಯಾಪ್ಚುರೇಶನ್ ಗುಣ ಹೊಂದಿರಬೇಕು. ನಾಟಕಗಳೆಂದರೆ ಸಂಚಾರಿ ವಿಶ್ವವಿದ್ಯಾಲಯ. ಆ ವಿಶ್ವವಿದ್ಯಾಲಯದಲ್ಲಿ ಕೀರ್ತಿ ತರುವಂತಹ ಕಲಾವಿದರು, ನಾಟಕಕಾರರು ಬೆವರು ಸುರಿಸುತ್ತಿರಬೇಕು. ಅಕ್ಷರ ಜೋಡಿಸಿ ಒಂದು ನಾಟಕ ಬರೆಯುವುದು ಒಂದು ಮಹಾಕೌಶಲ್ಯ".

## ಸ್ವಾರ್ಥ ಚಿಂತೆಯಲ್ಲಿ ಮುಳುಗಿ ಕಲೆಯನ್ನು ಮರೆಯಬಾರದು

"ಎಲ್ಲಾ ಬಿಟ್ಟು ಕಲೆಗಾಗಿ ಚಿಂತಿಸಿ, ಕಲೆಗಾಗಿ ಬದುಕಿ ಹಾಳಾದವರು ಅನೇಕ. ಬರೀ ಸಂಬಳದ ಮೇಲೆ ಕಣ್ಣಿಟ್ಟು ಪ್ರೇಕ್ಷಕರ ಮನದಿಂಗಿತ ಅರಿಯದೇ ಸ್ವಾರ್ಥದಲ್ಲಿ ಮುಳುಗಿರುವ ಕಲಾವಿದನಿಂದ ಕಲೆಯ ಏಳಿಗೆ ಆಗಲು ಸಾಧ್ಯವಿಲ್ಲ" ಎಂದು ಖೇಡಗಿಯವರು ನೋವಿನಿಂದಲೇ ಹೇಳುತ್ತಾರೆ.

## ಕಲೆ ಮತ್ತು ಬದುಕಿನಲ್ಲಿ ನೆಮ್ಮದಿ ಕಂಡುಕೊಂಡ ಖೇಡಗಿ

ನಾಟಕ ಸೇರಿ ಬಹಳಷ್ಟು ಕಳೆದುಕೊಂಡವರನ್ನು ನೋಡುತ್ತಿರುವಾಗ ಅತ್ಯಂತ ಜಾಗರೂಕ ಹೆಜ್ಜೆಯನ್ನಿಟ್ಟ ರಂಗಸಾಹಿತಿ, ಕವಿ, ಕುಶಲಿ, ಶ್ರದ್ಧಾವಂತ, ಭಕ್ತಿವಂತ, ಯುಕ್ತಿವಂತ ಶ್ರೀ ಖೇಡಗಿಯವರು ಇಲ್ಲಿಯವರೆಗೂ ತಮ್ಮ ಸಮಕಾಲೀನರಲ್ಲಿ ಯಾರಿಗೂ ಅಂಗಾಲಾಚಿ ಬೇಡಿಕೊಳ್ಳುವ ಪ್ರಸಂಗಎದುರಾಗಿಲ್ಲ. ಅವರದು ಅತ್ಯಂತ ಗೌರವಾನ್ವಿತ ಬದುಕು ಎಂದು ಅವರ ಒಡನಾಡಿಗಳು ಅಭಿಮಾನದಿಂದಲೇ ಹೇಳುತ್ತಾರೆ. "ಮತ್ತೊಬ್ಬರಿಗೆ ಕೊಡುವ ಶಕ್ತಿ ನನಗಿರದಿದ್ದರೂ ಬೇಡುವ ಅಶಕ್ತತೆಯಂತೂ ನನಗಿಲ್ಲ. ರಂಗದೇವಿಯೇ ನನಗೆ ಸಕಲ ನೆಮ್ಮದಿಯನ್ನು

ಕೊಟ್ಟು ಕೈಹಿಡಿದು ನಡೆಸುತ್ತಿದ್ದಾಳೆ". ಎಂದು ಖೇಡಗಿಯವರು ಸಂತೋಷಭರಿತ ರಾಗಿ ಹೇಳುತ್ತಾರೆ.

## ಕನ್ನಡ ಪ್ರೇಮ ಮತ್ತು ಕರಕಿಯ ಬಳ್ಳಿ

ಖೇಡಗಿಯವರಿಗೆ ಒಟ್ಟು ಎರಡು ಮಕ್ಕಳು. ಮೊದಲನೆಯವನು ಜಮೀರ್, ಎರಡನೆಯವಳು ರುಕ್ಸಾನಾ. ಈ ಎರಡು ಮಕ್ಕಳ ರಕ್ತದಲ್ಲಿ ಕಲೆಯ ಅಂಶ ಬೆರೆತು ನಾಳೆ ಅವರು ರಂಗಭೂಮಿಗೆ ಅಡಿಯಿಟ್ಟರೆ ಕನ್ನಡ ಭಾಷೆ ತೊಡಕಾಗಬಾರದು, ಏನೋ ಹೇಳಲು ಹೋಗಿ ಮತ್ತೇನನ್ನೋ ಹೇಳಿದರೆ ಕೆಟ್ಟ ಹೆಸರು ಬರುವುದು ಖಚಿತ ಎಂದು ಮುನ್ನೆಚ್ಚರಿಕೆ ವಹಿಸಿ ಈ ಎರಡೂ ಮಕ್ಕಳಿಗೆ ಕನ್ನಡ ಮಾಧ್ಯಮ ಶಾಲೆಯಲ್ಲಿ ಶಿಕ್ಷಣ ಕೊಡಿಸಿದ್ದಾರೆ. ಹಿರಿಯ ಮಗ ಜಮೀರ್ ಪಿಯುಸಿ ಮುಗಿಸಿ, ವಿವಾಹಿತನಾಗಿ ಈಗ ನಾಟಕ ಪುಸ್ತಕಗಳ ಅಂಗಡಿಯ ವ್ಯವಹಾರ ನೋಡಿಕೊಳ್ಳುತ್ತಿದ್ದಾರೆ. ಎರಡನೆಯ ಮಗಳು ರುಕ್ಸಾನಾ ಎಸ್.ಎಸ್.ಎಲ್.ಸಿ ಮುಗಿಸಿ ವಿವಾಹಿತಳಾಗಿ ಸೊಲ್ಲಾಪೂರ ನಿವಾಸಿಯಾಗಿದ್ದಾಳೆ. ಹೆಂಡತಿ ಸಲೀಮಾ ಮತ್ತು ಗಂಡು ಮೊಮ್ಮಕ್ಕಳ ಒಡನಾಟದಲ್ಲಿ ಅವರು ರಂಗಚಟುವಟಿಕೆಗೆ ಎಳ್ಳಷ್ಟೂ ಭಂಗ ತಂದುಕೊಂಡಿಲ್ಲ. ಹೊಳೆ ದಂಡೆಯಲ್ಲಿರುವ ಕರಕಿಯ ಹಾಗೆ ಅವರ ರಂಗಬಳ್ಳಿಗೆ ಸಾವಿರ ಸಾವಿರದ ಕಾಲು.

## ಖೇಡಗಿಯವರು ಮೆಚ್ಚಿಕೆಯಾಗುವುದು ಹೀಗೆ

ವೃತ್ತಿ ಇದ್ದಲ್ಲಿ ಪೈಪೋಟಿ ಸಹಜ. ಅದು ಆರೋಗ್ಯಕರವಾಗಿರಬೇಕು. ಈ ನಿಟ್ಟಿನಲ್ಲಿ ಸಾಧನೆಯ ಶಿಖರಕ್ಕೇರುತ್ತಿರುವವರನ್ನು ಕಂಡರೆ ಕೆಲವರಿಗೆ ಅಸೂಯೆ. ಹೊಟ್ಟೆಕಿಚ್ಚಿನವರು ಖೇಡಗಿಯವರನ್ನು ಕಾಡಿಸದೆ ಬಿಟ್ಟಿಲ್ಲ. ಅವರು ಯಾವುದೇ ಕಲಾವಿದನ ಕುರಿತಾಗಿ ಹೆಮ್ಮೆಯಿಂದಲೇ ಮಾತನಾಡುತ್ತಾರೆ. ಅವರದು ಆರೋಗ್ಯಪೂರ್ಣವಾದ ಹಾದಿ. ಕನ್ನಡಿಗರಿಗೆ ಶುದ್ಧಾತಿಶುದ್ಧ ಅತ್ಯುತ್ತಮ ಸಂದೇಶದ ಸಾಮಾಜಿಕ ಮತ್ತು ಪ್ರಗತಿಪರ ಚಿಂತನೆಯ, ಭಾವೈಕ್ಯತೆ, ಸೌಹಾರ್ದತೆ ಮೂಡಿಸುವ, ಗುರುಹಿರಿಯರನ್ನು ಆದರಿಸುವ, ಸ್ತ್ರೀ ಸಮಾನತೆ ಸಾರುವ, ಲಿಂಗತಾರತಮ್ಯ ನಿವಾರಿಸುವ, ಊರಿಗೆ ಉಪಕಾರಿಯಾಗುವ ಅನೇಕ ವಸ್ತುಗಳನ್ನಿಟ್ಟುಕೊಂಡು ಸಮಕಾಲೀನರಲ್ಲಿ ವಿಭಿನ್ನವಾಗಿ ಕಾಣುವ ನಾಟಕಗಳನ್ನು ನೀಡಿದ್ದಾರೆ. ತಾವು ಬರೆದ ನಾಟಕಗಳನ್ನು ಯಾರಿಗೂ ಪರಿಷ್ಕರಣೆಗಾಗಿ ನೀಡದೇ ಹತ್ತಾರು ಬಾರಿ ತಾವೇ ತಿದ್ದಿ ತೀಡಿ ಒಪ್ಪುಗೊಳಿಸುತ್ತಿದ್ದುದು ವಿಶೇಷ. ಕೊಟ್ಟ ಯಾವುದೇ ಪಾತ್ರಗಳನ್ನು

ಸ್ವೀಕರಿಸಿ, ಶ್ರದ್ಧೆಯಿಂದ, ಬದ್ಧತೆಯಿಂದ ಅಚ್ಚುಕಟ್ಟಾಗಿ ಜೀವತುಂಬುತ್ತಾರೆ. ಎಲ್ಲರಿಗೂ ಆತ್ಮೀಯತೆಯಿಂದ, ಸೌಜನ್ಯದಿಂದ ಮಾತನಾಡಿಸುವ ಅವರಲ್ಲಿ ಓರೆ–ಕೋರೆಗಳು ವಿರಳಾತಿವಿರಳ. ಹೀಗಾಗಿ ಸಹಜವಾಗಿ ಎಲ್ಲರ ಮನಗೆಲ್ಲುತ್ತಾರೆ. ವ್ಯಸನಗಳಿಂದ ಗಾವುದ ದೂರವಿರುವ ಅವರ ನಡೆ ಅನುಕರಣೀಯ. ಈ ೭೦ರ ವಯಸ್ಸಿನಲ್ಲಿಯೂ ಕ್ರಿಯಾಶೀಲತೆಯನ್ನು ಉಳಿಸಿಕೊಂಡು ರಂಗಕ್ಷೇತ್ರಕ್ಕೆ ತಮ್ಮ ಬದುಕನ್ನೇ ಸವೆಸಿದ ಅವರಿಗೆ ವೃತ್ತಿರಂಗಭೂಮಿ ಇನ್ನಷ್ಟು ಕಾಲ ಬಾಳಬೇಕು. ಅಜ್ಞಾತ ಕಲಾವಿದರಿಗೆ ಗುರುತಿಸುವಂತಾಗಬೇಕು ಎನ್ನುವ ಕನಸು ಇದೆ. ಅವರ ನಾಳಿನ ಚಿಂತೆ ಸಾಕಾರವಾಗಲಿ, ಅದಕ್ಕೆ ಎಲ್ಲರ ಬಾಹುಬಲ, ಬುದ್ಧಿಬಲ, ಆತ್ಮಬಲ ಬೇಕೇ ಬೇಕು.

# ಖೇಡಗಿಯವರ ಪರಿಕಲ್ಪನೆಯ ರಂಗಬಾವುಟ

ತಮ್ಮ ಪರಿಕಲ್ಪನೆಯ ರಂಗಬಾವುಟದ ಕುರಿತಾಗಿ ನಾಟಕಕಾರ ಶ್ರೀ ಖೇಡಗಿಯವರು ಕೆಲ ವಿವರಣೆಯನ್ನು ನೀಡಿದ್ದಾರೆ.

ಮಾನ್ಯರೆ,

ಎಸ್. ಎಮ್. ಖೇಡಗಿ, ಅಧ್ಯಕ್ಷ ರಂಗಚೇತನ ಸಂಸ್ಥೆ ಬಿಜಾಪುರ ನಾಟಕ ಲೇಖಕ, ರಂಗಕಲಾವಿದ ಹಾಗೂ ರಂಗನಿರ್ದೇಶಕನಾಗಿ, ಕಳೆದ ೫೦ ವರ್ಷಗಳಿಂದ ರಂಗಭೂಮಿ ಸೇವೆ ಮಾಡುತ್ತಲಿರುವೆ. ನನಗೆ ತಿಳಿದು ಬಂದಂತೆ ಈಗ ಪ್ರತಿಯೊಂದು ಇಲಾಖೆ, ಸಂಘ, ಶಾಲಾ, ಕಾಲೇಜು, ಸಾಹಿತ್ಯ ಪರಿಷತ್ತು ಹಾಗೂ ಕ್ರೀಡಾ ಇಲಾಖೆ ಹೀಗೆ ಪ್ರತಿಯೊಂದಕ್ಕೂ ತನ್ನದೇ ಆದ ಲಾಂಛನ, ಧ್ವಜ ಇದೆ. ಆದರೆ ಚಲಿಸುವ ವಿಶ್ವವಿದ್ಯಾಲಯ ಅಂತ ರಂಗಭೂಮಿಗೆ ಹೇಳುತ್ತಾರೆ. ಅಲ್ಲದೇ ಪ್ರತಿವರ್ಷ ಮಾರ್ಚ ೨೭ರಂದು ವಿಶ್ವರಂಗಭೂಮಿ ದಿನ ಅಂತ ಆಚರಣೆ ಮಾಡುತ್ತಾರೆ. ಸ್ವಾತಂತ್ರ ಸಂಗ್ರಾಮದಲ್ಲಿ ಅನೇಕ ಸ್ವಾತಂತ್ರ ಹೋರಾಟಗಾರರಿಗೆ ಆಶ್ರಯ ತಾಣವಾದ ರಂಗಭೂಮಿಗೆ ಇಂದಿನವರೆಗೂ ಗುರುತಿಸಿಕೊಳ್ಳಲು ರಂಗಭೂಮಿಗೆ ಧ್ವಜ ಇಲ್ಲ ಅಂದರೆ ಇದು ಅತಿ ಖೇದದ ವಿಷಯ. ನಾನು ರಂಗಭೂಮಿಗೆ ಸಂಬಂಧಪಟ್ಟ ಅನೇಕ ಕಾರ್ಯಕ್ರಮದಲ್ಲಿ ರಂಗಭಾಗಿಯಾಗಿ ರಂಗಭೂಮಿ ಧ್ವಜದ ಬಗ್ಗೆ ಚರ್ಚೆ ಹಾಗೂ ವಿಚಾರ ಮಾಡುತ್ತಾ ಬಂದಿರುವೆ. ಆದರೆ ಇದುವರೆಗೂ ಧ್ವಜದ ಬಗ್ಗೆ ಅಲಕ್ಷ್ಯ ಮಾಡಿದ್ದಾರೆ. ರಂಗಭೂಮಿಯ ಯಾವುದೇ ವಿಷಯಗಳಾಗಲಿ ಬೇಗನೆ ನಿರ್ಣಯಗೊಳ್ಳದೆ ಹಾಗೆ ಉಳಿಯುತ್ತಿದೆ. ರಂಗಭೂಮಿಗೆ ಸಂಬಂಧಪಟ್ಟ ಯಾವುದೇ ಕಾರ್ಯಕ್ರಮ ವೃತ್ತಿ ರಂಗಭೂಮಿ, ಹವ್ಯಾಸಿರಂಗಭೂಮಿ, ಗ್ರಾಮೀಣರಂಗಭೂಮಿ, ಅಂತಾ ಭೇದ ಮಾಡದೆ ರಂಗಭೂಮಿ ಧ್ವಜ ಅಂತಾ ಕಾರ್ಯಕ್ರಮದ ಮುಂಚೆ ರಂಗಭೂಮಿ ಧ್ವಜಾರೋಹಣ ಮಾಡಿ ಕಾರ್ಯಕ್ರಮ ಪ್ರಾರಂಭಿಸಿದರೆ ಕಾರ್ಯಕ್ಕೆ ಹೆಚ್ಚಿನ ಮೆರಗು ಬರುತ್ತದೆ. ರಂಗಭೂಮಿಗೂ ನಾವು ಗೌರವ ಸಲ್ಲಿಸಿದಂತಾಗುತ್ತದೆ. ಕಾರಣ ಈಗ ತಾನೆ ರಂಗಭೂಮಿ ಧ್ವಜದ ಬಗ್ಗೆ ವಿಚಾರ ಮಾಡಿ ಧ್ವಜದ ರೂಪ ರೇಷೆಗಳನ್ನು(ಚಿತ್ರ)ವಿವರಣೆಯೊಂದಿಗೆ ತಮ್ಮ ಅಭಿಪ್ರಾಯಕ್ಕಾಗಿ ಕಳಿಸಿಕೊಟ್ಟಿರುವೆ.

## ರಂಗಭೂಮಿ ಧ್ವಜದ ವಿವರಣೆ

೧) ಧ್ವಜಾರೋಹಣ ಮಾಡುವ ಧ್ವಜದ ಅಳತೆ ಎತ್ತರಕ್ಕೆ ೨೧ ಅಂಗುಲ ಇದ್ದರೆ, ೩೩ ಅಂಗುಲ ಉದ್ದ ಇರಬೇಕು. ಈ ಅಳತೆ ಥೇಟರಿನ ಚೌಕಟ್ಟು(ಫ್ರೇಮ್) ಎತ್ತರಕ್ಕೆ ೧೪ ಅಡಿ ಇದ್ದು, ೨೨ ಅಡಿ ಉದ್ದ(ಸರ್ವೆ ಸಾಮಾನ್ಯ) ಇರುವುದು ಈ ಅಳತೆಯ (ಪ್ರಮಾಣ : ೧ ಅಡಿಗೆ ೧. ೫ ಅಂಗುಲದಂತೆ) ರಂಗಭೂಮಿ ಧ್ವಜದ ಅಳತೆ ಪ್ರಮಾಣ ಇದೆ.

೨) ಬಣ್ಣಗಳು: ಬಿಳಿ, ಹಳದಿ, ಕೆಂಪು ಈ ಮೂರು ಬಣ್ಣಗಳೇ ಪ್ರಸಾಧನ ಮಾಡಲು(ಮೇಕಪ್) ಮಾಡಿಕೊಳ್ಳಲು ಉಪಯೋಗಿಸುತ್ತಾರೆ. ಅದಕ್ಕಾಗಿ ಬಿಳಿ, ಹಳದಿ, ಕೆಂಪು ಬಣ್ಣಗಳ ಬಳಸಲಾಗಿದೆ. ಕಲಾವಿದರೂ ಬಿಳಿ ಬಣ್ಣ ಹೆಚ್ಚಿಗೆ ಪ್ರಮಾಣದಲ್ಲಿ ಉಪಯೋಗಿಸುವರು, ಹಳದಿ ಬಣ್ಣ ಬಿಳಿ ಬಣ್ಣಕ್ಕಿಂತ ಕಡಿಮೆ ಉಪಯೋಗಿಸುವರು ಹಳದಿ ಬಣ್ಣ ಬಿಳಿ ಬಣ್ಣಕ್ಕಿಂತ ಕಡಿಮೆ ಉಪಯೋಗಿಸಿರುವೆ, ಇನ್ನು ಕೆಂಪು ಬಣ್ಣ ಹಳದಿ ಬಣ್ಣಕ್ಕಿಂತ ಕಡಿಮೆ ಉಪಯೋಗಿಸುವರು, ಆ ಕಾರಣಕ್ಕಾಗಿ ಧ್ವಜದಲ್ಲಿ ಬಿಳಿ ಬಣ್ಣಗಳ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಇನ್ನು ಕಲಾವಿದರೂ ಪ್ರಸಾಧನ(ಮೇಕಪ್) ಮಾಡಿಕೊಳ್ಳುವಾಗ ಕಣ್ಣು, ಹುಬ್ಬು, ಮೀಸೆ ಬರೆದುಕೊಳ್ಳಲು ಕಪ್ಪು ಬಣ್ಣ ಉಪಯೋಗಿಸುವರು. ಅದಕ್ಕಾಗಿ ರಂಗಭೂಮಿಯ ಆರಾಧ್ಯ ದೇವನಾದ ಕಪ್ಪುಬಣ್ಣದ ನಟರಾಜನ ಚಿತ್ರವನ್ನು ಚಿತ್ರಿಸಲಾಗಿದೆ.

೩) ಇನ್ನು ನಟರಾಜ ಪ್ರಭಾವಳಿಯ ಮೇಲ್ಭಾಗದಲ್ಲಿ ನಾಟ್ಯ ಶಾಸ್ತ್ರ ಬರೆದ ಭರತ ಮುನಿ ಹೇಳಿದ "ಕಾವ್ಯೇಷು ನಾಟಕಂ ರಮ್ಯಂ" ಈ ವಾಕ್ಯವನ್ನು ಕೆಳಭಾಗದಲ್ಲಿ "ರಂಗಭೂಮಿ" ಎಂದು ಬರೆದಿರುವೆ, ಕನ್ನಡ ಭಾಷೆಯಲ್ಲಿ ಬರೆದರೆ ಇದು ಕರ್ನಾಟಕಕ್ಕೆ ಸೀಮಿತ ರಂಗಭೂಮಿ ಧ್ವಜವಾಗಬಹುದು. ಒಂದು ವೇಳೆ ಭಾರತದ ರಂಗಭೂಮಿಗೆ ಒಂದೇ ಧ್ವಜ ಇರಲಿ ಎನ್ನುವುದಾದರೆ ರಾಷ್ಟ್ರದ ರಾಜ್ಯಗಳಲ್ಲಿ ಭಾಷೆಯ (ಲಿಪಿಯ) ಅಡೆತಡೆ ಬರಬಾರದು ಅನ್ನುವ ಉದ್ದೇಶದಿಂದ (ದೇವನಾಗರಿ) ಸಂಸ್ಕೃತ ಭಾಷೆಯಲ್ಲಿ ಬರೆಯಲಾಗಿದೆ,

ಯಾವುದಕ್ಕೂ ರಂಗಕರ್ಮಿಗಳು, ರಂಗದಿಗ್ಗಜರು, ವಿದ್ವಾಂಸರು, ಬುದ್ಧಿಜೀವಿಗಳು, ಗಣ್ಯರು ಆದ ತಮ್ಮ ಅಭಿಪ್ರಾಯ ಸಲಹೆ ನೀಡಿದರೆ ಶಿರಸಾಪಾಲಿಸುವೆ ಎಂದು ಖೇಡಗಿಯವರು ಅಭಿಮಾನಿಗಳಲ್ಲಿ ವಿನಂತಿಸಿ ಕೊಳ್ಳುವುದನ್ನು ಮರೆಯುವುದಿಲ್ಲ.

ಖೇಡಗಿಯವರ ಪರಿಕಲ್ಪನೆಯ ರಂಗಧ್ವಜಕ್ಕೆ ಶೀಘ್ರವೇ ಇಲಾಖೆಯಿಂದ

ಮಾನ್ಯತೆ ದೊರೆತರೆ ಅದಕ್ಕಿಂದ ಸಂತೋಷ ಬೇರಿಲ್ಲ. ಇದು ಲಗುಬಗೆಯಿಂದ ಆಗಬೇಕಾದ ಕೆಲಸ. ಈ ಪರಿಕಲ್ಪನೆಯ ಹಿಂದೆ ಅವರ ಆಳವಾದ ಅಧ್ಯಯನ ಮತ್ತು ಚಿಂತನೆಗಳಿರುವುದು ಸುಳ್ಳಲ್ಲ.

## ರಂಗಚೇತನ

ಖೇಡಗಿಯವರು ಸ್ಥಾಪನೆ ಮಾಡಿಕೊಂಡ ವೃತ್ತಿರಂಗಭೂಮಿಯ ಹವ್ಯಾಸಿ ರೆಜಿಸ್ಟರ್ಡ್ ಸಂಸ್ಥೆ ೧೯೯೨ರಲ್ಲಿ ಜನ್ಮ ತಾಳಿದೆ. ಇದಕ್ಕೀಗ ೨೪ರ ತಾರುಣ್ಯ. ಪ್ರತಿವರ್ಷ ಅಗದಿ ಗಟ್ಟಿಯಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸದಾ ಒಂದಿಲ್ಲೊಂದು ಸುದ್ದಿಯಲ್ಲಿರುವ ಕ್ರಿಯಾಶೀಲ ಸಂಸ್ಥೆ ಇದು. ದಿ ೨೨-೦೯-೨೦೧೪ರಂದು ಬಿಜಾಪುರದ ರಂಗಮಂದಿರದಲ್ಲಿ ಡಾ ಪುಟ್ಟರಾಜ ಗವಾಯಿಗಳ ಪುಣ್ಯತಿಥಿಯನ್ನು ಈ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾಗಿತ್ತು. ಸಂಜೆ ಜರುಗಿದ ಸಮಾರೋಪ ಸಮಾರಂಭದಲ್ಲಿ ನಾನು ಮತ್ತು ರಂಗಚಿಂತಕ ಗುಡಿಹಳ್ಳಿ ನಾಗರಾಜ ಮುಖ್ಯ ಅತಿಥಿಗಳು. ಸಮಾರೋಪ ಸಮಾರಂಭದಲ್ಲಿ ೬೦ ಪ್ರತಿಶತಸಷ್ಟು ಜನರು ರಂಗಮಂದಿರದಲ್ಲಿದ್ದರೆ ಸಮಾರೋಪದ ನಂತರ ನಡೆದ ಜಿ. ಜಿ. ಹೆಗಡೆ ವಿರಚಿತ ಸತ್ಯ ಹರಿಶ್ಚಂದ್ರ ನಾಟಕ ನೋಡಲಿಕ್ಕೆ ದೀಡ್‌ಪಟ್ಟು ಜನ ಬಂದಿದ್ದರು. ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀ ಎಲ್. ಬಿ. ಶೇಖ್ ಮಾಸ್ತರರು ಆ ನಾಟಕ ಕಲಿಸಿದ್ದರು. ವೇದಿಕೆಯ ಕೆಳಗೆ ಮೇಲೆ, ಒಳ ಹೊರಗೆ ಅವರು ಮತ್ತು ಖೇಡಗಿಯವರು ಓಡಾಡುತ್ತ ಗಮನ ಸೆಳೆಯುತ್ತಿದ್ದರು. ಸತ್ಯಹರಿಶ್ಚಂದ್ರ ನಾಟಕ ಮಧ್ಯರಾತ್ರಿಯವರೆಗೆ ನಡೆಯಿತು. ಆ ನಾಟಕದ ಪಾತ್ರಧಾರಿಗಳೆಲ್ಲ ಬರೀ ಹೆಣ್ಣುಮಕ್ಕಳು. ನಾಟಕ ನೋಡುವವರೆಗೆ ನಿಜವಾಗಲೂ ಆ ಪಾತ್ರವಹಿಸಿದವರು ಇವರೇ ಅಂತ ಸ್ವಲ್ಪನೂ ಗೊತ್ತಾಗುತ್ತಿದ್ದಿಲ್ಲ, ಒಂದು ಮಾತಂತೂ ಖರೆ ನಾಟಕಾ ಆಡಿದರ ಹಿಂಗ್ ಆಡಬೇಕು, ಕಲಿಸಿದ್ರ ಹಿಂಗ್ ಕಲಿಸಬೇಕು, ಕಾರ್ಯಕ್ರಮ ಮಾಡೂದಿತ್ತಂದ್ರ ಶೇಖ್ ಮಾಸ್ತರ, ಖೇಡಗಿಯವರಂಗ ಮಾಡಬೇಕು ಅಂತ ಜನ ಹೇಳುವುದು ಕೇಳಿ ಭಾಳ ಖುಷಿ ಅನ್ನಸ್ತು. ಭಾಳ ಸಾಲಿ ಕಲಿತವರು ಇಷ್ಟ ಛಂದ ಯೋಜನಾ ಮಾಡೂದಿಲ್ಲಾ ಅನ್ನೋ ಮಾತು ಭಾಳಷ್ಟು ಖರೆ ಅನ್ನಸ್ತು. ಹೀಗಾಗಿ ಖೇಡಗಿಯವರು ಬರೀ ಒಬ್ಬ ವ್ಯಕ್ತಿ ಅಂತ ಹೇಳಿದರ ಅರ್ಥ ಮಾಡಿಕೊಳ್ಳಲಾಗದೇ ಹೇಳಿದ ಮಾತಾಗ್ತದ.

## ನಾಟಕದ ಮಜಮಜಾ ಹೆಸರುಗಳು

ಪುಸ್ತಕ ಬರೆಯುವವರು ಅದಕ್ಕೆ ಉತ್ತಮವಾದ ಹೆಸರನ್ನಿಡಲು ಬಹಳಷ್ಟು ಹೆಣಗಾಡತಾರ, ಹಾಗೇ ಪ್ರಾಣಿಗಳಿಗೆ, ಮಕ್ಕಳಿಗೆ ಹೆಸರನ್ನಿಡಲೂ ಸಹ ಸಾಕಷ್ಟು ಹೆಣಗಾಡತಾರ. ಸಿನೆಮಾ ಹೆಸರುಗಳು ನಾಟಕಗಳಂತಿರದೇ ಸ್ವಲ್ಪ ಸೌಮ್ಯತೆಯಿಂದ ಕೂಡಿರುತ್ತವೆ. ನಾಟಕದ ಹೆಸರುಗಳು ಪ್ರಾಸಬದ್ಧವಾಗಿಯೂ ಗಾದೆ ಮಾತುಗಳಂತೆ, ಅನುಭವದ ಮಾತುಗಳಂತೆ ಇರುವುದು ವಿಶೇಷ. ಈ ಹೆಸರುಗಳು ಆಕರ್ಷಣೆಯಿಂದಲೇ ಒಮ್ಮೊಮ್ಮೆ ನಾಟಕಗಳು ಭರ್ಜರಿ ನಡೆಯುವುದುಂಟು. ನಾಟಕದೊಳಗಿರುವ ಮುಖ್ಯ ವಿಷಯವನ್ನೆಲ್ಲ ನಾಟಕದ ಟೈಟಲ್ಲುಗಳೇ ಹೇಳಿಬಿಡುತ್ತವೆ. ೧೯೬೦ರ ದಶಕದಿಂದ ರಚಿತಗೊಂಡ ನಾಟಕದ ಹೆಸರುಗಳನ್ನು ಗಮನಿಸಿದಾಗ ಈ ಮಜಕೂರು ಗೊತ್ತಾಗುತ್ತದೆ. ಉದಾಹರಣೆಗೆ ಖೇಡಗಿಯವರು ಬರೆದ ಕೆಲವು ನಾಟಕಗಳನ್ನು ಗಮನಿಸಬಹುದು. 'ತಾಯಿಯ ಋಣ ಹಾಲಿನ ಗುಣ', 'ಅಪ್ಪನ ಗಂಡ ಅವ್ವ', 'ನಿಮ್ಮ ಹೆಂಡತಿ ನಾನಲ್ಲ', 'ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ', 'ಮಾತು ಅಂಗಾರ ಮೌನ ಬಂಗಾರ', 'ನನ್ನ ಗಂಡನ ಹೆಂಡತಿ', 'ಪಾಪದ ದೇಹ ಪುಣ್ಯದ ಜೀವ', 'ದೇವರಾಟ ತಿಳಿದಿಲ್ಲ', 'ಗೆಜ್ಜೆ ಕಟ್ಟಿದರೂ ಲಜ್ಜೆ ಬಿಟ್ಟಿಲ್ಲ', 'ಗೌರಿ ಹೋದಳು ಗಂಗೆ ಬಂದಳು' ಇತ್ಯಾದಿ.

### ಖೇಡಗಿಯವರು ಅಭಿನಯಿಸಿದ ಪಾತ್ರಗಳು

ಅಭಿನಯಿಸುವ ಪಾತ್ರಗಳು ಸಣ್ಣದೇ ಇರಲಿ ದೊಡ್ಡದೇ ಇರಲಿ ಅದಕ್ಕೆ ಜೀವ ತುಂಬಲು ಪಾತ್ರಧಾರಿಯ ಶ್ರದ್ಧೆ ಅತ್ಯಗತ್ಯ. ಅಲ್ಲರೂ ನಾಯಕನ ಪಾತ್ರವನ್ನೇ ನಿರ್ವಹಿಸುತ್ತೇನೆಂದರೆ ಖಳನಟಕ, ಪೋಷಕನ ಪಾತ್ರ ಮಾಡುವವರಾರು? ನಟಕೇಸರಿ ಹಂದಿಗನೂರು ಸಿದ್ರಾಮಪ್ಪನವರಿ ಶುರುವಿಗೆ ನೀಡಲ್ಪಟ್ಟ ಪಾತ್ರಗಳೆಲ್ಲವೂ ಚಿಕ್ಕವೇ. ಪಾಲಿಗೆ ಬಂದದ್ದೇ ಪಂಚಾಮೃತವೆಂದು ಭಾವಿಸಿದ ಅವರು ಪ್ರತಿ ಪಾತ್ರಗಳಿಗೂ ಕಳೆಕಟ್ಟಿದರು. ಅವರು ಅಭಿನಯಿಸಿದ ಪ್ರತಿ ಪಾತ್ರಗಳು ನಾಯಕನ ಪಾತ್ರಗಳೇ ಆದವು. ಅಂತೆಯೇ ಎರಡನೆಯ ಘಟ್ಟದ ಬಿಜಾಪುರ ಜಿಲ್ಲೆಯ ರಂಗಕಲಾವಿದ ಮತ್ತು ನಾಟಕಕಾರರಾದ ಶ್ರೀ ಖೇಡಗಿಯವರು ಪ್ರತಿ ಪಾತ್ರಗಳನ್ನು ಸವಾಲಾಗಿಯೇ ಸ್ವೀಕರಿಸಿದ್ದಾರೆ ಮತ್ತು ಅವು ಎಂದೂ ಸೋಲದಂತೆ ಅತ್ಯಂತ

ಜಾಗರೂಕ ಹೆಜ್ಜೆಗಳನ್ನೇ ಇಟ್ಟಿದ್ದಾರೆ. ಅವರದು ಭಾವಪೂರ್ಣ ಅಭಿನಯ. ಪಡೆಸೂರ, ಪಟ್ಟದಕಲ್ಲು, ಕುಮಾರವಿಜಯ ನಾಟ್ಯ ಸಂಘ, ಹುಚ್ಚೇಶ್ವರ ನಾಟ್ಯ ಸಂಘ, ಗುರುಕುಮಾರೇಶ್ವರ ನಾಟ್ಯ ಸಂಘ, ಕರ್ನಾಟಕ ಕಲಾ ಸಂಘ, ರಂಗಚೇತನ ಸಂಸ್ಥೆ, ರಂಗಭೂಮಿ ಕಲಾವಿದರ ಸಂಘ ಮುಂತಾದ ಕಂಪನಿಗಳು ಪ್ರಯೋಗಿಸಿದ ಬಂಜೆ ತೊಟ್ಟಿಲು, ಮಲಮಗಳು, ಸಂಪತ್ತಿಗೆ ಸವಾಲು, ಭಾಗ್ಯ ಬಂತು ಬುದ್ಧಿ ಹೋಯಿತು, ತಾಳಿಯ ತಕರಾರು, ಸಂಗೊಳ್ಳಿ ರಾಯಣ್ಣ, ಹೇಳಿದರೆ ಹೆತ್ತವರಾಣೆ, ಸುನಂದಾ, ನಾಗರ ಪಂಚಮಿ, ಚಿತ್ರಾಂಗದಾ, ರಕ್ತ ರಾತ್ರಿ, ಎಚ್ಚರ ತಂಗಿ ಎಚ್ಚರ, ಗಂಡನಾಜ್ಞೆ , ಕೆಚ್ಚೆದೆ ವೀರ ಮುಂತಾದ ನಾಟಕಗಳಲ್ಲಿನ ಮಹೇಶ, ಆನಂದ, ಅರವಿಂದ, ಅನಿಲ, ಲಿಂಗರಾಜ, ಯುವರಾಜ, ಶ್ರೀಪತಿ, ಗೋಪಿ, ಫ್ಲಿಕರಿಂಗ್, ದಿವಾಕರ, ಸರ್ದಾರಜಿ, ಅರ್ಜುನ, ಅಶ್ವತ್ಥಾಮ, ಡಾ ಗುಣಶೇಖರ, ಎಸ್. ಪಿ ಅಶೋಕ ಮುಂತಾದ ವಿಭಿನ್ನ ಪಾತ್ರಗಳಲ್ಲಿ ಅವರು ಅಭಿನಯದ ಪರಾಕಾಷ್ಠೆಯನ್ನು ಮುಟ್ಟಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ೬೦ರ ದಶಕದಿಂದೀಚೆಗೆ ಗರಿಬಿಚ್ಚಿಕೊಂಡ ಕಾಲ ಮತ್ತು ಮರಾಠಿ ನಾಟಕಗಳ ಪ್ರಭಾವ ಭಾಗಶಃ ಕಡಿಮೆಯಾಗಿ ಅನುವಾದಿತ ನಾಟಕಗಳು ಇಣುಕುತ್ತಿದ್ದ ಕಾಲದಲ್ಲಿ ಯಾರನ್ನೂ ಅನುಕರಿಸದೇ ಶುದ್ಧಾತಿಶುದ್ಧ ದೇಸಿ ಭಾಷೆಯಲ್ಲಿ ಸಿದ್ಧ ಮಾದರಿಯ ನಾಟಕಗಳನ್ನು ರಚಿಸಿಕೊಟ್ಟು ನಾಟಕಕಾರರ ಸಾಲಿನಲ್ಲಿ ಹೊಸಬಗೆಯವರಾಗಿ ಕಾಣುತ್ತಾರೆ ಖೇಡಗಿಯವರು. ಅವರ ಸಿದ್ಧ ಮಾದರಿಯ ನಾಟಕಗಳು ಉತ್ತರ ಕರ್ನಾಟಕದ ಭಾಗದಲ್ಲಿ ನೂತನ ಸಂಚಲನ ಮೂಡಿಸಿದ್ದು ಸುಳ್ಳಲ್ಲ. ಸಾಮಾಜಿಕ ನಾಟಕಗಳನ್ನು ಆರೋಗ್ಯಪೂರ್ಣವಾಗಿ ಮತ್ತು ಸಾಮಾಜಿಕರು ಮೆಚ್ಚುವಂತೆ, ಶೀಲದ ಮೇರೆ ದಾಟದೆ ಒಪ್ಪಿಕೊಂಡಂಥವು ಮತ್ತು ಅಪ್ಪಿಕೊಂಡಂಥವು. ಖೇಡಗಿಯವರ ನಾಟಕಗಳು ಶೀತಲ ಗುಣವನ್ನು ಹೊಂದಿರುವ ಚಳುವಳಿಯನ್ನು ನೆನಪಿಸುತ್ತದೆ.

# ನಾಟಕಗಳ ಮೌಲ್ಯ ಹೆಚ್ಚಿಸಿದ ಗಟ್ಟಿ ಸಂಭಾಷಣೆಗಳು

## ನಿಮ್ಮ ಹೆಂಡತಿ ನಾನಲ್ಲಾ (ಸಾಮಾಜಿಕ ನಾಟಕ)

**ಕಲ್ಪನಾ:–** ಇದರಲ್ಲಿ ತ್ಯಾಗ ಏನು ಬಂತು ಮಾಮಾ? ಲಾಭಾನೇ ಇದೆ. ಮೇಲಾಗಿ ಅಕ್ಕ ದೊಡ್ಡಮ್ಮನ ಮಗಳು. ನಾನು ಚಿಕ್ಕ ತಾಯಿಯ ಮಗಳು ಅಂತ ತಿಳಿದುಕೊಂಡೇ ಇಲ್ಲ. ಅಕ್ಕ ತಂಗಿ ಒಂದೇ ತಾಯಿಯ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಯಿಂದ ಇದ್ದೇವೆ.

**ಗಿರಿಧರ:–** ನೀವು ಎಷ್ಟೇ ಪ್ರೀತಿಯಿಂದ ಇದ್ದರೇನಾಯ್ತಮ್ಮಾ? ರಕ್ತ ಬೇರೆ ಬೇರೆ ತಾಯಂದಿರದೇ ಅಲ್ಲವೇ?

**ಕಲ್ಪನಾ:–** ಅದು ಮಾಟಗಾರನ ಕೈಚಳಕವೇ ವಿನಾ ಹಣ್ಣಿನ ತಪ್ಪು ಏನೂ ಇಲ್ಲ. ತನ್ನ ಹಣ್ಣುಗಳೇ ಬೇಗ ಮಾರಾಟ ಆಗಲಿ ಅಂತ ಪಕ್ಕದಲ್ಲಿದ್ದ ಹಣ್ಣಿಗೆ ಖೊಟ್ಟತನದಿಂದ ಕೆಟ್ಟ ಹೆಸರು ಕೊಟ್ಟು ತನ್ನ ಹೆಸರು ಸ್ವಾರ್ಥ ಸಾಧಿಸಿಕೊಳ್ಳುವನೇ ಇದ್ರೇ ಪಾಪ ಆ ಹಣ್ಣು ತನ್ನ ಭಾರ ದೇವರ ಮೇಲೆ ಹಾಕದೇ ಗತೀನೇ ಇಲ್ಲಾ. ಯಾಕ ಮಾಮಾ ಇಷ್ಟೆಲ್ಲಾ ಸುತ್ತಿ ಬಳಸಿ ಮಾತನಾಡುತ್ತಿರುವೆ?

**ಗಿರಿಧರ:–** ಇಂದಿನವರೆಗೂ ಸಾಕಿ ಸಲುಹಿದ ನಿನ್ನಕ್ಕ ಕವಿತಾ ಇಂದು ಗಂಡನ ಮನೆಗೆ ಹೋಗುತ್ತಾಳೆ ಅಂದಾಗ ಏನೇನೋ ಮಾತನಾಡಿದೆ, ಹೋಗಮ್ಮ ಬೇಗ ನೀನು ಬಟ್ಟೆ ಬದಲಾಯಿಸು ನಿನ್ನಕ್ಕನಿಗೆ ಗಂಡನ ಮನೆಗೆ ಕಳಿಸಬೇಕು.

**ಕಲ್ಪನಾ:–** ಅನ್ಯರಿಗೆ ಗೊತ್ತಾಗಲಿ ಗೊತ್ತಾಗದೇ ಇರಲಿ ಆದ್ರೆ ನನಗೆ ಮಾತ್ರ ತಿಳಿದಿದೆ. ಮಾಮಾ ನಾನು ಸೌಭಾಗ್ಯವತಿ ಅನ್ನೂದು ನನ್ನ ಆತ್ಮಕ್ಕೆ ಅರಿವಾಗಿದೆ. ನನ್ನ ಕುಂಕುಮ ಒಡೆಯ ಪ್ರಕಾಶನೇ ಹೊರತು ಅನ್ಯರಾಗಲು ಸಾಧ್ಯವಿಲ್ಲ, ಅವರೇ ನನ್ನ ಪತಿ, ಅವರೇ ನನ್ನ ದೇವರು.

ತನ್ನ ಹಸಿದ ಹೊಟ್ಟೆಯನ್ನು ತುಂಬಿಕೊಳ್ಳುವದಕ್ಕಾಗಿ ಬೇಟೆಗಾರ ಅಸಹಾಯಕ ಸ್ಥಿತಿಯಲ್ಲಿದ್ದ ಚಿಗರಿಗೆ ಕೊಂದುತಿಂದರೆ ಅದು ದ್ರೋಹದ ಕೆಲಸಾ ಅಲ್ಲವೇ ಮಾಮಾ?

**ಗಿರಿಧರ:–** ಹಸಿವೆಯಾದಾಗ ಬೇರೊಂದು ಪ್ರಾಣಿಯನ್ನು ಕೊಂದು ತಿಂದರೆ ಪಾಪವಿಲ್ಲ. ಕೊಂದ ಪಾಪ ತಿಂದರೆ ಪರಿಹಾರವಂತೆ ಅಂತಾನೆ ಹಾವು

ತನ್ನ ಹಸಿದ ಹೊಟ್ಟೆಯನ್ನು ತುಂಬಿಕೊಳ್ಳುವುದಕ್ಕಾಗಿ ಕಪ್ಪೆಯನ್ನು ತಿನ್ನುವುದು. ಅಂದಾಗ ಹಾವು ಕಪ್ಪೆಗೆ ದ್ರೋಹ ಮಾಡಿತು ಅಂತೀಯಾ?

**ಕಲ್ಪನಾ:–** ಅನ್ನಲು ಬರುವುದಿಲ್ಲ. ಆದ್ರೆ ಕಪ್ಪೆಯನ್ನು ತಿಂದು ಹೊಟ್ಟೆತುಂಬಿಸಿ ಕೊಂಡ ಹಾವು ಮುಂದೆ ಹಸಿದ ಹದ್ದಿನ ಕಣ್ಣಿಗೆ ಬಿದ್ದಾಗ ತನ್ನ ಸ್ಥಿತಿ ಏನಾಗುತ್ತೆ ಅನ್ನೂದನ್ನ ತಿಳಿದುಕೊಂಡು ನಡೆದರೆ ಒಳ್ಳೇದಲ್ಲವೇ

**ಗಿರಿಧರ:–** ಒಂದಕ್ಕೊಂದು ತಿನ್ನುತ್ತ ಜೀವನ ಸಾಗಿಸುವುದೇ ಸೃಷ್ಟಿಯ ನಿಯಮ, ಹೆಚ್ಚಿಗೆ ಮಾತನಾಡುವುದರಿಂದ ಉಪಯೋಗವಿಲ್ಲ. ಸುಮ್ಮನೇ ನಾನು ಹೇಳಿದಂತೆ ಕೇಳಿಕೊಂಡು ಬಿದ್ದಿರು.

(ಕಾಮಕ್ಕೂ ಒಂದು ಮಿತಿಯಿದೆ. ಮನುಷ್ಯನ ಕಾಮ ಹದ್ದಿನಂತಾಗಬಾರದು. ಅದು ಒಂದು ಸಾಮಾಜಿಕ ಚೌಕಟ್ಟಿನೊಳಗೆ ಈಡೇರಿಸಿಕೊಳ್ಳಬೇಕು. ಪರಸತಿಯನ್ನು ಒಲ್ಲೆನೆಂಬ ಧೃಢಮನಸ್ಸು ಬೇಕು ಎಂಬುದನ್ನು ಇಲ್ಲಿ ನಿರೂಪಿಸಲಾಗಿದೆ.)

* * * *

## ತಾಯಿಯ ಋಣ ಹಾಲಿನ ಗುಣ (ಸಾಮಾಜಿಕ ನಾಟಕ)

**ಗಜೇಂದ್ರ:–** ಏನಣ್ಣಾ ಮುಂದವರೆದ ನಮ್ಮ ಕಾಲದ ವಿದ್ಯೆಗೂ ಹಳ್ಳಿಯ ಗುಗ್ಗುವಿನಂತೆ ಇದ್ದ ಇವರ ವಿದ್ಯೆಗೂ ಸರಿ ಏನತ್ತೆ, ಅಂದ್ರೆ ಆಡಿಗೂ ಆನೆಗೂ ಹೋಲಿಸಿದಂತೆ ಅಸಮಾನ್ಯ.

**ರಾಜೇಂದ್ರ:–** ನಮ್ಮಲ್ಲಿಯ ಒಂದು ಕಿಲೋ ಪಾಂಡಿತ್ಯವನ್ನು ಉಪಯೋಗಕ್ಕೆ ತರಬೇಕಾದರೆ ಹತ್ತು ಕಿಲೋ ವ್ಯವಹಾರ ಜ್ಞಾನ ಬೇಕು ಅನ್ನುದನ್ನು ತಿಳಿದಿಲ್ಲ. ನನ್ನ ಮಾತೇ ಸಮಂಜಸ ಅಂತೀಯಾ, ನಾವೆಷ್ಟು ಮುಂದುವರೆದರೂ ಹಿರಿಯರು ಅಂದ ಒಂದೊಂದು ಮಾತಿಗೂ ಸರಿಗಟ್ಟಲಾರೆವು, ಇಂದಿನವರೆಗೂ ಒಬ್ಬರ ಮೇಲೆ ಕೈ ಮಾಡಿದ ಪ್ರತಿಯೊಬ್ಬರ ಮನದಲ್ಲಿ ಗೌರವದಿಂದಿದ್ದ ಈ ನಮ್ಮ ಹಿರಿಯರ ಮಕ್ಕಳಾದ ನಾವು ನಿನ್ನೆ ಹುಟ್ಟಿ ಇಂದು ಕಣ್ಣು ಬಿಟ್ಟ ಸಿಟ್ಟಿನ ಭಡಿಯನ್ನೇ ಇಟ್ಟುಕೊಂಡಿದ್ದೇವೆ, ಗಜೇಂದ್ರ ಯಾವ ಕಾರಣಕ್ಕಾಗಿ ನೀನು ನಿನ್ನೆ ಶಂಕ್ರಪ್ಪನಿಗೆ ಬಡಿದು ಬಿಟ್ಟೆ?

**ಜಯರಾಮ:–** ಏನು ಶಂಕ್ರಪ್ಪನಿಗೆ ಬಡಿದನೇ ಯಾಕೋ ಗಜೇಂದ್ರ,

**ಗಜೇಂದ್ರ:–** ನಾವು ಕಷ್ಟಪಟ್ಟು ಬೆಳೆಸಿದ ಬೆಳೆಯನ್ನ ಆವನ ದನಾ ತಿಂದು ತುಳಿದು ಹಾಳು ಮಾಡುತ್ತಿದ್ದವು. ಅದನ್ನು ಕಂಡು ಸಿಟ್ಟ ಬಂತು. ಇನ್ನೊಮ್ಮೆ

ಈ ರೀತಿ ಬೆಳೆ ಹಾಳು ಮಾಡಬೇಡಾ ಅಂತ ನೆನಪಿರುವಂತೆ ಒಂದೆರೆಡು ಕೊಟ್ಟು ಬಿಟ್ಟೆ.

**ಜಯರಾಮ:–** ಆ ಮೂಕ ಪ್ರಾಣಿಗಳು ಮಾಡಿದ ತಪ್ಪಿಗೆ ಮನುಷ್ಯನಿಗೆ ಶಿಕ್ಷೆ ಕೊಟ್ಟು ನಿನ್ನ ಕೀಳುತನ ತೋರಿಸಿ ಕೊಟ್ಟೆ. ಸಂಪತ್ತರಾವ ಇಂಥವನ ಕೈಯಲ್ಲಿ ಈ ಊರ ಮರ್ಯಾದೆ ಉಳಿಯುವುದೇ.

**ಲಕ್ಷ್ಮಿ:–** ಯಾಕ ಉಳಿಯುದಿಲ್ಲ, ಏನೋ ಒಂದು ಸಲ ತಪ್ಪು ಮಾಡಿದ್ರ ಮುಂದೆ ಇದೇ ರೀತಿ ಇರತಾರೇನು?

**ಗಜೇಂದ್ರ:–** ಅಂಥ ಪ್ರಸಂಗ ಬಂದಾಗ ಸಿಟ್ಟು ತೋರಿಸಲೇ ಬೇಕು. ಅಂದ್ರ ಈ ಜನಾ ಬಗ್ಗುವುದು.

**ರಾಜೇಂದ್ರ:–** ಜನರನ್ನು ಬಗ್ಗಿಸಲೇ ಬೇಕು ಅನ್ನುವ ಹಟಾ ನಮಗಿರಬಾರದು. ನಾವೇ ಜನರಿಗೆ ಬಾಗಿ ನಡೆದರೆ ಒಳ್ಳೆಯದಲ್ಲವೇ.

**ಗಜೇಂದ್ರ:–** ತಿಳಿದವನಾದ ನೀನು ಈ ರೀತಿ ಮಾತನಾಡುತ್ತಿಯಾ, ಅತೀ ಒಳ್ಳೆಯವರಾಗಿ ನಡೆದವರ ಗತೀ ಏನಾಗಿದೆ ತಿಳಿದಿಲ್ಲವೇ.

**ರಾಜೇಂದ್ರ:–** ಏನಾಗಿದೆ ಪ್ರಪಂಚ ಬೀಳುವವರೆಗೂ ಅವರೂ ಇತಿಹಾಸದ ಪುಟಗಳಲ್ಲಿ ಅಷ್ಟೇ ಅಲ್ಲ, ಪ್ರತಿಯೊಬ್ಬರ ಮನದಲ್ಲಿ ಅಚ್ಚಾಗಿ ಉಳಿದಿದೆ.

(ನಮ್ಮ ಮೂಗಿನ ನೇರಕ್ಕೆ ಮಾತನಾಡಬಾರದು. ನಮ್ಮದೇ ಸರಿ ಎನ್ನುವ ನಿಲುವು ತಪ್ಪು. ನಾವು ಇನ್ನೊಬ್ಬರಿಗೆ ಬಾಗಿ ನಡೆಯುವುದನ್ನು ಕಲಿತುಕೊಳ್ಳ ಬೇಕು. ಇದು ಬದುಕಿನ ಸರಳ ಸೂತ್ರ ಎಂದು ಸಾರುತ್ತವೆ ಈ ಸಂಭಾಷಣೆಗಳು.)

*　*　*　*

## ರೀತಿ ತಪ್ಪಿದರೂ ನೀತಿ ತಪ್ಪಿಲ್ಲ (ಸಾಮಾಜಿಕ ನಾಟಕ)

**ಶಶಿಕಲಾ:–** ಪರಿಚಯವಿಲ್ಲವೇ..... ಸಾಕು ಮಾಡು ನಿನ್ನ ಹುಡುಗಾಟ. ನಾನು ನಿಮ್ಮ ಡಾರ್ಲಿಂಗ, ಡಿಯರೆಸ್ಟ್, ನಿಯರೆಸ್ಟ ಲವರ್ ಆ್ಯಂಡ್ ವಾಯಿಫ್.

**ಹರೀಶ:–** ಶಶಿ ನೀನೇನು ಚಿಕ್ಕ ಹುಡುಗಿಯೇ ಹೀಗೆಲ್ಲಾ ನೀನು ಒಬ್ಬಳೇ ಇನ್ನು ಮೇಲೆ ದವಾಖಾನೆಗೆ ಬರಬೇಡ. ಯಾಕಂದ್ರ ನಿನ್ನ ಮನೆಯಲ್ಲಿ ನೀನಿರು ಅಂದ್ರೆ ಒಳ್ಳೆಯದು.

**ಶಶಿಕಲಾ:–** ಮನೆಯಲ್ಲಿರಲು ನೀನು ಬಿಟ್ಟರಲ್ಲವೇ? ಎಲ್ಲೇ ಇದ್ದರೂ ನಿನ್ನ ಪ್ರೇಮ ನನಗೆ ಎಳೆದು ತರತಾ ಇದೆ. ಮೇಲಾಗಿ ಈ ಸುಮ್ಮನೇ ಕೂಡುವ ಸ್ಥಿತಿಯೂ ಇಲ್ಲ. ಯಾಕಂದ್ರೆ ನನ್ನ ಗರ್ಭದಲ್ಲಿ . .

**ಹರೀಶ:–** ಮಗು ಬೆಳೆತಾ ಇದೇ ಅಲ್ಲವೇ? ಆ ಮಗುವಿಗೆ ನನ್ನ ಹೆಸರು ಹಚ್ಚ ಬೇಕಂತ ವಿಚಾರ.

**ಶಶಿಕಲಾ:–** ವಿಚಾರ ಏನು ಬಂತು ಇದರ ತಂದೆ ನೀನೆ ಅಂತ ಹೇಳೂದಕ್ಕೆ ನಾವಿಬ್ಬರೂ ಸಿದ್ಧರಿದ್ದೇವೆ.

**ಹರೀಶ:–** ಆದರೆ ನಿನ್ನ ಗರ್ಭದಲ್ಲಿನ ಕೂಸಿನ ತಂದೆ ಅಂತ ನಾನು ಹೇಳಲು ಸಿದ್ಧನಿಲ್ಲ.

**ಶಶಿಕಲಾ:–** ಯಾಕೆ ಹರೀಶ ನನ್ನ ನಡತೆ ಶೀಲದ ಬಗ್ಗೆ ನಿಮಗೆ ಸಂಶಯ ಪಡತಾ ಇದ್ದೀರಾ?

**ಹರೀಶ:–** ಮದುವೆಗೆ ಮೊದಲೇ ಮಗುವಿನ ತಾಯಿ ಆಗುವಳ ಶೀಲದ ಬಗ್ಗೆ ಸಂಶಯ ಪಡುವ ಕಾರಣವೇ ಇಲ್ಲ. ಮೇಲೆ ಎದ್ದು ಕಾಣುತಿದೆ ಜಾರಿಣಿ ಅಂತ.

**ಶಶಿಕಲಾ:–** ಇಷ್ಟು ಕಠೋರವಾಗ ಬೇಡ. ನಿನ್ನನ್ನೇ ನಂಬಿದ ನನಗೆ ಈ ರೀತಿ ಶಿಕ್ಷೆ ನೀಡಬೇಡ. ನಮ್ಮದಾದ ಈ ಕುಡಿಯನ್ನು ಕಡಿದು ಹಾಕುವಷ್ಟು ನಿರ್ದಯನಾಗಬೇಡಾ. ನಿನ್ನ ಕಾಲಿಗೆ ಬಿದ್ದು ಬೇಡತೀನಿ ಕೈಬಿಡಬೇಡಾ.

**ಹರೀಶ:–** ಕಾಲಿಗೆ ಬಿದ್ದೆ ಅಂತಾ ಕರುಣೆ ಪಟ್ಟು ಪಾಲಿಗೆ ಬಂದ ಹಸುವನ್ನು ಕಟ್ಟಿ ಮೇಯಿಸುವ ಕಾಂಟ್ರಾಕ್ಟರ ನಾನಲ್ಲ. ಇನ್ನಮೇಲೆ ನನ್ನ ಪರಿಚಯ ನಿನಗಿಲ್ಲ, ನಿನ್ನ ಪರಿಚಯ ನನಗಿಲ್ಲ, ಹೊರಟು ಹೋಗು ಇಲ್ಲಿಂದ.

**ಶಶಿಕಲಾ:–** ನನ್ನ ಕೈ ಹಿಡಿಯಲೂ ಮನಸ್ಸಿರದ್ದರೆ ಯಾಕೆ ನನ್ನ ಮುಟ್ಟಿದಿ. ನನ್ನ ಹೊಟ್ಟೆಯಲ್ಲಿ ಹುಟ್ಟುವ ಕೂಸಿನ ಸಲುವಾಗಿ ನಾನೊಬ್ಬಳೇ ಕಷ್ಟ ಸಹಿಸಬೇಕೆ? ಇದಕ್ಕೆಲ್ಲಾ ಕಾರಣ ನಾನೊಬ್ಬಳೇನೇ?

**ಹರೀಶ:–** ಶಶಿ ಅಡವಿಯಲ್ಲಿ ನಿಂತ ಕಲ್ಲಿನ ಕಂಬಕ್ಕೆ ಸೊಕ್ಕಿನ ಎಮ್ಮೆ ಬಂದು ತಂದು ತನ್ನ ಮೈ ತಿಕ್ಕಿಕೊಂಡರೆ ಮೈ ಕೆತ್ತಿ ರಕ್ತ ಬಂದು ನೋವಾಗುತ್ತೆ ಅನ್ನುವ ಕಲ್ಪನೆ ಎಮ್ಮೆಗಿರಬೇಕೆ ವಿನಾಃ ಕಲ್ಲಿಗಲ್ಲ.

**ಶಶಿಕಲಾ:–** ಮೈ ತಿಕ್ಕುವದನ್ನು ನೋಡಿ ಬೇಡಾ ಎನ್ನಲು ಆ ಕಲ್ಲಿಗೇನು ಆಣೆ ಇಟ್ಟಿದ್ದರೇನು.

**ಹರೀಶ:–** ಅದೇಕೆ ಹೇಳುತ್ತೆ ಪರೋಪಕಾರಾರ್ಥಂ ಇದಂ ಶರೀರಂ ಅನ್ನುವ ಮಂತ್ರ ಆ ಕಲ್ಲಿಗೆ ಯಾರಾದ್ರೂ ಹೇಳಿಕೊಟ್ಟಿರಬೇಕು ಶಶಿ, ತುಂಟ ಹುಡುಗನಿಗೆ ಅನ್ಯರ ತೋಟದಲ್ಲಿ ಹೊಕ್ಕು ಕಳ್ಳತನದಿಂದ ಮಾವಿನ ಹಣ್ಣು ತಿಂದು ತನ್ನ ಹೊಟ್ಟೆ ತುಂಬಿಸಿಕೊಳ್ಳುವುದೊಂದೇ ಗೊತ್ತು, ಅದರ

ಚಿಪ್ಪು ಬೀದಿಗೆ ಬಿಸುಡಬೇಕೆ ವಿನಾಃ ಜೇಬಿನಲ್ಲಿಟ್ಟುಕೊಂಡರೆ ಮೂರ್ಖತನ ವಾಗುತ್ತೆ.

**ಶಶಿಕಲಾ:–** ಚಿಪ್ಪು ಇಟ್ಟುಕೊಳ್ಳುವವರು ಮೂರ್ಖತನವಾಗುವಂತಿದ್ದರೆ ಅದರ ಗತಿಯನ್ನೇ ವಿಚಾರಿಸದೇ ಹಣ್ಣನ್ನು ಹರಿದು ತಿನ್ನುವ ಮೂರ್ಖತನಕ್ಕೆ ಕೈ ಹಾಕಬಾರದಿತ್ತು.

**ಹರೀಶ:–** ಕೈ ಹಾಕುವುದಕ್ಕಿಂತ ಮುಂಚೆ ತಾನಾಗಿಯೇ ಹಣ್ಣು ಕಳಚಿ ಕಲ್ಲಲ್ಲಿ ಬಿದ್ದರೆ ಬಿಡಬೇಕೇ? ಮೇಲಾಗಿ ತನ್ನ ಹಣ್ಣಿನ ಬಗ್ಗೆ ಮರಕ್ಕೆ ಚಿಂತೆ ಇಲ್ಲಾ ಅಂದ ಬಳಿಕ ಕದ್ದು ತಿನ್ನುವವರಿಗೇಕೆ ಬೇಕು. ಮರಾ ಒಂದು ವೇಳೆ ಹಣ್ಣು ಹರಿಯಲು ಬಂದವನು ಒಳ್ಳೆಯವನೇ ಇರಬೇಕು ಅಂತ ನಂಬಿ ಸುಮ್ಮನಿದ್ದರೆ ಕಾವಲಗಾರನಾದರೂ ತಿಳಿಯಬೇಡವೇ? ತೋಟದಲ್ಲಿ ಕಾಲಿಟ್ಟವನು ವ್ಯಾಪಾರಿಯೋ ದಳ್ಳಾಳಿಯೋ ಅಥವಾ ಕಳ್ಳನೋ ಅನ್ನೂದು ಒಟ್ಟಾರೆ ಹಣ್ಣು ತನ್ನ ಮರದಿಂದ ಹೋದರೆ ಸಾಕು ಅಂತ ಕಣ್ಣು ಮುಚ್ಚಿಕೊಂಡರೆ ತೀರಿತೆ?

**ಶಶಿಕಲಾ:–**ಬೇಡಾ ಹರೀಶ ಹಾಗೆ ಮಾಡಬೇಡಾ ನಿನ್ನ ಕೈ ಮುಗೀತಿನಿ ನನ್ನ ಜೀವನ ನಾಶಗೊಳಿಸಬೇಡಾ.

**ವಿನೋದ:–** ಹುಸ್ನವಾಲೆ ವಾದಾ ಕರತೆ ಹೈ ನಿಭಾನಾ ಭೂಲ ಜಾತೆ ಹೈ, ಆಗ್ ಮೋಹಬ್ ದಿಲ್‌ಮೆ ಲಗಾಕರ್ ಛೇ.. ಛೇ... ರೆಸ್ಟ ತೆಗೆದುಕೊಳ್ಳಬೇಕು ಅಂತ ಇಲ್ಲಿಗೆ ಬಂದರೆ ಪೇಶಂಟನ ಕಿರಚಾಟನ ಜಾಸ್ತಿ ಆತು ಸೆರೆಯಾಅಮಲಿನಲ್ಲಿಯಾದರೂ ಮನದ ನೋವು ಮರೆಯಬೇಕು ಅಂದ್ರೆ ಹಾಳಾದ ಜನಾ ಇಲ್ಲಿಗೂ ಗದ್ದಲಾ ಮಾಡಲು ಬಂದೇ ಬಿಡತಾರ ಮಿಸ್ಟರ ಹರೀಶ ಇಂದು ಒಂದು ದಿನ ನಿನ್ನ ಆಸ್ಪತ್ರೆ ಮೇನ್ ಗೇಟ್ ಬಂದ ಮಾಡೀ ಬಿಡು.

(ನಮ್ಮ ನೀತಿಯೇ ನಮ್ಮ ಆದರ್ಶ. ನೀತಿ ಸಮಾಜವನ್ನು ಬ್ಯಾಲೆನ್ಸ್ ಮಾಡುತ್ತದೆ. ನೀತಿಯ ಪರಡಿ ಹೆಚ್ಚು ಬಾಗಿದಷ್ಟು ಕಂಟಕರ ಪ್ರಮಾಣ ಇಳಿಮುಖವಾಗುತ್ತದೆ ಎಂದು ಆದರ್ಶದ ಬೋಧೆ ನೀಡುವ ನಾಟಕವಿದು.)

* * * *

## ಮಾತು ಅಂಗಾರ ಮೌನ ಬಂಗಾರ (ಸಾಮಾಜಿಕ ನಾಟಕ)

**ಕೃಷ್ಣ:**– ಧರ್ಮದ ಬಗ್ಗೆ ಒತ್ತಾಯಾ, ಬಲಾತ್ಕಾರಾ ಮಾಡಬಾರದ್ರೀ.., ನ್ಯಾಯವಾಗಿ ಭಾರತ ದೇಶಾ ಹಿಂದೂಸ್ತಾನಾ ಅಂತ ಹೆಸರು ಬಿದ್ದೈತಿ? ಎಲ್ಲಿಂದಲೋ ಬಂದು ನಮ್ಮ ನಾಡಿನಲ್ಲಿ ಬೀಡು ಬಿಟ್ಟವರ ಎಂಜಲಕ್ಕ ಬಿದ್ದು, ಅವರ ಧರ್ಮಾ ಸೇರಿಕೊಂಡು, ನಾವೂ ಕ್ರೈಸ್ತ ಧರ್ಮದವರೂ ಅಂತ ಜಂಭಾ ಕೊಚ್ಚಿಕೊಳ್ಳೋ ನಿಮಗ, ನಮ್ಮ ದೇಶದಾಗ ನಿಂತು ನೀರು ಕುಡಿಯಾಕ ನಾಚಿಕಿ ಆಗಬೇಕು ಥತ್.

**ರಾಮ:**–ಕ್ರೈಸ್ತ ಧರ್ಮದವರು ಬರ್ತಿರಿ, ಕ್ರಿಶ್ಚನ್ನರಾಗಿರಿ ಅಂತಾ ಆಶಾ ಹಚ್ಚುತ್ತೀರಿ, ಮುಸ್ಲೀಮ್ ಧರ್ಮದವರು ಬರ್ತಾರಾ ಮುಸ್ಲಿಮರಾಗ್ರಿ ಅಂತಾ ಆಶಾ ಹಚ್ಚುತಾರಾ? ಒಟ್ಟಾರೆ ನಮ್ಮ ಹಿಂದೂ ಧರ್ಮನ ಹೆಸರಿಲ್ಲದಂಗೆ ಮಾಡಾಬೇಕಂತೀರೇನ್ ನೀವ್?... ನಾಯಿಗಳ...

**ಜ್ಯೂಲಿ:**–ಛೇ.. ಛೇ ನಮ್ಮದೇನೂ ಹಾಗೆ ಒತ್ತಾಯದ ಪ್ರಚಾರವಲ್ಲಾ!.. "ನೀವಾಗೇ ನಮ್ಮ ಧರ್ಮಕ್ಕ ಬರೋದಾದ್ರೆ ಬನ್ನಿ... " ಅಂತ ಹೇಳ್ತೀವಷ್ಟೇ.

**ಕೃಷ್ಣ:**– ಬಾಯರ.. ಈ ಊರಾಗ ನಿಮ್ಮ ಬ್ಯಾಳಿ ಬೆಯ್ಯೋದಿಲ್ಲಾ.. ಹೆಚ್ಚು ಹೊತ್ತು ಹಿಂಗ ಅರೆಬೆತ್ತಲೆ ವೇಷದಿಂದ ತಿರಗ್ಯಾಡಿದರೆ ನಿಮಗ ನಾಯಿ ಬೆನ್ನತ್ತೋದ ಗ್ಯಾರಂಟಿ. . ಸುಮ್ನ ನೀವು ಮರ್ಯಾದೆಯಿಂದ ಜಗಾ ಬಿಡ್ರಿ.

**ಜ್ಯೂಲಿ:**–(ಅವಮಾನ ಕೋಪಗಳಿಂದ) ಸರಿ ಇನ್ನೊಮ್ಮೆ ನಮ್ಮ ಧರ್ಮಾಧಿಕಾರಿಗಳೊಂದಿಗೆ ಬಂದು ನಿಮಗೆಲ್ಲಾ ಸರಿಯಾಗಿ ಉಪದೇಶಾ ಕೊಡಸ್ತೇನಿ!..

**ಕೃಷ್ಣ:**–ಹೋಗ್ರಿ ಬಾಯಾರ.. ನಿಮ್ಮ ಧರ್ಮಾಧಿಕಾರಿಗಳು ಬಂದು ನಮಗ ಉಪದೇಶಾ ಕೊಡುವುದು, ನಮ್ಮ ಧರ್ಮಾಧಿಕಾರಿಗಳೇನು ನಿದ್ದಿ ಮಾಡ್ತಿರೋದಿಲ್ಲಾ. ಹೋಗ್ರಿ.. ಅಲ್ಲಾ, ನಮ್ಮ ಚಿಂತೀ ನಮಗ ರಗಡ ಐತಿ: ಅಂತಾದ್ರಾಗ ಇಕೀದೊಂದು ದೊಡ್ಡ ಸಿದ್ದೀನ!

(ಬಲಾತ್ಕಾರದಿಂದ ಮತಾಂತರಗೊಳಿಸುವ ಪ್ರಕ್ರಿಯೆ ದೇಶದಾದ್ಯಂತ ನಡೆಯುತ್ತಿದೆ. ಯಾರೇ ಆದರೂ ಒತ್ತಾಯಪೂರ್ವಕವಾಗಿ ಮತ್ತೊಂದು ಮತವನ್ನು ಸ್ವೀಕರಿಸಬಾರದು. ಅದು ಅಶಾಶ್ವತ. ಇಂಥ ಪೀಡೆಯನ್ನು ತೊಲಗಿಸಿದಾಗಲೇ ಒಂದು ಧರ್ಮ ಗಟ್ಟಿಯಾಗಿ ಬೆಳೆಯುತ್ತದೆ ಎಂದು ಸಾರುವ ಈ ನಾಟಕ ಪ್ರಸ್ತುತವೂ ಹೌದು)

* * * *

## ಅಪ್ಪನ ಗಂಡ ಅಪ್ಪ (ಸಾಮಾಜಿಕ ನಾಟಕ)

**ಯೋಗಿತಾ:**– ನಿಜಾ ವಿಶಾಲ್ ! ಸರ್ಪ ಹೆಡೆಬಿಚ್ಚಿ ಆಡುವದನ್ನು ಕಂಡು ನಾನಂದು ಹುಚ್ಚೆದ್ದು ಕುಣಿದಿದ್ದೆ. ಅದರ ಸೌಂದರ್ಯ ಭರಿತ ಹೆಡೆಯ ಮೇಲಿರುವ ರತ್ನ ಕಂಡು ಈ ಸುಂದರ ಜೀವಿಯನ್ನು ನನ್ನದನ್ನಾಗಿ ಮಾಡಿಕೊಳ್ಳಬೇಕೆಂದು ಆಸೆ ಪಟ್ಟಿದ್ದೆ. ಆದರೆ ಸರ್ಪ ಕೋರೆ ಹಲ್ಲಿನಿಂದ ಚುಚ್ಚಿ ವಿಷಕಾರಿದಾಗ, ವಿಕೃತ ರೂಪ ತಾಳಿದ್ದಲ್ಲದೇವಿರಾಗಿಣಿಯೂ ಆಗಿಬಿಟ್ಟೆ.

**ವಿಶಾಲ:**– (ಉಸಿರ್ಗೆರೆದು) ಅಂತೂ ನನ್ನನ್ನು ವಿರಹದುರಿಯಲ್ಲಿ ತಳ್ಳಿ, ಮೇಲೆ ಬಿರುಗಾಳಿ ಬೀಸುವುದೇ ವಿಧಿಯ ಕೆಲಸಾ ಅಂತಾ ಕಾಣುತ್ತೆ! ಒಟ್ಟಾರೆ ಈ ದೇವರೂ ಅನ್ಯೋವನಿಗೆ ಅಂತಃಕರುಣೆಯೇ ಇಲ್ಲಾ!

**ಯೋಗಿತಾ:**– ದೇವರು ನಮ್ಮ ಆಸೆಗಳನ್ನು ಈಡೇರಿಸದಿದ್ದಾಗ, ಅವನ ಅಂತಃಕರುಣೆಯನ್ನು ಸಂಶಯದ ದೃಷ್ಟಿಯಿಂದ ಕಾಣಬಾರದು ವಿಶಾಲ್!.. ಒಂದು ವೇಳೆ ನಿನ್ನ ಹಿತಕ್ಕಾಗಿಯೇ ಯಾಕೆ ಈ ರೀತಿ ಮಾಡಿರಬಾರದೂ?

**ವಿಶಾಲ:**– ಇಂಥಾ ಒರಡು ವೇದಾಂತಾನ ನನಗೆ ಹೇಳಬೇಡ ಯೋಗಿತಾ! ಒಟ್ಟಾರೆ ನನ್ನ ಪಾಲಿಗೆ ದೇವರೇ ಇಲ್ಲ!..

**ಯೋಗಿತಾ:**– (ಹುಸಿನಗೆ ಬೀರಿ) ಗೂಗೆ ಸೂರ್ಯನಿಗೆ ಬಯ್ಯೋದೂ, ಕಾಗೆ ಚಂದ್ರನಿಗೆ ಶಪಿಸೋದು, ಕುರುಡಾ ಕನ್ನಡಿಯನ್ನ ಹಳಿಯೋದೂ, ದುರ್ದೈವಿಗಳಾದವರು ದೇವರನ್ನೇ 'ಇಲ್ಲಾ' ಅಂತ ಹೇಳೋದೂ ಇವೆಲ್ಲಾ ಮಾಮೂಲೀ ಮಾತುಗಳು ವಿಶಾಲ್. ಸರಿ, ನಾನಿನ್ನು ಬರ್ತೇನೆ !

**ವಿಶಾಲ:**– ನನ್ನ ಬಾಳು ಬರೀ ಮರಭೂಮಿಯಲ್ಲಿ 'ನೀರು' ಹುಡುಕಿದಂತೆಯೇ ಸರಿ ! ಪ್ರೀತಿಸಿದವಳನ್ನ ಕೈ ಹಿಡೀಲಿಲ್ಲಾ: ಕೈ ಹಿಡಿದವಳನ್ನ ಪ್ರೀತಿಸೋದಕ್ಕೆ ಸಾಧ್ಯವಿಲ್ಲಾ ! (ಉಸಿರುಹಾಕಿ) ಎಲ್ಲಾ ಅವನಿಚ್ಛೆ !.. (ಹೊರಟು ಹೋಗುವನು)

(ದುರ್ದೈವಿಗಳು ದೇವರ ಅಸ್ತಿತ್ವವನ್ನು ನಿರಾಕರಿಸುತ್ತಾರೆ. ಸುದೈವಿಗಳು ನಂಬುತ್ತಾರೆ. ದುರ್ದೈವಿಗಳ ಬದುಕು ನೀರಲ್ಲಿದ್ದೂ ನೀರಡಿಸಿದಂತೆ.)

* * * *

## ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಐತಿಹಾಸಿಕ ನಾಟಕ)

**ಥ್ಯಾಕರಿಂಗ್:**– ರಾಯ... ರಾಯ... ಚೆನ್ನಮ್ಮಾ ಯುವರ್ ಪೀಪಲ್ ಆರ್ ವೇರಿ ಡೇಂಜರಸ್ ದೇ ಹ್ಯಾವ್ ನೋ ನ್ಯಾಶನ್ಯಾಲಿಟಿ ದೇ ಆರ್ ಮಚ್

ಫೂಲಿಶ್ ದ್ಯಾನ್ ಎನಿ ಅದರ್ ಪೀಪಲ್ಸ್ ಚನ್ನಮ್ಮಾ ನಮಗೆ ಯಾವ ರಾಯಣ್ಣ ಏನೂ ಮಾಡುದಿಲ್ಲಾ ಯೋಚಿಸಿ ನೋಡು ನಮ್ಮವರೇ ನಮಗೆ ಮೇಚಾ ಮಾಡುತ್ತಾರೆ. ಈ ದೇಶದ ಜನಾ ಕಂಡು ನನಗೆ ನಾಚಿಕೆ ಆಗುತ್ತಿದೆ ಚನ್ನಮ್ಮಾ. ಇಂಥಾ ನೀಚರ ಬೆನ್ನ ಕಟ್ಟಿ ನೀನು ಹಾಲಾದಿ. ಈ ದೇಶದ ಜನಾ ಬಾಳಾ ಬಾಳಾ ಕೆಟ್ಟವರು ಕೆಟ್ಟವರು.

**ಚನ್ನಮ್ಮ:–** ಮುಚ್ಚುಬಾಯಿ ನನ್ನ ದೇಶದ ಜನರಿಗೆ ಕೆಟ್ಟವರೆಂದು ನುಡಿಯಲು. ವಿಧಿಯ ಸೆಳೆತಕ್ಕೆ ಸಿಕ್ಕು ಚೆನ್ನಮ್ಮ ಸೋಲನ್ನೊಪ್ಪಿದಳೇ ವಿನಾಃ ನನ್ನ ಮಕ್ಕಳು ಮಾಡಿದ ಹೀನ ಕೃತಿಯಿಂದಲ್ಲ. ಕನ್ನಡನಾಡಿನಲ್ಲಿ ಹುಟ್ಟಿದವರೆಲ್ಲಾ ಚೆನ್ನಮ್ಮನಿಗೆ ಮಕ್ಕಳೇ ಅಂದಾಗ ತಾಯಿಯಾದವಳಿಗೆ ಮಕ್ಕಳು ಕೆಟ್ಟವರಿದ್ದರೂ ಬೇಕು. ನಾಡದೇವತೆಯ ದುರ್ದೈವ ಹಾಗೆ ಮಾಡಿಸಿತು. ನಿನಗೆ ಕೈಮುಗಿದು ಬೇಡುವೆ, ಉಂಡ ಮನೆಗೆ ದ್ರೋಹ ಬಗೆಯಬೇಡ.

**ಥ್ಲಿಕರಿಂಗ್:–** ವಾಟ್ ಎ ಗ್ರೇಟ್ ಸ್ಪೀಚ್ ಚೆನ್ನಮ್ಮಾ ಯು ಆರ್ ಗ್ರೇಟ್ ಚೆನ್ನಮ್ಮಾ ನಿನ್ನ ಮುಂದೆ ನಮ್ಮದು ಬ್ರಿಟಿಷ್ ಸರಕಾರ ನಿನ್ನ ಕಾಲು ಕಚಾ ಟಾಯಿ(ಎಲ್ಲರೂ ಸೆಲ್ಯೂಟ್ ಮಾಡುವರು) ಚೆನ್ನಮ್ಮಾ ನಿಮ್ಮದು. ನಿನಗೆ ಬಿಟ್ಟು ಬಿಡಬೇಕು ಅಂತಾ ಯನಚಾ ಆಗತ್ಯೆತೆ. ಆದ್ರೆ ನಮ್ಮದು ಬ್ರಿಟಿಷ ಸರಕಾರ ಬಾಳಾ ಬಾಳಾ ಡೇಂಜರ್ ಇದಾನೆ ನಿಮಗೆ ಬಿಟ್ರೆ ನಂದು ಮರ್ಡರ ಮಾಡುತ್ತಾರೆ. ಅಲ್ಲದೇ ಬ್ರಿಟಿಷ ಇತಿಹಾಸ ಹಾಗೇ ಈ ಥ್ಲಿಕರಿಂಗದು ಹೆಸರ ಕೆಟ್ಟದು ಬಡಿದಾರೆ. ಅಲ್ಲದೇ ನಾನು ನನ್ನ ಕರ್ತವ್ಯ ಬಿಟ್ಟಿದಂತಾದ್ದೆ ಕಾರಣ ಮದರ ಚೆನ್ನಮ್ಮಾ ನಿನ್ನ ಮೇಥಾ ಥ್ಲಿಕರಿಂಗ ಮಾಡೀದ ತಪ್ಪು ಮಣಿಸು ಬಾನೇ ಮಣಿಸು.

**ಚೆನ್ನಮ್ಮ:–** ಆಂಗ್ಲ ಹೃದಯದಲ್ಲೂ ಮಾನವೀಯತೆ ಇದೆ ಎನ್ನುವುದನ್ನು ತೋರಿಸಿಕೊಟ್ಟ ಥ್ಲಿಕರಿಂಗ್ ನೀನೂ ಈ ಚೆನ್ನಮ್ಮನಿಗೆ ಮಗನೇ. ಅಪ್ಪು ಅಪ್ಪು ಬಾ ಕಂದು ತಪ್ಪು ನಿನ್ನದಲ್ಲ ಉಪ್ಪುಂಡ ಒಡೆಯನ ಬಗ್ಗೆ ಇದ್ದ ನಿನ್ನ ನಿಷ್ಠೆ ಕಂಡು ಸಂತೋಷಪಟ್ಟಳು ನಿನ್ನ ತಾಯಿ ಮಗನೇ. ನಿನ್ನಲ್ಲಿದ್ದ ದೇಶಭಕ್ತಿಯ ಒಂದು ಭಾಗ ದೇಶ ದ್ರೋಹದ ಕೊಲೆಗೈದ ನನ್ನ ಮಕ್ಕಳಿಗಿದ್ದರೆ ಇಂದು ಈ ಚೆನ್ನಮ್ಮನ ಸ್ಥಿತಿ ಹೀಗಿರುತ್ತಿರಲಿಲ್ಲ.

(ದೇಶಾಭಿಮಾನ ಉಕ್ಕಿಸುವ ತಾಯಿ ನೆಲದ ರಕ್ಷಣೆಗಾಗಿ ಪಣತೊಟ್ಟ ಮೇಲ್ಕಂಡ ಚೆನ್ನಮ್ಮನ ಸಂಭಾಷಣೆಗಳನ್ನು ಓದಿದಾಗ ಎಂಥವರ ಎದೆಯಲ್ಲಿ ಕಿಚ್ಚು ಹೊತ್ತದೇ ಇರದು. ಈ ಸಂಭಾಷಣೆಗಳೇ ನಾಟಕವನ್ನು ಉತ್ತುಂಗಕ್ಕೇರಿಸಿ ಖೇಡಗಿಯವರ ಪ್ರತಿಭೆಯನ್ನು ಪರಿಚಯಿಸಲು ಕಾರಣ)

* * * *

## ಸಂಭಾಷಣೆಗಳಲ್ಲಿ ತೋರುವ ಬಹುಳಜ್ಞಾನ ಮತ್ತು ಪ್ರಜ್ಞಾಪ್ರವಾಹ

'ಗರಗದ ಮಡಿವಾಳೇಶ್ವರ ಮಹಾತ್ಮೆ' ಇದು ಪೇಡಗಿ ಇವರು ರಚಿಸಿದ ಐತಿಹಾಸಿಕ ಹಿನ್ನೆಲೆಯ ಭಕ್ತಿಪ್ರದಾನ ನಾಟಕ. ನಾಟಕದಲ್ಲಿ ಕೆಲ ಪಾತ್ರಗಳಿಂದ ನುಡಿಸಿದ ಸಂಭಾಷಣೆಗಳು ನಾಟಕಕಾರನ ಬಹುಳಜ್ಞಾನ, ಚಿಂತನೆ ಮತ್ತು ಆಡುಮಾತಿನ ಸೊಗಸನ್ನು ಹೊಳೆಯಿಸುವಲ್ಲಿ ಯಾವತ್ತಿಗೂ ಸೋಲಲಾರವು. ಅಲ್ಲಿ ನಿರ್ಭಿಡೆ, ದೇಶಿ ಬೈಗುಳ, ಆಡುಮಾತು, ಇದ್ದದ್ದನ್ನು ಇದ್ದ ಹಾಗೆ ಹೇಳುವ ನೇರ ಬಿಚ್ಚು ನುಡಿಗಳ ಗಮ್ಮತ್ತು ಸಂಪದ್ಭರಿತವಾಗಿದೆ. ಸಂತ ಮಡಿವಾಳಜ್ಜಯ್ಯನವರು ಕಿತ್ತೂರು ಸಂಸ್ಥಾನದ ರಾಜಗುರುಗಳು. ಸಾಮ್ರಾಜ್ಯವನ್ನು ಉಳಿಸಲು ಅವರು ಪಡುವ ಪರಿಶ್ರಮ, ಬ್ರಿಟಿಷರ ಕುಯುಕ್ತಿ , ಲಿಂಗ ತಾರತಮ್ಯತೆ ಮುಂತಾದವುಗಳು ಹೃದಯಂಗಮವಾಗಿ ಮೂಡಿವೆ. ಈ ನಾಟಕದಲ್ಲಿ ಹಿಂದು-ಮುಸ್ಲಿಂ ಪರಸ್ಪರ ಧರ್ಮದ ಬಗ್ಗೆ ಇರುವ ತಪ್ಪುತಿಳುವಳಿಕೆಗಳನ್ನು ಹೋಗಲಾಡಿಸಲು ಮಡಿವಾಳಜ್ಜ ಮತ್ತು ಸುಲ್ತಾನನ ನಡುವೆ ನಡೆಯುವ ಸಂಭಾಷಣೆಗಳು ನಾಟಕಕಾರನಲ್ಲಿರುವ ಪಾಂಡಿತ್ಯ ಮತ್ತು ಅರಿವಿನ ಸೂಚಕಗಳು. ಸಾಮರಸ್ಯ ಮತ್ತು ಭಾವೈಕ್ಯತೆ ಬೆಸೆಯುವಲ್ಲಿ ನಾಟಕಕಾರನ ಪ್ರಜ್ಞೆ ಇಲ್ಲಿ ಪ್ರವಹಿಸಿರುವುದು ಗೋಚರಿಸುತ್ತದೆ. ಈ ಪ್ರಜ್ಞೆ ಪ್ರಸ್ತುತವೂ ಹೌದು. ಸಂಭಾಷಣೆಗಳಲ್ಲಿ 'ಎವರ್ ಗ್ರೀನ್' ಕಾಯ್ದುಕೊಳ್ಳುವ ಗುಣ ಲೇಖಕರಿಗೆ ಬಹುಸಲೀಸು ಎಂಬುದಕ್ಕೆ ಸಾಕ್ಷ್ಯವಹಿಸುತ್ತವೆ. ಒಟ್ಟು ೨೮ ಪ್ರವೇಶಿಕೆಗಳಿರುವುದು ಈ ನಾಟಕದ ವಿಶೇಷತೆ. ೨೦೧೩ರಲ್ಲಿ ಬಿಜಾಪುರದಲ್ಲಿ ಜರುಗಿದ ೭೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಾರ್ಥವಾಗಿ ಕನ್ನಡ ಸಾಹಿತ್ಯ ಪರಿಷತ್ತು ಈ ಪುಸ್ತಕವನ್ನು ಪ್ರಕಟಿಸಿದೆ. ಓದುತ್ತ ಹೋದಂತೆ ಪಾತ್ರಗಳು ಕಣ್ಣೆದುರಿಗೆ ನಿಂತಂತಾಗುತ್ತವೆ. ನಿರೂಪಣೆಯಲ್ಲಿ ವೇಗ ಮತ್ತು ಲಿಂಕ್ ಇರುವುದರಿಂದ ಜಾಳುಜಾಳತೆ ಮತ್ತು ಅಸ್ಪಷ್ಟತೆಗಳಿಗೆ ಅವಕಾಶವೇ ಇಲ್ಲ. ಕೇವಲ ಮಡಿವಾಳೇಶ್ವರರ ಪವಾಡ ಮತ್ತು ಘಟನೆಗಳನ್ನು ಆಲಿಸಿ ಕಟ್ಟಿದ ವಿಭಿನ್ನ ಬಗೆಯ ನಾಟಕ. ಈ ಕೆಳಕಾಣಿಸಿದ ಸಂಭಾಷಣೆಗಳು ನಾಟಕದ ಬೇರೆ ಬೇರೆ ದೃಶ್ಯಗಳಿಂದ ಆಯ್ದುಕೊಂಡವುಗಳು.

* * * *

ಮಡಿವಾಳ: ಲಿಂಗಾ ಅಂದಾಗ ಅದ್ರಲ್ಲಿ ಅಶುದ್ಧವೇ ಇಲ್ಲಾ. ಆದ್ರೆ ಆದಿ ಲಿಂಗಾ, ಅನಾದಿ ಲಿಂಗಾ, ಅಮೃತ ಲಿಂಗಾ. ಅಗೋಚರ ಲಿಂಗಾ, ಅನಾಮಯ ಲಿಂಗಾ, ಅಭೇದ್ಯ ಲಿಂಗಾ, ಭೇದಕ ಲಿಂಗಾ, ಅಸಾಧ್ಯ ಸಾಧಕಲಿಂಗಾ,

ಪರುಷ ಲಿಂಗಾ, ಗುರುಲಿಂಗಾ, ಶಿವಲಿಂಗಾ, ಜಂಗಮಲಿಂಗಾ, ಪ್ರಸಾದ ಲಿಂಗಾ, ಇಷ್ಟೆಲ್ಲಾ ಲಿಂಗಗಳಲ್ಲಿ ನೀವು ಕಟ್ಟಿಕೊಂಡ ಲಿಂಗ ಯಾವುದು?

* * * *

ವೀರಭದ್ರ: ಜಂಗಮ ಜಗಜ್ಯೋತಿ ನಾನು, ಪಾತರದವಳಿಗೆ ಅವ್ವಾ ಅನ್ನಬೇಕಾ? ಏಯ್ ಹುಡ್ಗಿ ಪಾಪ ಹತ್ತೀತು, ಗಲ್ಲ ಗಲ್ಲ ಬಡ್ಕೋ–

* * * *

ಗೌರಿ: ಕೂಸ ಹಡಿಯಂತಿಯೇನ?

ವೀರಭದ್ರಯ್ಯ: ಕೂಸ ಅಲ್ಲದ ಕತ್ತೀಮರಿ ಹಡಿಬೇಕಂತಿಯೇನ? ನೋಡಗೌರಿ ನೀ ಮಾತ್ರ ಹೆಣ್ಣ ಹಡೀಬೇಕು.

ಗೌರಿ: ಆಗೋದಿಲ್ಲ. ಹಡದರ ನಾ ಗಂಡ ಹಡೀವಾಕಿ ನೀಯೇನ ಮಾಡಂವ?

* * * *

ಮಡಿವಾಳಜ್ಜ: ಸಿಟ್ಟಿಗೇಳದಿರಿ ಸ್ವಾಮಿಗಳೇ, ಈ ಸ್ಥಾನದಲ್ಲಿದ್ದವರಿಗೆ ಸಿಟ್ಟು ಇರಬಾರದು. ಕಾಳ್ಗಿಚ್ಚು ಎದ್ದರೆ ಕಾನನಕ್ಕೆ ಗುರಿ, ಕಾಲಗ್ನಿ ಎದ್ದರೆ ಲೋಕಕ್ಕೆ ಗುರಿ, ಶರಣರಲ್ಲಿ ಸಿಟ್ಟಿದ್ದರೆ ಅದಕ್ಕೆ ತಾನೇ ಗುರಿ ಅಂತಾರೆ. ಎಲ್ಲವನ್ನೂ ತಿಳಿದು ಕಾಯದ ಗುಣ ಅಳಿದು ಮಾಯದ ಕಾಮ, ಕ್ರೋದಗಳ ತುಳಿದು ಅಂಗವೆಲ್ಲವೂ ಲಿಂಗಮಯವಾದರೆ ಜಂಗಮರಿಗೆ ಯಾರ ಹಂಗೂ ಇಲ್ಲ.

* * * *

ರುದ್ರಯ್ಯ: ಮುಗದ ಹೋಯ್ತು ಬಿಡು. ನೀ ಏಟರ ಸ್ವಲ್ಪು ಶ್ಯಾಣಾಕಿ ಅಲ್ಲಾ. ನಾನ ಗಂಡಸನ್ನೋದ ನನಗ ಖಾತ್ರಿ ಇಲ್ಲ.

* * * *

ರುದ್ರಯ್ಯ: ಕೆಲಸ ಇಲ್ಲದ ಕರೀಯಾಕ ನನಗೇನ ತಲಿಕೆಟ್ಟೈತಿ. ಅಲ್ಲ ಒಂದಳತಿ ಕೂಗೆ ಕೂಗತೀನಿ, ದರಕಾರ ಇಲ್ದಂಗ ಹೊಂಟಬಿಟ್ಟಿಯಲ್ಲ? ನಿನಗ ಹರೇ ಬಂದೈತಿ ಅನ್ನೂದು ಗೊತ್ತೈತಿ, ಹರೆ ಬಂದು ದೊರೆ ಮುಂದೆ ಕುಣಿಯಾಕ ಹತ್ತಿದಿ. ಅಂದಾಗ ತೀರಾ ಇಷ್ಟ ಧಿಮಾಕ ಬರಬಾರದು.

* * * *

**ಸಿದ್ಧಾರೂಢ:** ಬುದ್ಧಿ ದೇಹವೇ ಮನೆ ಎರಡು ಹುಟ್ಟುಗಳ ನಡುವಿನ ಸ್ಥಳ. ತ್ರಿಕೂಟವೇ ಅಡಿಗೆ ಮನೆ. ಇಡಾ ಪಿಂಗಳ ಸುಶುಮ್ನ ನಾಳಗಳೇ ಮೂರು ನದಿಗಳು. ಅವುಗಳಿಂದ ರೇಚಕ, ಕುಂಭಕ, ಪೂರಕಗಳ ಮೂಲಕ ಪ್ರಾಣಾಯಾಮ ಮಾಡುವುದೇ ಅಡಿಗೆ ಕಾರ್ಯವು. ಊಟದ ನಿರ್ವಿಕಲ್ಪ ಸಮಾಧಿಯೇ ಆನಂದ ಜಾಗೃತವಾದ ಮೂರು ಅವಸ್ಥೆಗಳೇ ಮೂರು ಹರದಾರಿ ಅಲ್ಲವೇ ಬುದ್ಧಿ?

* * * *

## ಖೇಡಗಿಯವರ ನಾಟಕಗಳಿಂದ ಆಯ್ದ ಕೆಲವು ಗೀತೆಗಳು

**'ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ'** ನಾಟಕದಲ್ಲಿ ರಮಣ ಪಾತ್ರಧಾರಿ ಹಾಡಿದ ಗೀತೆ

"ಹರನ ಜಡೆಯ ಮೇಲೆ ಏರಿತ್ತು ಹೆಣ್ಣು
ಹರಿಯ ತೊಡೆಯ ಮೇಲೆ ಕುಳಿತಿತ್ತು ಹೆಣ್ಣು
ಬ್ರಹ್ಮನ ನಾಲಗೆಯ ಮೇಲೆ ಕುಣಿದಾಡಿದ ಹೆಣ್ಣು
ಮೂವರನ್ನು ಮಕ್ಕಳಾಗಿ ಆಡಿಸಿತು ಹೆಣ್ಣು ಹರನ ಜಡೆ..
ಹೆಣ್ಣು ಹುಳಿ ಮಾವಿನ ಹಣ್ಣು, ಕಣ್ಣಿಟ್ಟು ಕೆಡಬೇಡ ನೀನು.
ಹೆಣ್ಣಿನ ನೆಲೆಯು, ನೀರಿನ ನೆಲೆಯು, ಕುದುರೆಯ ನೆಲೆಯು ತಿಳಿದವರಿಲ್ಲ
ಋಷಿಯ ಮೂಲ, ನದಿಯ ಮೂಲ, ಹೆಣ್ಣಿನ ಶೀಲ ಕೇಳುವುದು ತರವಲ್ಲ
ಮೂವರನ್ನು...
ಆರು ಮೂರು ಒಂಬತ್ತು, ತಿಳಿಬೇಕಿದರ ಗಮ್ಮತ್ತು
ಆಗುವುದು ನಮ್ಮೆಲ್ಲರ ಕಿಮ್ಮತ್ತು
ಅಂದ್ರ: ಕಾಮ, ಕ್ರೋಧ, ಮೋಹ, ಮದ, ಮತ್ಸರ, ಲೋಭ! ಮೂವರನ್ನು..
ಹೆಣ್ಣು, ಹೊನ್ನು, ಮಣ್ಣು ಇವೇ ಅದರ ಮಸಲತ್ತು
ಬಿಡಿಸಿ ಹೇಳಿದರ ಹೋಗತಿರಿ ಬೇಸತ್ತು
ನನ್ನ ಮಾತು ಕೇಳದಿದ್ದರ ಹೋಗತಿರಿ ನೀವು ಸತ್ತು
ಸಿಟ್ಟಿಗೆದ್ದು ಶಿವ ಕಾಮನಿಗೆ ಸುಟ್ಟಾ
ರತಿಗೆ ಮುತ್ತೈದೆ ಅಂತ ಹರಸಿಬಿಟ್ಟ, ಸತ್ಯವಂತ ಶಿವ ನೋಡ್ರಿ ಅಲ್ಲೇ ಕೆಟ್ಟ
ಬುದ್ಧಿವಂತ ಬ್ರಹ್ಮ ಸೃಷ್ಟಿ ಏನೋ ಮಾಡಿಟ್ಟ, ಆದರೂ ಜಗದಾಗ ಆಗ್ಯಾನ ಕೆಟ್ಟ
ಯಾಕ:ತನ್ನ ಮಗಳಿಗೆ ತಾನೇ ಮೋಹಿಸಿಬಿಟ್ಟ! ಮೂವರನ್ನು
ಜೀವನವೆಲ್ಲ ಬರೀ ಕಾದಾಟ, ನಾನು ನೀನು ಎನ್ನುವ ಹಾರಾಟ
ಕೊನೆಗೊಂದು ದಿನ ಮಾರಾಟ, ಆ ಬಳಿಕ ಎಲ್ಲಾ ತೂರಾಟ
ಸುಡಗಾಡ ದಾರಿ ಹಿಡಿದು ಹೊರಟ, ತಿಳಿದಿಲ್ಲ ಯಾರೂ ಶಿವನಾಟ
ಇದು ಎಲ್ಲಾ ಅವನ ಮಾಯಾ ಮಾಟ। ಮೂವರನ್ನು ಮಕ್ಕಳಾಗಿ
ಸತ್ಯವಂತ ಶ್ರೀಹರಿ ಮೋಹಿನಿಯಾಗಿಬಿಟ್ಟ, ದೇವತೆಗಳಿಗೆಲ್ಲ ಅಮೃತ

*  *  *  *

## 'ಸಂಗೊಳ್ಳಿ ರಾಯಣ್ಣ' ನಾಟಕದಲ್ಲಿ ಪಾರು ಮತ್ತು ಚೆನ್ನ ಹಾಡಿದ ಗೀತೆ.

**(ರಾಗ-ಭೈರವಿ)**

**ಚೆನ್ನ:** ಚಿಗರಿಗಣ್ಣಿನ ಚೆಲುವೆ, ತಿರುತಿರುಗಿ ಯಾಕ ನೀ ಬರುವೆ
**ಪಾರು:** ಚಿಗುರು ಮೀಸೆ ಚೆಲುವ, ನನ್ನ ಮದುವೆ ನೀ ಯಾಕ ಮರೆವೆ
**ಚೆನ್ನ:** ಕಳ್ಳಿಯ ಹಾಲಿನ ಬೆಳ್ಳಿಯ ಬಣ್ಣ, ಸುಳ್ಳೇನ ನನ್ನ ಮಾತ
ಸುಳ್ಳೇನ ನನ್ನ ಮಾತ ಏ ಹಳ್ಳಿಯ ಹೆಣ್ಣ
ನಿನ್ನ ಮ್ಯಾಲ ನೂರಾರ ಕಣ್ಣ
**ಪಾರು:** ಸುಂದರ ಚಂದಿರ ನೀನೆ ನನ್ನ ಬಂಗಾರ ಸಿಂಧೂರ
ನಿನ್ನ ಆಸರಾ ಇರಲಿ ಪೂರಾ, ಓ ಓ ನಿನ್ನಾಸರಾ ಇರಲಿ
ಚೆನ್ನಮ್ಮ ತಾಯಿ ಕಣ್ಣೀರ ಹಾಕಿ ಹೋಗ್ಯಾಳ ಜೇಲೀಗಿ
ನಮ್ಮವ್ವ ಆಕಿಗಿ ಬಿಡುಸುದು ಐತಿ ನಮ್ಮೆಲ್ಲ ಪಾಲಿಗಿ
**ಚೆನ್ನ:** ಅದರ ಚಿಂತಿ ನಿನಗ್ಯಾಕ ಹುಡುಗಿ ಈ ಹುಡುಗ ಇಲ್ಲಿರುವಾಗ
ಹೆತ್ತವ್ವಗ ಬಿಡಿಸಿ ಕಿತ್ತೂರು ಪಡೆದು ನೆತ್ತರ ತಿಲಕ ಹಚ್ಚತೀನಿ ಚೆಲುವೆ
ಚಿಗುರುಗಣ್ಣಿನ ಚೆಲುವೆ.

* * * *

## 'ಅಲ್ಲಿ ಸುಮ್ಮನೆ ಇಲ್ಲಿ ನಮ್ಮನೆ' ನಾಟಕದ ಗೀತೆ

**ಗಂಡು:** ನಿನಗೂ ಕೊಟ್ಟಾನ ದೇವರು ನನಗೂ ಕೊಟ್ಟಾನ
**ಹೆಣ್ಣು:** ನಿನಗೂ ಕೊಟ್ಟಾನ ದೇವರು ನನಗೂ ಕೊಟ್ಟಾನ
ಇಬ್ಬರ ನಡುವ ಒಂದೇ ಇಟ್ಟಾನ, ಅದಕ್ಕ ಮನಸ್ಸಂತ ಹೆಸರಿಟ್ಟಾನ.
ದೇವರು...
ಆಡ್ತಾ ಆಡ್ತಾ ಗೊಂಬಿ ಮಾಡ್ಯಾನ ನೋಡ್ತಾ ನೋಡ್ತಾ ಜೀವಾ ತುಂಬ್ಯಾನ
**ಗಂಡು:** ನಿನಗ ಹೆಣ್ಣಂತ ಹೆಸರಿಟ್ಟಾನ ನನಗ ಗಂಡಂತ ಕಳಿಸಿಕೊಟ್ಟಾನ
**ಹೆಣ್ಣು:** ಮಾಯೆ ಅಂತ ನನಗ ಕರೀತಾನ, ಮೋಹ ಮಾಡಂತ ನಿನಗ ಹೇಳತಾನ
**ಗಂಡು:** ಗಂಡು ಹೆಣ್ಣು ಕೂಡಿಸಿಬಿಟ್ಟಾನ ಹುಟ್ಟಿದ ಜೀವಕ್ಕ ಕೂಸಂತ ಹೆಸರಿಟ್ಟಾನ
**ಹೆಣ್ಣು:** ಕಾಮದ ಕುದುರಿ ಹತ್ತಿಸಿಬಿಟ್ಟಾನ, ಕ್ರೋಧನ್ನೋ ನಾಯಿಗೆ ಬಿಟ್ಟಾನ
**ಗಂಡು:** ದೇವರನ್ನಾವ ಎಲ್ಲೋ ಕುಂತುಬಿಟ್ಟಾನ ಎಲ್ಲಾ ನಿನದೇ ಅಂತ ನಿಂತಬಿಟ್ಟಾನ
**ಹೆಣ್ಣು:** ಇಲ್ಲಿವೆಲ್ಲಾ ನಮ್ಮ ಕೈಯಲ್ಲಿ ಅಂತಾನ ಅಲ್ಲಿದೆಲ್ಲಾ ಅವನ ಕೈಯಲ್ಲಿ
ಅಂತಾನ
**ಗಂಡು:** ಇಲ್ಲಿದೆಲ್ಲಾ ನಿಮದೆಲ್ಲಾ ಅಂತಾನ. ದೇವರು...

* * * *

**'ಗೌರಿ ಹೋದಳು ಗಂಗೆ ಬಂದಳು'** ನಾಟಕದ ಜೋಗುಳ ಪದ

ಜೋಗುಳ ಹಾಡುವೆ ತೊಟ್ಟಿಲ ತೂಗುವೆ ಮಲಗು ನನ್ನ ಕಂದ
ತಾಯಿಯ ಉಡಿಯಲ್ಲಿ ನೀನೇ ಚೆಂದ
ಮಲಗು ಅರಗಿಣಿಯೇ ಮುತ್ತಿನ ಖಣಿಯೇ
ಎತ್ತಿದ ಕೈಗಳ ಶೃಂಗಾರ ಮಣಿಯೇ. ಜೋಗುಳ..
ನಿನ್ನ ನುಡಿಯ ಕೇಳಲಿಲ್ಲ, ನಿನ್ನ ನಡೆಯ ನೋಡಲಿಲ್ಲ
ತಂದೆಯ ಭಾಗ್ಯ ನೀ ಪಡೆಯಲಿಲ್ಲ, ನನ್ನೊಡನೆ ನೀ ಬಂದಿಯಲ್ಲ
ಊರಿಂದ ನಿನ್ನ ತಂದೆ ಬಂದು ಕೇಳುವರು ನನ್ನ ಕಂದ ಎಲ್ಲಿ ಎಂದು
ಹೇಳುವೆ ಕಂದಾ ಕಾಣದಾ ಲೋಕಕ್ಕೆ ಆ ದೇವ ಬಂದು ಒಯ್ದನೆಂದು
ಕೆರಯ ತೀರದಲ್ಲಿರುವೀ ನೀ ನನ್ನ ಚಿನ್ನದ ಕೂಸೆ
ನೀರಿನ ತೆರೆಯ ಮೇಲೆ ನಿನ್ನ ಹೆಸರು ನಾ ಬರೆಯಲೇ
ಆ ಲೋಕ ನೆನೆಯದಿರು ಕಂದಾ
ಈ ಲೋಕ ನಮಗೇ ಚೆಂದ ಜೋಜೋ ಲಾಲಿ.

(ಹಿನ್ನೆಲೆ)

ಗಂಗಾ ಮಾತೆ ಆಹುತಿ ಕೇಳಲು
ಬಲಿದಾನ ನೀಡಿದಳಲ್ಲಾ, ಬಲಿದಾನ ನೀಡಿದಳಲ್ಲಾ
ಪುಣ್ಯವತಿ ಬಲಿಯಾಗುವವಳಲ್ಲ

* * * *

## ಖೇಡಗಿಯವರ ನಾಟಕಗಳ ಪರಿಚಯಾತ್ಮಕ ವಿಶ್ಲೇಷಣೆ.

ನಾಟಕಕಾರ ಎಸ್. ಎಮ್. ಖೇಡಗಿಯವರು ಎಲ್ಲ ಪ್ರಕಾರದ ನಾಟಕ ರಚನೆಯಲ್ಲಿ ಸಿದ್ಧಹಸ್ತರು ಎಂಬುದಕ್ಕೆ ಅವರು ರಚಿಸಿದ ೫೧ ನಾಟಕಗಳು ಸಾಕ್ಷ್ಯ ನುಡಿಯುತ್ತವೆ. ಕಥಾ ವಸ್ತು, ತಂತ್ರ , ಗ್ರಾಮ್ಯ ಮತ್ತು ಶಿಷ್ಟ ಭಾಷೆಗಳ ಭರಪೂರದೊಂದಿಗೆ ತಕ್ಕ ಸಂವಿಧಾನ ನಾಟಕಾಭಿಮಾನಿಗಳಿಗೆ ಹಿಡಿಸುವುದಲ್ಲದೇ ರಂಗಭೂಮಿಯಲ್ಲಿ ಯಶಸ್ವಿ ಪ್ರದರ್ಶನಗೊಳ್ಳಲೂ ಸಹ ಮೂಲಕಾರಣ. ಖೇಡಗಿಯವರ ನಾಟಕಗಳ ಮೂಲದ್ರವ್ಯ ಸಾಮಾಜಿಕ ಸಮಸ್ಯೆಗಳ ಅನಾವರಣಗೊಳಿಸಿ ಅಂದರೆ ಪ್ರಸ್ತುತ ಸಮಾಜದ ಸಮಸ್ಯೆಗಳು, ಮಾನವೀಯ ಸಂಬಂಧಗಳು ಹೀಗಿವೆ ಎಂದು ರಂಗಸಾಹಿತ್ಯದ ಚೌಕಟ್ಟಿನಲ್ಲಿ ಹಿಡಿದಿಡುವುದು. ಇದರೊಂದಿಗೆ ಯಶಸ್ವಿಯೂ ಅದರ ಜೊತೆ ನೆರಳಾಗಿ ಬರದೆ ಇನ್ನೇನು?

೧) **ಕಾಣಿಕೆ:** ಖೇಡಗಿಯವರು ಬರೆದ ಪ್ರಪ್ರಥಮ ನಾಟಕವಿದು, ಸಾಹಿತ್ಯಬದ್ಧ ಪತ್ತೇದಾರಿ ನಾಟಕ. ಅಣ್ಣ-ತಂಗಿಯರು ಬಡತನದ ಬವಣೆಯಲ್ಲಿ ನಲುಗುವ ಕಥೆಯಿಲ್ಲಿದೆ. ತಂಗಿ ಗರ್ಭಿಣಿಯಾಗಿದ್ದಾಗ ಅವಳ ತಂದೆ ತೀರಿಕೊಳ್ಳುತ್ತಾನೆ. ಅವಳು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ನಿಗೂಢ ಸಾವುಗಳನ್ನು ಸಾಮಾಜಿಕ ನಾಟಕದ ಚೌಕಟ್ಟಿನಲ್ಲಿ ಪತ್ತೆ ಹಚ್ಚುತ್ತ ಹೋಗುವುದು. ದುಃಖಾಂತ್ಯ ನಾಟಕವಿದು.

೨) **ತಂಗಿ ಕೊಟ್ಟ ಕಾಣಿಕೆ:** ಖ್ಯಾತ ನಾಟಕಕಾರ ಕಂದಗಲ್ಲರ ಬಡತನದ ಭೂತ ನಾಟಕದ ಪ್ರೇರಣೆಯಿಂದ ರಚಿಸಲ್ಪಟ್ಟ ನಾಟಕವಿದು. ವಿದ್ಯಾವಂತ ಪದವೀಧರನಿಗೆ ಕಾಡಿದ ನಿರುದ್ಯೋಗದ ಸಮಸ್ಯೆ ಮತ್ತು ಕೊನೆಗೂ ಆತ ನಿರುದ್ಯೋಗಿಯಾಗಿಯೇ ಉಳಿಯುತ್ತಾನೆ. ನಿರುದ್ಯೋಗ ಎನ್ನುವುದು ತ್ರಿಕಾಲಗಳಲ್ಲೂ ಸ್ಥಾಯಿಯಾಗಿರುವುದು ಎನ್ನುವುದನ್ನು ತಿಳಿಯಪಡಿಸುವ ನಾಟಕ.

೩) **ಹೇಳಿದರೆ ಹೆತ್ತವರಾಣೆ:** ಶ್ರೀಮಂತನ ದರ್ಪಕ್ಕೊಳಗಾಗಿ ತನ್ನ ಬದುಕನ್ನೇ ಧಾರೆಯೆರೆದ ತ್ಯಾಗಮಯಿ ಹೆಣ್ಣೊಬ್ಬಳ ಕಥೆ. ವಯಸ್ಸಾದ ಆ ಶ್ರೀಮಂತನನ್ನು ವರಿಸುವ ಹದಿಹರೆಯದ ಹೆಣ್ಣೊಬ್ಬಳ ಮನಮಿಡಿಯುವ ಕಥೆ.

೪) **ಶೀಲಗೆಟ್ಟರೂ ಸಾಧ್ವಿ:** ಭಾರತಿ ನಾಟ್ಯ ಸಂಘ ಸೂಡಿ ಇವರಿಗಾಗಿ ಬರೆದುಕೊಟ್ಟ ನಾಟಕವಿದು. ತನ್ನಿಂದ ಅತ್ಯಾಚಾರಕ್ಕೊಳಗಾದ ಹೆಣ್ಣೊಬ್ಬಳನ್ನು

ತನ್ನ ಮಗನ ಜೊತೆ ಮದುವೆ ಮಾಡಲು ಯತ್ನಿಸುವ ವ್ಯಕ್ತಿ ಮತ್ತು ಅವನ ಮಗನ ಜೊತೆ ಮದುವೆಯನ್ನು ನಿರಾಕರಿಸಿ ಹಾಗೆಯೇ ಉಳಿದುಬಿಡುವ ದುರಂತಮಯಿ ಹೆಣ್ಣೊಬ್ಬಳ ಕಥಾನಕವುಳ್ಳ ನಾಟಕ.

೫) **ಕೆಚ್ಚೆದೆಯ ವೀರ:** ಕಾಲ್ಪನಿಕ ಐತಿಹಾಸಿಕ ನಾಟಕ. ಸ್ವಂತ ಗಂಡನನ್ನೇ ಸೆರೆಮನೆಯಲ್ಲಿಟ್ಟು ರಾಜ್ಯವನ್ನಾಳಲು ಯತ್ನಿಸಿದ ಹೆಣ್ಣೊಬ್ಬಳ ಕಥೆ. ಅವಳ ಮಗಳೇ ಬಂದು ಸೆರೆಮನೆಯಲ್ಲಿದ್ದ ತಂದೆಯನ್ನು ಬಿಡಿಸುತ್ತಾಳೆ. ಇದು ಸುಖಾಂತ್ಯ ನಾಟಕ.

೬) **ಸಂಗೊಳ್ಳಿ ರಾಯಣ್ಣ:** ಸಂಗೊಳ್ಳಿ ರಾಯಣ್ಣನ ಜನ್ಮಸ್ಥಳ, ಐಕ್ಯ ಸ್ಥಳ ಮುಂತಾದಗಳ ಕಡೆ ತಿರುವಿ ಪ್ರೊ ವಿ. ಜಿ. ಮಾರಿಹಾಳರ ಜೊತೆಗೆ ಚರ್ಚಿಸಿ ೧೯೭೭ರಲ್ಲಿ ರಚಿಸಿದ ಐತಿಹಾಸಿಕ ನಾಟಕ. ರಾಣಿ ಚೆನ್ನಮ್ಮ ಮತ್ತು ಪರಂಗಿ ಅಧಿಕಾರಿ ನಡುವಿನ ಮೈನವಿರೇಳಿಸುವ ಸಂಭಾಷಣೆಗಳು ಇದರ ಹೈಲೈಟ್.

೭) **ದೇವರಾಟ ತಿಳಿದಿಲ್ಲ:** ಕುಡಿತ ಮತ್ತು ಜೂಜು ಮನುಷ್ಯನನ್ನು ಅಧಪತನಕ್ಕೆ ಒಯ್ಯುತ್ತವೆ ಎಂಬುದನ್ನು ಸಾರುವ ನಾಟಕ. ಕುಡುಕ ಗಂಡ, ಕಾಯಿಲೆಬಿದ್ದ ಮಗನಿಗಾಗಿ ಔಷಧಿ ತರಲು ಒಯ್ದ ಹಣದಿಂದ ಕುಡಿದು ಬೀಳುವುದು, ಮಗ ಮತ್ತು ಹೆಂಡತಿಯ ಸಾವು ಇತ್ಯಾದಿ ಸನ್ನಿವೇಶಗಳಿರುವ ನಾಟಕ.

೮) **ನಿಮ್ಮ ಹೆಂಡತಿ ನಾನಲ್ಲ:** ೧೯೭೮ರಲ್ಲಿ ಗುಡಿಗೇರಿ ಬಸವರಾಜರ ಕಂಪನಿಗಾಗಿ ಬರೆದುಕೊಟ್ಟ ಮೊದಲ ಸಾಮಾಜಿಕ ನಾಟಕ. ಕುಕನೂರು ಲಲಿತಮ್ಮ ಮತ್ತು ಮಂಜಮ್ಮ ಸಹೋದರಿಯರಿಗಾಗಿ ಬರೆದುಕೊಟ್ಟ ನಾಟಕ. ಅವಿದ್ಯಾವಂತನೊಬ್ಬ ಶಾಲೆಯೊಂದರ ಚೇರ್ಮನ್ ಆಗಿರುತ್ತಾನೆ. ಆತನದು ಹುಂಬ ಸ್ವಭಾವವಾದರೂ ಅದರ ಹಿಂದೆ ಕಳಕಳಿ ಮತ್ತು ನೀತಿ ಇರುತ್ತದೆ ಎಂಬುದನ್ನು ಹಾಸ್ಯಪ್ರಧಾನವಾಗಿ ಹೇಳುತ್ತಾ ಹೋಗುವ ಸುಖಾಂತ್ಯ ನಾಟಕ.

೯) **ಅಪ್ಪನ ಗಂಡ ಅವ್ವ:** ಗಂಡನ ಮೇಲೆ ಹೆಂಡತಿಯ ಆಡಳಿತ. ಹೊರಗೆ ಸರದಾರನಂತಿರುವ ಗಂಡ ಹೆಂಡತಿಯ ಎದುರಿಗೆ ಮೀಸೆ ಕೆಳಮುಖ ಮಾಡುತ್ತಿದ್ದ. ದುರಂತ ನಾಟಕವಿದು.

೧೦) **ಮಾತು ಅಂಗಾರ ಮೌನ ಬಂಗಾರ:** ಅರಿಶಿನಗೋಡಿ ಕಂಪನಿಗೆ ಬರೆದು ಕೊಟ್ಟ ದುರಂತ ನಾಟಕವಿದು. ಹೆಣ್ಣಿನ ದಲಾಲಿ, ಮತಾಂತರ ಪ್ರಕ್ರಿಯೆ ಮುಂತಾದವುಗಳು ದೇಶದಲ್ಲಿ ತಲೆಯೆತ್ತುತ್ತಿರುವ ಕುರಿತು ಹೆಣೆದ ನಾಟಕವಿದು. ಮತಾಂತರ ಮಾಡುವುದರಿಂದ ಜಾತಿಯಲ್ಲಿ ಒಂದು ಸಂಖ್ಯೆ

ಹೆಚ್ಚಾಯಿತೇ ವಿನಃ ಧರ್ಮಾಭಿಮಾನ ಉಳಿಯಲಾರದು ಎಂಬ ಸಂದೇಶ ಇದರಲ್ಲಿದೆ.

೧೧) **ನನ್ನ ಗಂಡನ ಹೆಂಡತಿ:** ಅರಿಶಿನಗೋಡಿ ಕಂಪನಿಗಾಗಿ ಬರೆದ ನಾಟಕವಿದು. ಅನಕ್ಷರತೆ, ಬಾಲ್ಯವಿವಾಹಗಳಿಂದ ಆಗುವ ದುಶ್ಃಪರಿಣಾಮಗಳ ಕುರಿತು ಸಂದೇಶ ಬಿತ್ತರಣೆವುಳ್ಳ ನಾಟಕ. ಅಕ್ಕನಿಗೋಸ್ಕರ ಕಣ್ಣು ದಾನ ಮಾಡುವ ತಂಗಿಯ ತ್ಯಾಗಮಯ ವಸ್ತುವನ್ನೊಳಗೊಂಡ ಸುಂದರ ರಚನೆ.

೧೨) **ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ:** ವರದಕ್ಷಣೆ ಬೇಡುವ ತಂದೆ, ಅದಿಲ್ಲದೇ ಮದುವೆಯಾಗುವ ಮಗ ವಿನೋದ. ಸೊಸೆ ಶಾಂತಲಾಳಿಗೆ ಮಾವನಿಂದ ಪೀಡನೆ, ನಾಯಕಿಯ ಅಣ್ಣ ಪ್ರಮೋದನಿಂದ ಅವಳ ಮಾವನಿಗೆ ತಕ್ಕ ಪಾಠ.

೧೩) **ಎದ್ದೇಳು ಭಾರತೀಯ:** ಕಾರ್ಗಿಲ್ ಯುದ್ಧದ ನೆನಪಿನಲ್ಲಿ ಬರೆದ ಹೃದಯ ಮಿಡಿಯುವ ನಾಟಕ. ದಿಲೀಪ್, ಸಲೀಂ, ಮಧುಮತಿ ಪ್ರಮುಖ ಪಾತ್ರಧಾರಿಗಳು. ಅಬ್ದುಲ್ ಹಮೀದ ಎಂಬ ಸೈನಿಕ ವೈರಿಗಳ ಗುಂಡಿಗೆ ಎದೆಯೊಡ್ಡಿ ಸಾಯುವ ದೃಶ್ಯವುಳ್ಳ ದುರಂತ ನಾಟಕ.

೧೪) **ಕರ್ಮದ ಕಣ್ಣಿಗೆ ಧರ್ಮದ ಹೆಣ್ಣು:** ದೈವ ಆಟದ ಮುಂದೆ ನಮ್ಮ ಆಟ ಏನೂ ಸಾಗದು ಎಂದು ಸಾರುವ ದುರಂತ ಕಥಾನಕವುಳ್ಳ ಸಾಮಾಜಿಕ ನಾಟಕ. ಇದು ಚಿತ್ತರಗಿ ಕಂಪನಿಗಾಗಿ ಬರೆದ ನಾಟಕ.

೧೫) **ತಾಯಿಯ ಗುಣ ಹಾಲಿನ ಋಣ:** ಅಣ್ಣ ಶ್ರೀಮಂತನಾದರೂ ಬಹಳ ಒಳ್ಳೆಯವ, ತಮ್ಮನೂ ಶ್ರೀಮಂತನಾದರೂ ಬಹಳ ಕೆಟ್ಟವ. ಇಬ್ಬರೂ ಸೇಡಿಗೆ ಬೀಳುವ ಕಥೆ ಇಲ್ಲಿದೆ.

೧೬) ನಲ್ಲ ತಪ್ಪು ನನ್ನದಲ್ಲ: ಹೆಂಡತಿಯ ಸಣ್ಣ ಸಣ್ಣ ತಪ್ಪುಗಳನ್ನು ಗುರುತಿಸುತ್ತ ಸುಖ ಸಂಸಾರಕ್ಕೆ ವಿಘ್ನ ತಂದುಕೊಳ್ಳುವ ಗಂಡನೊಬ್ಬನ ಕಥೆಯುಳ್ಳ ನಾಟಕ.

೧೭) **ನರಗುಂದ ಬಾಬಾಸಾಹೇಬ:** ಇದು ದೂರದರ್ಶನಕ್ಕಾಗಿ ಬರೆದ ಸ್ವಾತಂತ್ರ ಹೋರಾಟಗಾರ, ದೇಶಪ್ರೇಮಿ ನರಗುಂದದ ಬಾಬಾಸಾಹೇಬರ ಕುರಿತಾಗಿ ಬರೆದ ಐತಿಹಾಸಿಕ ನಾಟಕ.

೧೮) **ಶ್ರೀ ಶಂಕರಲಿಂಗ ಮಹಾತ್ಮೆ:** ಗುಲಬರ್ಗಾ ಜಿಲ್ಲೆ ಅಫ್ಜಲಪುರ ತಾಲೂಕಿನ ಭೀಮಾ ತೀರದ ಉಡಚಣದ ಖ್ಯಾತ ಶರಣರ ಕುರಿತಾಗಿ ಬರೆದ ಭಕ್ತಿಪ್ರಧಾನ ನಾಟಕವಿದು. ಉಡಚಣದ ಮಠದಡಿ ನಡೆಯುತ್ತಿರುವ ಕಾಲೇಜಿನ ಶಿಕ್ಷಕರು ಈ ನಾಟಕವನ್ನು ಆಡಿದುದು ವಿಶೇಷ.

೧೯) **ಕೂಗಿ ಹೇಳಿದರೂ ತೂಗಿ ನೋಡು:** ತನ್ನ ಗಂಡ ಮೂಗನಿದ್ದಾನೆಂದು ಪ್ರಥಮ ರಾತ್ರಿಯಂದು ಪತ್ನಿಗೆ ಗೊತ್ತಾಗುತ್ತದೆ. ಇವರಿಬ್ಬರ ಮದುವೆಯ ದಿನ ಪತ್ನಿಯ ಗೆಳತಿಯೊಬ್ಬಳು ಪಾಟಿ ಪೆನ್ಸಿಲನ್ನು ಕಾಣಿಕೆಯಾಗಿ ನೀಡುರುತ್ತಾಳೆ. ಅದು ಏಕೆ ಕೊಡಮಾಡಿದೆ ಎಂಬ ರಹಸ್ಯ ಆಗ ಗೊತ್ತಾಗುತ್ತದೆ. ತನ್ನ ಹೆಂಡತಿ ಗರ್ಭಿಣಿ ಎಂದು ಕೋಪಿಸಿಕೊಂಡ ಮೂಗ ಗಂಡನಿಗೆ ಮಾತು ಬರುತ್ತದೆ. ಕುಟುಂಬ ಯೋಜನೆಯ ಪ್ರಚಾರ ಮಾಡುವ ನಾಟಕವಿದು.

೨೦) **ತೂಕ ತಪ್ಪಿತು ಲೋಕ ನಕ್ಕಿತು:** ಕಡಪಟ್ಟಿ ಕಂಪನಿಗಾಗಿ ಬರೆದ ನಾಟಕವಿದು. ಮನುಷ್ಯನಿಗೆ ಬಡತನ ಬಂದ ನಂತರ ಶ್ರೀಮಂತಿಕೆ ಬರಬೇಕು, ಶ್ರೀಮಂತಿಕೆ ಬಂದು ಬಡತನ ಬರಬಾರದು. ಒಂದು ಸಾರಿಗೆ ಸಮತೋಲನ ತಪ್ಪಿದರೆ ಲೋಕ ನಗುತ್ತದೆ ಎಂಬ ಸಂದೇಶ ನೀಡುವ ಮಾರ್ಮಿಕ ನಾಟಕ.

೨೧) **ಶ್ರೀ ಯಲ್ಲಾಲಿಂಗೇಶ್ವರ ಮಹಾತ್ಮೆ:** ಬೆಳಗಾವಿ ಜಿಲ್ಲೆ ಮುಗಳಖೋಡದ ವಾಕ್‌ಸಿದ್ಧಿ ಪುರುಷರಾದ ಶ್ರೀ ಯಲ್ಲಾಲಿಂಗೇಶ್ವರರ ಮಹಿಮೆ ಕುರಿತು ಬರೆದ ನಾಟಕ. ಮಹಿಮೆಗಳಿಂದ ಪ್ರೇರಿತರಾಗಿ ಸಾಹಿತ್ಯದ ಮೆರುಗು ತುಂಬಿ ಸಿದ್ಧಪಡಿಸಿದ ಉತ್ತಮ ನಾಟಕಗಳಲ್ಲೊಂದು.

೨೨) **ನಿಮ್ಮಂಥವರಿಗೆ ನಮ್ಮಂಥವರೇ ಬೇಕು:** ಬಡವ ಶ್ರೀಮಂತರ ನಡುವಿನ ಭೇದ-ಭಾವ ಮತ್ತು ಶೋಷಣೆಗಳ ಕುರಿತು ವಿವರಿಸುವ ಸಾಮಾಜಿಕ ನಾಟಕ.

೨೩) **ಧರ್ಮಾತ್ಮ ನೀನೇ ಪರಮಾತ್ಮ ನೀನೇ:** ಅನ್ಯಾಯದ ವಿರುದ್ಧ ಬಂಡೆದ್ದು ಬಡವರಿಗೆ ನ್ಯಾಯ ಒದಗಿಸಿಕೊಡುವ ಯುವಕನೊರ್ವನ ಕಥೆಯುಳ್ಳ ನಾಟಕ.

೨೪) **ಗೆಜ್ಜೆ ಕಟ್ಟಿದರೂ ಲಜ್ಜೆ ಬಿಟ್ಟಿಲ್ಲ:** ಸಾಹುಕಾರನೊಬ್ಬನು ಪರಸ್ತ್ರೀಯೊಡನೆ ಸಂಬಂಧವನ್ನಿಟ್ಟುಕೊಂಡಿರುವ ಮತ್ತು ಆ ಸಾಹುಕಾರನ ಮಗನಿಗೆ ಅಪಘಾತವಾದಾಗ ಆ ಪರಸ್ತ್ರೀಯ ರಕ್ತ ಕೊಡಬೇಕಾಗಿ ಬಂದ ಪ್ರಸಂಗ ವನ್ನು ವಿವರಿಸುವ ನಾಟಕ. ಪ್ರೇಕ್ಷಕರು ಹುಚ್ಚೆದ್ದು ಕುಣಿಯುವ ಡೈಲಾಗ್‌ಗಳಿರುವುದು ಈ ನಾಟಕದ ವಿಶೇಷ.

೨೫) **ಗೌರಿ ಹೋದಳು ಗಂಗೆ ಬಂದಳು:** ಕೆರೆಗೆ ಹಾರ ಎಂಬ ಜಾನಪದ ಕಥೆಯನ್ನೊಳಗೊಂಡ ನಾಟಕ. ಭಾಗೀರತಿಯು ಮಾವ ಮಲ್ಲನಗೌಡನ ಅಣತಿಯಂತೆ ಕೆರೆಗೆ ಹಾರವಾಗುವ ಮನಮಿಡಿಯುವ ತ್ಯಾಗದ ಕಥೆವುಳ್ಳ ನಾಟಕ.

೨೬) **ಪಾಪದ ದೇಹ ಪುಣ್ಯದ ಜೀವ:** ಕಣ್ಣಿಗೆ ಕಂಡ ಹೆಣ್ಣನ್ನು ಮುಗಿಸಿಬಿಡುವ ಜಮೀನ್ದಾರನ ಜೊತೆಗೆ ನಾಯಕನೊರ್ವನ ಹೋರಾಟ ಮತ್ತು ಕ್ರೌರವನ್ನು ದಮನಗೊಳಿಸುವ ವಸ್ತುವುಳ್ಳ ನಾಟಕ.

೨೭) **ನೀ ಕೇಳ್ತಿನಂದ್ರ ನಾ ಹೇಳ್ತೀನಿ:** ಮತ್ತೊಬ್ಬರ ಮಾತು ಕೇಳಿ ಹಾಳಾದವರ ನಿದರ್ಶನಗಳನ್ನು ನೀಡುತ್ತ ರಚಿಸಿದ ವಿಡಂಬನಾತ್ಮಕ ನಾಟಕ.

೨೮) **ಮಾಡಿದ ಕೃತಿಗೆ ಮನವೇ ಸಾಕ್ಷಿ:** ಸುಳ್ಳು, ಮೋಸ, ಅನ್ಯಾಯಗಳಿಗೆ ನಮ್ಮ ಆತ್ಮ ಒಪ್ಪದು ಎಂದು ಸಾರುವ ನಾಟಕ.

೨೯) **ಗರಗದ ಮಡಿವಾಳೇಶ್ವರ ಮಹಾತ್ಮೆ:** ಕಿತ್ತೂರು ಸಂಸ್ಥಾನಿಕರ ಗುರುಗಳಾಗಿದ್ದ ಗರಗದ ಮಹಾತ್ಮೆ ಸಾರುವ ಐತಿಹಾಸಿಕ ಹಿನ್ನಲೆವುಳ್ಳ ಭಕ್ತಿಪ್ರದಾನ ನಾಟಕ.

೩೦) **ಜಾತ್ರೆಗೆ ಬಂದ ಯಾತ್ರಿಕ:** ಮನುಜನ ಬದುಕನ್ನು ಜಾತ್ರೆ ಸಮೀಕರಿಸಿ ಬರೆದದ್ದು. ಸಂತೆ ಮುಗಿದರೂ ಚಿಂತೆ ಮುಗಿಯಲಿಲ್ಲ ಎಂಬ ನಾಣ್ಣುಡಿ ಅಂತ್ಯದಲ್ಲಿ ವಿಧಿತವಾಗುತ್ತದೆ.

೩೧) **ಕಷ್ಟಕ್ಕೆ ಕರೀಬೇಡ ಊಟಕ್ಕೆ ಮರೀಬೇಡ:** ಸಮಾಜದಲ್ಲಿರುವ ಬಗೆಬಗೆಯ ಸ್ವಾರ್ಥಿಗಳ ಚಿತ್ರ ವಿಚಿತ್ರ ಪ್ರಪಂಚದ ಕುರಿತು ವಿವರಿಸುವ ಕಥೆ ಇದರಲ್ಲಿದೆ.

೩೨) **ಕೂಲಿ ಕೊಟ್ಟಾಗ ತಾಳಿ ಕಟ್ಟು:** ವರದಕ್ಷಿಣೆಯ ಹಾವಳಿಗಳನ್ನು ತಿಳಿಸಿಕೊಡುವ ಪ್ರಯತ್ನ ಇಲ್ಲಿ ಮೂಡಿದೆ.

೩೩) **ಮಾನವಂತ:** ಎಷ್ಟೇ ಕಷ್ಟ ಬಂದರೂ ಸಹಿಸಿಕೊಂಡು ಬದುಕಿದ ಮಾನವಂತ ನೊಬ್ಬನ ಕಥೆ.

೩೪) **ಕಳ್ಳನಿಗೆ ಸುಳ್ಳನೇ ಸಾಕ್ಷಿ:** ಕಳ್ಳರ ಮತ್ತು ಸುಳ್ಳರ ಪ್ರಪಂಚ ಹೀಗಿರುತ್ತದೆ ಎಂದು ತಿಳಿಯಪಡಿಸುವ ಪ್ರಯತ್ನ ಇದರಲ್ಲಿದೆ.

೩೫) **ಹಗ್ಗ ಹರಿಯಲಿಲ್ಲ ಕೋಲು ಮುರಿಯಲಿಲ್ಲ:** ಸಮಸ್ಯೆಯೊಂದು ಬಗೆ ಹರಿಯದೇ ಸಮಸ್ಯೆಯಾಗಿಯೇ ಉಳಿದುಬಿಡುವ ಮಾರ್ಮಿಕ ಕಥೆವುಳ್ಳ ನಾಟಕ.

೩೬) **ಬಂಗಾರ ಬಟ್ಟಿಲ ಬೆಳ್ಳಿ ತೊಟ್ಟಿಲ:** ಆಗರ್ಭ ಶ್ರೀಮಂತರ ಮನೆಯು ಕಾಲದ ಹೊಡೆತದಿಂದ ಬಡತನಕ್ಕೀಡಾಗಿ ಕೊನೆಯವರೆಗೂ ಸತ್ಯಕ್ಕಾಗಿ ಸಾಯುವ ದುಃಖಾಂತ್ಯ ನಾಟಕ.

೩೭) **ತಾನು ಮಾಡಿದ್ದು ತನಗೆ:** ನಮ್ಮ ಕರ್ಮಗಳು ನಮ್ಮ ಪೀಳಿಗೆಗೂ ತಟ್ಟದೇ ಹೋಗವು ಎಂದು ತಿಳಿಸುವ ಪ್ರಯತ್ನ ಇಲ್ಲಿದೆ.

೩೮) **ಹಗಲು ಚುಕ್ಕಿ ಮುಗಿಲ ಬಣ್ಣ:** ಹುಡುಗಿಯೊಬ್ಬಳ ಅಂತರಾಳ, ಮನೋಭಾವ ಗಳನ್ನು ತಿಳಿಯದೇ ಪೇಚಿಗಿಟ್ಟುಕೊಳ್ಳುವ ಹುಡುಗನೊಬ್ಬನ ಕಥೆ.

೩೯) **ಅತ್ತು ನಕ್ಕರೆ ಬಾಳು ಸಕ್ಕರೆ:** ಕಷ್ಟ ಬಂದು ಸುಖ ಬರಬೇಕು ಎಂದು ತಿರುವುಮುರುವಾಗಬಾರದು ಎಂದು ಸಾರುವ ನಾಟಕ.

೪೦) **ಜೋಜೋ ಕಂದಾ ಜೋಜೋ:** ಮಕ್ಕಳ ಮೇಲೆ ಅತೀ ಮಮತೆ ಹೊಂದಿದ ತಾಯಿಯೊಬ್ಬಳ ಕಥೆಯನ್ನೊಡಗೂಡಿದ ನಾಟಕ.

೪೧) **ತಾಳಬೇಕು ಬಾಳಬೇಕು:** ಸಂಸಾರಿಕರಾದಾಗ ಸಹನೆಯು ಅವಶ್ಯಕ ಎಂದು ಬೋಧಿಸುವ ನಾಟಕ.

೪೨) **ಅದೊಂದು ಕೇಳಬೇಡ:** ಕುಡುಕ ಮತ್ತು ಕುಡಿಯದೇ ಇರುವ ವ್ಯಕ್ತಿಗಳ ಮಧ್ಯದ ನಗೆಸಂಭಾಷಣೆ ಇರುವ ನಾಟಕ.

೪೩) **ನಕ್ಕಿದ್ದೆಲ್ಲ ಲೆಕ್ಕಕ್ಕೆ ಬಂತು:** ಒಳ್ಳೆಯದಕ್ಕಾಗಿ ಒಬ್ಬನಿಗೆ ಸುಳ್ಳು ಹೇಳಿ ನಂಬಿಸಿ ನಗಿಸಿರುತ್ತಾನೆ ಅದರೆ ಪರಿಣಾಮವು ಹೇಳಿದಂತೆಯೇ ಅವನ ಜೀವನದಲ್ಲಿ ಆಗಿರುತ್ತದೆ.

೪೪) **ಇಲ್ಲೇ ಇದ್ದಳು ಎಲ್ಲಿ ಹೋದಳು?:** ಪತ್ತೇದಾರಿ ಎಳೆಗಳನ್ನು ಹೊಂದಿದ ಸಾಮಾಜಿಕ ನಾಟಕ.

೪೫) **ಅದು ಹಂಗ ಇದು ಹಿಂಗ:** ತಂದೆ ಮಗ, ತಂದೆ ಮಗಳು ಪರಸ್ಪರ ತಿಕ್ಕಾಟ ಮಾಡುವ ಕಥೆವುಳ್ಳ ನಾಟಕ.

೪೬) **ದೈವಕ್ಕಿಂತ ದೇವರೇ ದೊಡ್ಡವನು:** ದೇವರು ಸೃಷ್ಠಿ ಮಾಡಿದ ನಂತರ ದೈವ ಎಂದು ಸಾರುವ ನಾಟಕ.

೪೭) **ಸುರಪುರದ ವೆಂಕಟಪ್ಪ ನಾಯಕ:** ದೂರದರ್ಶನಕ್ಕಾಗಿ ಬರೆದುಕೊಟ್ಟ ೪೫ ನಿಮಿಷದ ನಾಟಕ.

೪೮) **ಅಶ್ವಮೇಧ:** ಮಹಾಭಾರತದ ಅಶ್ವಮೇಧದ ಪ್ರಸಂಗವನ್ನಿಟ್ಟುಕೊಂಡು ದೂರದರ್ಶನಕ್ಕಾಗಿ ಬರೆದ ೪೫ ನಿಮಿಷದ ನಾಟಕ.

೪೯) **ಡಾ॥ ರಮಣ BSH:** ದೂರದರ್ಶನಕ್ಕಾಗಿ ಬರೆದ ಹಾಸ್ಯ ನಾಟಕ.

೫೦) **ಇಲ್ಲಿ ಸುಮ್ಮನೆ ಅಲ್ಲಿ ನಮ್ಮನೆ:** ದೈವ ಬಿಟ್ಟು ಬೇರೇನು ಇಲ್ಲ, ನಾವೇನು ಮಾಡಿದರೂ ವ್ಯರ್ಥ ಎಂದು ಸಾರುವ ನಾಟಕ.

೫೧) **ಮಿನುಗುತಾರೆ:** ಚಿತ್ರನಟಿ ದಿ॥ ಕಲ್ಪನಾಳ ಕುರಿತಾಗಿ ಬರೆಯುತ್ತಿರುವ ಏಕಪಾತ್ರಾಭಿನಯದ ನಾಟಕವಿದು

# ಶ್ರೀ ಎಸ್. ಎಮ್. ಖೇಡಗಿಯವರ ಕುರಿತು ಪತ್ರಿಕೆಗಳಲ್ಲಿ ಮೂಡಿಬಂದ ಲೇಖನಗಳು

## "ಪ್ರಸಿದ್ಧ ಕವಿ ಖೇಡಗಿಗೆ ಅರ್ಥಪೂರ್ಣ ಗೌರವ"

ಮೂರು ದಶಕಗಳ ಕಾಲ ಕಂಪನಿ ನಾಟಕದ ನಟ–ನಾಟಕಕಾರರಾಗಿ ಮೆರೆದ ಕವಿ ಎಸ್. ಎಮ್. ಖೇಡಗಿಯವರ(ಕಂಪನಿ ನಾಟಕದ ಪರಿಭಾಷೆಯಲ್ಲಿ ನಾಟಕಕಾರರನ್ನು ಕವಿ ಎಂದು ಕರೆಯಲಾಗುತ್ತದೆ) ನಾಟಕಗಳ ಪ್ರದರ್ಶನ, ಸನ್ಮಾನ, ವಿಚಾರ ಸಂಕಿರಣದಂತಹ ಮೂರು ದಿನಗಳ ಕಾಲದ ಅಪರೂಪದ ಉತ್ಸವ ಇದೇ ಏಪ್ರಿಲ್ ೯, ೧೦ ಮತ್ತು ೧೧ ರಂದು ವಿಜಾಪುರದ ಕಂದಗಲ್ಲ ಹಣಮಂತರಾವ್ ರಂಗಮಂದಿರದಲ್ಲಿ ನಡೆಯಿತು. ನಟನಾಗಿ ಕಂಪನಿ ಪ್ರವೇಶಿಸಿದ ಖೇಡಗಿ ಅವೇ ನಾಟಕ ಕಂಪನಿಗಳಿಗೆ ನಾಟಕ ರಚಿಸಿ–ನಿರ್ದೇಶಿಸುತ್ತ ರಂಗಭೂಮಿಗೆ ತಮ್ಮನ್ನು ಸಮರ್ಪಿಸಿಕೊಂಡವರು. ೨೫ಕ್ಕೂ ಹೆಚ್ಚು ನಾಟಕ ಕಂಪನಿಗಳು ಇವರ ನಾಟಕಗಳನ್ನು ಅಭಿನಯಿಸಿವೆ. ೩೫ನಾಟಕಗಳನ್ನು ರಚಿಸಿದ್ದರೂ ಅಚ್ಚಾಗಿರುವುದು ೭ ನಾಟಕಗಳು ಮಾತ್ರ. ಹಾಗಾಗಿ ಹಳ್ಳಿಗಾಡಿನ ಹವ್ಯಾಸಿಗಳಿಗೆ ಖೇಡಗಿ ನಾಟಕಗಳು ಎಟುಕಿದ್ದು ಕಡಿಮೆ. ಕಂಪನಿಗಳಲ್ಲೇ ಹೆಚ್ಚಾಗಿ ಪ್ರಯೋಗ ಕಂಡಿವೆ. ಯಶಸ್ವಿ ಸಾಮಾಜಿಕ ನಾಟಕಗಳನ್ನು ರಚಿಸಿ ನಾಲ್ಕೈದು ದಶಕಗಳ ಕಾಲ ಕಂಪನಿ ನಾಟಕಗಳ ವೈಭವಕ್ಕೆ ಮೆರಗು ತಂದ ನಾಟಕಕಾರರ ಪೈಕಿ ಎರಡನೇ ಪೀಳಿಗೆಗೆ ಸೇರಿದವರು ಖೇಡಗಿ. 'ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ'. 'ತಾಯಿಯ ಗುಣ ಹಾಲಿನ ರುಣ' 'ಕರ್ಮದ ಕಣ್ಣಿಗೆ ಧರ್ಮದ ಹೆಣ್ಣು', 'ಗೆಜ್ಜೆ ಕಟ್ಟಿದರೂ ಲಜ್ಜೆಬಿಟ್ಟಿಲ್ಲ'– ಇವರ ನಾಟಕಗಳ ಸ್ಯಾಂಪಲ್‌ಗಳು. ಸಾಂಪ್ರದಾಯಿಕ ಚೌಕಟ್ಟಿನೊಳಗೆ ಸಮಾಜ ಸುಧಾರಣೆಯನ್ನು ಪ್ರತಿಪಾದಿಸುವುದು ಇವರ ನಾಟಕಗಳ ವಸ್ತು. ವಿಮರ್ಶಾಕ್ಷೇತ್ರ ಇಂತಹವರನ್ನು ಕಡೆಗಣಿಸಿದಾಗ, ಸಿಜಿಕೆಯಂತಹವರು ರಾಜ್ಯ ಪ್ರಶಸ್ತಿ ಕೊಡಿಸುವ ಮೂಲಕ ಇವರತ್ತ ಗಮನ ಸೆಳೆಯುವಂತೆ ಮಾಡಿದರು. ಮುಂದುವರಿಕೆಯಾಗಿ ನಾಟಕ ಅಕಾಡೆಮಿ ಸದಸ್ಯ ಚನ್ನವೀರ ಝುಳಕಿ ಅವರು ವಿಜಾಪುರದಲ್ಲಿ ಅಭಿನಂದನಾ ಸಮಿತಿಯೊಂದನ್ನು ರಚಿಸಿ ನಾಟಕ ಅಕಾಡೆಮಿ ಸಹಕಾರದೊಂದಿಗೆ ಮೂರು ದಿನಗಳ ಈ ಉತ್ಸವವನ್ನು ಯೋಜಿಸಿದರು.

ಶರಣಪ್ಪ ಕಂಚ್ಯಾಣಿ, ಅರ್. ಎಮ್. ಮ್ಯಾಗಿ, ಡಾ. ಎಂ. ಎನ್. ವಾಲಿ, ಕುಲಕರ್ಣಿ ಮುಂ. ಸಹಕರಿಸಿದರು. ಖೇಡಗಿಯವರ ಮೂರು ನಾಟಕಗಳು ಇಲ್ಲಿ ಪ್ರದರ್ಶನ ಕಂಡವು. ಇಂಡಿಯಲ್ಲಿ ಕ್ಯಾಂಪ್ ಮಾಡಿರುವ ಶೇಖ್ ಮಾಸ್ತರ್ ಅವರ ನಾಟಕ ಕಂಪನಿ 'ಗೌರಿ ಹೋದಳು ಗಂಗೆ ಬಂದಳು' ನಾಟಕವನ್ನು ಪ್ರದರ್ಶಿಸಿತು. ಜಾನಪದ ರೂಪಕವನ್ನಾಧರಿಸಿ ಕಂಪನಿ ಶೈಲಿಯಲ್ಲಿ ಖೇಡಗಿ ರಚಿಸಿರುವ ಈ ಜನಪ್ರಿಯ ನಾಟಕವನ್ನು ಬಹಳಷ್ಟು ಕಂಪನಿಗಳು ಪ್ರದರ್ಶಿಸಿವೆ, ಶ್ರೀಧರ ಹೆಗಡೆ, ರಾಜಮ್ಮ, ಭಾರತಿ, ಸಿದ್ದು ನಾಲತವಾಡ ಅವರು ಪರಿಣತ ಅಭಿನಯ ನೀಡಿದರು. ವಿಜಾಪುರದ ವೃತ್ತಿ ಕಲಾವಿದರ ಸಂಘವು ಖೇಡಗಿ ಅವರದೇ ನಿರ್ದೇಶನದಲ್ಲಿ 'ನನ್ನ ಗಂಡನ ಹೆಂಡತಿ' ನಾಟಕ ಪ್ರದರ್ಶಿಸಿತು. ಇಲಕಲ್ಲಿನ ರಂಗಭೂಮಿ ಕಲಾವಿದರ ಸಂಘವು ಶಂಕರಪ್ಪ ಪುಟ್ಟಿ ನೇತೃತ್ವದಲ್ಲಿ ಮತ್ತೊಂದು ಪ್ರಸಿದ್ಧ ನಾಟಕ 'ಮಾತು ಅಂಗಾರ, ಮೌನ ಬಂಗಾರ' ಪ್ರದರ್ಶಿಸಿತು. ಸಮಾರಂಭವನ್ನು ಕಳೆಗಟ್ಟಿಸಿದ ಮತ್ತೊಂದು ಅಂಶವೆಂದರೆ ನೂರು ಜನ ಪೇಟಿ ಮಾಸ್ತರರನ್ನು ಸನ್ಮಾನಿಸಿದ್ದು. ಪೇಟಿ ಮಾಸ್ತರರೆಂದರೆ ಹಾರ್ಮೋನಿಯಂ ನುಡಿಸುತ್ತ ಸಂಗೀತ ಮತ್ತು ನಾಟಕ ನಿರ್ದೇಶಿಸುವ ಇಡೀ ನಾಟಕದ ಸೂತ್ರಧಾರರು. ಹಳ್ಳಿಗಾಡಿನ ನಾಟಕಗಳ ಜೀವಾಳ ಇವರು. ಜಂಪಣ್ಣ ವಂದಿಗನೂರು, ಮದಿರಿ ಮರಿಸ್ವಾಮಿ, ಬಸವರಾಜಗೌಡ ಭೂತಲದಿನ್ನಿ, ದೇವಪ್ಪ ಮಾಸ್ತರ್, ಹುಸೇನ್‌ಸಾಬ್ ಮನ್ನಾಪುರ, ಚಿದಾನಂದಪ್ಪ ಸಪ್ಪಂಡಿ ಸೇರಿದಂತೆ ಪ್ರಖ್ಯಾತ ಪೇಟಿ ಮಾಸ್ತರರು ಸನ್ಮಾನಕ್ಕೆ ಒಳಗಾದರು. ಬರಿಗೈಯಿಂದ ರಂಗಪ್ರವೇಶ ಮಾಡಿ ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದರೂ ಖೇಡಗಿ ಅಂತಹವರು ನಿವೃತ್ತಿ ಅಂಚಿನಲ್ಲೂ ಬರಿಗೈಲೇ ನಿಂತವರು. ಉತ್ಸವದ ಜತೆಗೆ ನಿಧಿ ಅರ್ಪಿಸುವ ಕಾರ್ಯಕ್ರಮ ಸಾಧ್ಯವಾಗಿದ್ದರೆ ಮತ್ತಷ್ಟು ಸಾರ್ಥಕವಾಗುತ್ತಿತ್ತು.

ಗುಡಿಹಳ್ಳಿ ನಾಗರಾಜ

(ಪ್ರಜಾವಾಣಿ-ಕರ್ನಾಟಕ ದರ್ಶನ - ೨೪-೪-೨೦೦೧)

* * * *

## "ವೃತ್ತಿ ರಂಗಭೂಮಿಯನ್ನು ಶ್ರೀಮಂತಗೊಳಿಸಿದ ನಾಟಕಕಾರ ಖೇಡಗಿ"

ಹಳೆಯ ಜಾಡನ್ನು ಬಿಟ್ಟು ಹೊಸ ಜಾಡಿನಲ್ಲಿ ಶ್ರೇಷ್ಟ ನಾಟಕಗಳನ್ನು

ಸೃಷ್ಟಿಸಿ ಕನ್ನಡ ವೃತ್ತಿರಂಗಭೂಮಿಗೆ ಹೊಸ ಆಯಾಮ ತಂದುಕೊಟ್ಟ ಪ್ರಸಿದ್ಧ ನಾಟಕಕಾರ ಎಸ್. ಎಂ. ಖೇಡಗಿ ಅವರ ನಾಟಕಗಳೆಲ್ಲವನ್ನು ಕಲಾಭಿಮಾನಿಗಳು, ಕಲಾವಿಮರ್ಶಕರು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ರಂಜನೆ ಮತ್ತು ಸಂದೇಶ ಇವರ ಬರವಣಿಗೆಯ ಉದ್ದೇಶವಾದ್ದರಿಂದ ಎಲ್ಲ ನಾಟಕಗಳೂ ಜನಸಾಮಾನ್ಯರನ್ನು ತಲುಪಿವೆ. ಆಧುನಿಕ ಸಮಾಜದ ಆಡಂಬರವನ್ನು ಹರಿತ ಸಂಭಾಷಣೆಯಿಂದ ಇರಿಕುವ ಇವರ ನಾಟಕ ಶೈಲಿ ಜನಪ್ರಿಯವಾಗಿದೆ. ಕಲೆಯು ಎಲ್ಲರನ್ನು ಕೈಬೀಸಿ ಕರೆಯುತ್ತದೆ. ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎನ್ನುವ ಮಾತಿನಂತೆ ಕಲೆ ಆರಿಸಿಕೊಂಡ ಕೆಲವೇ ಕಲಾವಿದರಲ್ಲಿ ಎಸ್. ಎಮ್. ಖೇಡಗಿಯವರು ಪ್ರಬುದ್ಧ ಕಲಾವಿದರು, ವರ್ತಮಾನದ ಘಟನೆಗಳಿಗೆ ಸ್ಪಂದಿಸುತ್ತಲೇ ಬದಲಾದ ಕಾಲಸನಿವೇಶಗಳಿಗೆ ಹೊಸ ಅರ್ಥಗಳನ್ನು ಕೊಟ್ಟ ಶ್ರೇಷ್ಠ ನಟ ನಿರ್ದೇಶಕ ನಾಟಕಕಾರರು.

## ಹೊಸ ಪರಂಪರೆಯ ಸೃಷ್ಟಿ

ಪ್ರಥಮ ಪ್ರಯತ್ನದಲ್ಲೇ ಯಶಸ್ಸಿನ ಮೆಟ್ಟಲೇರಿದ ಅಪರೂಪದ ಈ ಪ್ರತಿಭಾನ್ವಿತರಿಗೆ ವರನಟ ಡಾ. ರಾಜಕುಮಾರ ಸೇರಿದಂತೆ ನಾಡಿನ ಸಂಘ ಸಂಸ್ಥೆಗಳು, ಅಭಿಮಾನಿ ವೃಂದಗಳು ಮೆಚ್ಚಿ ಸಾರ್ವಜನಿಕವಾಗಿ ಗೌರವಿಸಿ ಬಿರುದು ಪ್ರಶಸ್ತಿ ಪತ್ರಗಳ ಸರಮಾಲೆಯನ್ನು ತೊಡಿಸಿ, ಪ್ರೋತ್ಸಾಹಿಸಿವೆ. ೧೯೯೪ರಲ್ಲಿ ಲಭಿಸಿದ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ೨೦೦೦ದ ರಾಜ್ಯೋತ್ಸವ ಪ್ರಶಸ್ತಿಗಳ ಗೌರವವಂತೂ ಇವರ ರಂಗಸೇವೆಯ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚುವಂತೆ ಮಾಡಿದೆ. ೧೯-೧-೧೯೪೪ರಲ್ಲಿ ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ "ಖೇಡಗಿ ಗ್ರಾಮದಲ್ಲಿ ಜನಿಸಿದ ಶೇಖ ಮೊಹಿದ್ದೀನ ಖೇಡಗಿ ಅವರಿಗೆ ರಂಗಭೂಮಿಯಲ್ಲಿ ತೊಡಗಬೇಕು, ಹೊಸ ಹೊಸ ಸಾಹಸ, ಹೊಸ ಪ್ರಯೋಗಗಳನ್ನು ಮಾಡಬೇಕೆಂಬ ತುಡಿತ ಬಾಲ್ಯದಿಂದಲೇ ಬಂದ ಬಳುವಳಿ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ನಾಟಕ ಬರವಣಿಗೆ, ಅಭಿನಯಗಳೆಂದರೆ ಮೊದಲ ಒಲವು. ಪ್ರೌಢ ಶಿಕ್ಷಣ ಮುಗಿಸುವ ವೇಳೆಗೆ ಪ್ರಸಿದ್ಧ ನಾಟಕಕಾರರ ಹಲವಾರು ನಾಟಕಗಳನ್ನು ನೋಡಿ ನಟರು ಹಾಗೂ ನಿರ್ದೇಶಕರುಗಳೊಂದಿಗೆ ಬೆರೆತು ತಮ್ಮ ಅನುಭವವನ್ನು ಹೆಚ್ಚಿಸಿಕೊಂಡರು. ಇವರ ಕಲಾಸಕ್ತಿಗೆ ಮನೆಯ ಹಿರಿಯರೂ ನೀರೆರೆದು ಪೋಷಿಸಿದ ಕಾರಣದಿಂದಾಗಿ ಕಾಲೇಜು ಪ್ರವೇಶಕ್ಕೆ ತಿಲಾಂಜಲಿ ಇತ್ತು ರಂಗಭೂಮಿ ಪ್ರವೇಶ ಮಾಡಿ ನಾಟಕ ಬರೆವಣಿಗೆಯನ್ನೇ ತಮ್ಮ ಉದ್ಯೋಗವನ್ನಾಗಿ ಮಾಡಿಕೊಂಡವರು. ನಾಟಕ ಸಾಹಿತ್ಯದಲ್ಲಿ ತಮ್ಮದೇ

ಆದ ಒಂದು ಪರಂಪರೆಯನ್ನು ಸೃಷ್ಟಿ ಮಾಡಿದ ಖೇಡಗಿ ಅವರು ಸರಳತೆ, ಶಿಸ್ತು, ಸಜ್ಜನಿಕೆ, ಸಂಯಮ, ರಸಿಕತೆಗಳಿಗೂ ಹೆಸರು ಪಡೆದು ಸುಮಾರು ೪೦ಕ್ಕೂ ಹೆಚ್ಚು ಅರ್ಥಪೂರ್ಣ ನಾಟಕಗಳನ್ನು ರಂಗಭೂಮಿಗೆ ನೀಡಿದ್ದಾರೆ. ನಾವಿನ್ಯತೆ ತುಂಬಿದ ಪ್ರತಿ ನಾಟಕಗಳಲ್ಲೂ ತಿಳಿಯಾದ ಶೈಲಿ, ಆಡುಮಾತಿನ ಸೊಗಡನ್ನು ಸೂಸುವ ಸಹಜ ಸುಂದರವಾದ ಭಾಷೆ, ಆತ್ಮೀಯತೆ, ಮಾನವೀಯತೆಗಳು ಎದ್ದುಕಾಣುವ ಪ್ರಮುಖ ಗುಣಗಳು. ಸಮಾಜದಲ್ಲಾಗುತ್ತಿರುವ ಅನ್ಯಾಯ, ಅವಹೇಳನ, ಅತ್ಯಾಚಾರ, ಸ್ವಾರ್ಥಗಳನ್ನು ಪ್ರತಿಭಟಿಸುವದರೊಂದಿಗೆ ವಿದ್ಯಾವಂತ ನಿರುದ್ಯೋಗಿಗಳ ಬಾಳಬವಣೆಯಿಂದ ಸಮಕಾಲೀನ ಸಮಸ್ಯೆಗಳನ್ನೆತ್ತಿ ಕೊಂಡು ನಾಟಕ ರಚಿಸುವ ಕಲೆ ಇವರಿಗೆ ಸಾಧಿಸಿದ್ದರಿಂದ ಇವರ ನಾಟಕಗಳು ಎಲ್ಲ ಬಗೆಯ ಜನರನ್ನು ಮೆಚ್ಚಿಸಿ ಪ್ರೇಕ್ಷಕರ ನೆನಪಿನಲ್ಲಿ ಬಹುಕಾಲ ಉಳಿಯಬಲ್ಲವುಗಳಾಗಿವೆ. ಸತತ ಪ್ರಯೋಗಗಳನ್ನು ಕಂಡ "ಸಂಗೊಳ್ಳಿ ರಾಯಣ್ಣ", "ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ", "ಮಾತುಅಂಗಾರ ಮೌನ ಬಂಗಾರ", "ಪಾಪದ ದೇಹ ಪುಣ್ಯದ ಜೀವ", "ಗೌರಿ ಹೋದಳು ಗಂಗೆ ಬಂದಳು", "ಕೊಂದವನ್ಯಾರು", "ಶೀಲಗೆಟ್ಟ ಸಾಧ್ವಿ", "ಹೇಳಿದರೆ ಹೆತ್ತವರಾಣೆ", "ನಿಮ್ಮ ಹೆಂಡತಿ ನಾನಲ್ಲ", "ಅದು ಒಂದು ಕೇಳಬೇಡ", "ದೇವರ ಆಟ ತಿಳಿದಿಲ್ಲ", "ನನ್ನ ಗಂಡನ ಹೆಂಡತಿ", "ಅಪ್ಪನ ಗಂಡ ಅವ್ವ", "ಕೂಲಿ ಕೊಟ್ಟಾಗ ತಾಳಿ ಕಟ್ಟು", ಮೊದಲಾದ ನಾಟಕಗಳು ಇವರಿಗೆ ಅಪಾರ ಕೀರ್ತಿಯನ್ನು ಗಳಿಸಿ ಕೊಟ್ಟವು.

## ಬಹುಮುಖ ಪ್ರತಿಭೆ

"ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ", "ಶ್ರೀ ಕುಮಾರ ವಿಜಯ ನಾಟ್ಯ ಸಂಘ ಚಿತ್ತರಗಿ". "ಶ್ರೀ ಸಂಗಮೇಶ್ವರ ನಾಟ್ಯ ಸಂಘ ಪಾಶ್ಚಾಪೂರ" ಇನ್ನೂ ಹೆಸರಾಂತ ಸಂಸ್ಥೆಗಳು ಈ ನಾಟಕಗಳನ್ನು ಅಭಿನಯಿಸುತ್ತಿವೆ. ಕೆಲವು ನಾಟಕಗಳು ಟಿ.ವಿ. ಪರದೆಯ ಮೇಲೂ ಬಂದಿವೆ. ರಂಗಭೂಮಿಯಲ್ಲಿ ಇನ್ನೂ ಅನೇಕ ಹೊಸ ಹೊಸ ಪ್ರಯೋಗಗಳನ್ನು ಮಾಡಬೇಕೆಂದಿರುವ ಇವರು ರಂಗಭೂಮಿಯ ಉಚ್ಛ್ರಾಯಕ್ಕೆ ಬಹುವಾಗಿ ಶ್ರಮಿಸುತ್ತ ಸಧ್ಯ "ರಂಗಚೇತನಾ ಹವ್ಯಾಸಿ ತಂಡ ವಿಜಾಪುರ" ಇದರ ಅಧ್ಯಕ್ಷರಾಗಿಯೂ "ವೃತ್ತಿ ರಂಗಭೂಮಿ ಕಲಾವಿದರ ಸಂಘ ವಿಜಾಪುರ" ಇದರ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಬಹುಮುಖ ಪ್ರತಿಭೆಯ ಈ ಮುಸ್ಲಿಂ ಲೇಖಕರ ಮಾತೃಭಾಷೆ ಉರ್ದು

ಆದರೂ ಕನ್ನಡದ ಬಗ್ಗೆ ಗೌರವ ಅಪಾರ. ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳನ್ನು ಓದಿ ತಿಳಿದವರು. ಇವರು ಬರೆದ "ಗರಗದ ಮಡಿವಾಳೇಶ್ವರ ಮಹಾತ್ಮೆ", "ಶಂಕರಲಿಂಗ ಮಹಾತ್ಮೆ" ಮುಂತಾದ ಭಕ್ತಿ ಪ್ರಧಾನ ನಾಟಕಗಳು ಎಂಥವರಿಗಾದರೂ ಅಚ್ಚರಿ ಹುಟ್ಟಿಸಿ ಇಂಥಾ ಅಸಾಧಾರಣ ಪ್ರತಿಭೆಯನ್ನು ಜಾತಿ ಧರ್ಮದ ಕಟ್ಟುಪಾಡಿನಲ್ಲಿ ಅಳೆಯಬಾರದೆಂದೆನಿಸುತ್ತದೆ.

ಕಲೆಯ ಹಾದಿ ಹಿಡಿದವರಿಗೆ ಕಷ್ಟವೇ ಜೀವನ ಸಂಗಾತಿ ಎನ್ನುವಂತೆ ಇವರ ಜೀವನವೇನೂ ಭಿನ್ನವಾಗಿರದಿದ್ದರೂ ಸಾವಿರಾರು ಸನ್ಮಾನ, ಅದೆಷ್ಟೋ ಪಾರಿತೋಷಕಗಳನ್ನು ಗಿಟ್ಟಿಸಿಕೊಂಡ ಪ್ರಖ್ಯಾತಿಯ ಈ ಘನಕಲಾವಿದ ಇಂದು ತೀರ ಬಡತನದ ಬದುಕು ಸಾಗಿಸುತ್ತಿರುವುದು ಮಾತ್ರ ಬಹು ವಿಷಾದದ ಸಂಗತಿ. ಬರೆವಣಿಗೆಯನ್ನೇ ನಂಬಿ ಬದುಕುವುದು ಕನ್ನಡ ಲೇಖಕನಿಗೆ ಅದೆಷ್ಟು ಕಷ್ಟವಾಗಿದೆ ಎನ್ನುವುದನ್ನು ನೋಡಲು ಖೇಡಗಿ ಅವರ ಜೀವನ ಒಂದು ಉತ್ತಮ ಉದಾಹರಣೆ.

**ಸಂಗಮೇಶ. ಅರ್. ಗುರವ.**

(ಸಂಯುಕ್ತ ಕರ್ನಾಟಕ, ಸಾಪ್ತಾಹಿಕ ಸೌರಭ ೨೩–೯–೨೦೦೧)

# ಅನುಬಂಧಗಳು

## ಎಸ್. ಎಂ. ಖೇಡಗಿ ಅವರು ವೃತ್ತಿ ರಂಗಭೂಮಿಯಲ್ಲಿ ಅಭಿನಯಿಸಿದ ನಾಟಕಗಳು

| ಕ್ರ ನಂ | ನಾಟಕದ ಹೆಸರು | ಲೇಖಕರು | ಪಾತ್ರ | ನಾಟಕ ಸಂಘ |
|---|---|---|---|---|
| ೧ | ದಸರಾ | ಎಚ್. ಎನ್. ಹೂಗಾರ | ಮಹೇಶ | ಕನ್ನಡ ಮಿತ್ರ ಮಂಡಳಿ, ಕಾಸರವಾಡಿ ಪುಣೆ |
| ೨ | ನಾಗರ ಪಂಚಮಿ | ಮಾರುತಿ ಮಾಂಡ್ರೆ | ಆನಂದ | ತರುಣ ನಾಟ್ಯ ಸಂಘ, ಖೇಡಗಿ |
| ೩ | ಸುನಂದಾ | ಎಚ್. ಎನ್. ಹೂಗಾರ | ಅರವಿಂದ | ಬಸವಲಿಂಗೇಶ್ವರ ನಾಟ್ಯ ಸಂಘ, ಪಟ್ಟದಕಲ್ಲು |
| ೪ | ತಂಗಿ ಕೊಟ್ಟ ಕಾಣಿಕೆ | ಎಸ್. ಎಂ. ಖೇಡಗಿ | ಅನಿಲ | ಬಸವೇಶ್ವರ ನಾಟ್ಯ ಸಂಘ, ಪಡೇಸೂರ |
| ೫ | ಗಂಡನ ಆಜ್ಞೆ | ಲಿಂಗರಾಜ | ಲಿಂಗರಾಜ | ಶರಣಬಸವೇಶ್ವರ ನಾಟ್ಯ ಸಂಘ, ಗುಲಬರ್ಗಾ |
| ೬ | ಬಂಜೆ ತೊಟ್ಟಿಲು | ಎನ್. ಎಸ್. ಜೋಶಿ | ಬಲವಂತಪ್ಪ | ಶರಣಬಸವೇಶ್ವರ ನಾಟ್ಯ ಸಂಘ, ಗುಲಬರ್ಗಾ |
| ೭ | ಮಲಮಗಳು | ಪಿ. ಬಿ. ಧುತ್ತರಗಿ | ರಂಗಣ್ಣ | ಶರಣಬಸವೇಶ್ವರ ನಾಟ್ಯ ಸಂಘ, ಗುಲಬರ್ಗಾ |
| ೮ | ಸಂಪತ್ತಿಗೆ ಸವಾಲು | ಪಿ. ಬಿ. ಧುತ್ತರಗಿ | ಭದ್ರಿ | ಶರಣಬಸವೇಶ್ವರ ನಾಟ್ಯ ಸಂಘ, ಗುಲಬರ್ಗಾ |
| ೯ | ಹಸಿರು ಕ್ರಾಂತಿ | ಕೆ. ಎನ್. ಸಾಳುಂಕೆ | ವಿನಾಯಕ | ವೀರೇಶ್ವರ ನಾಟ್ಯ ಸಂಘ ಗದಗ |
| ೧೦ | ಎಲ್ಲಿದೆ ಸರ್ಕಾರ | ಎಚ್. ಟಿ. ಮಹಾಂತೇಶ ಶಾಸ್ತ್ರಿ | ಯೋಗೀಶ | ವೀರೇಶ್ವರ ನಾಟ್ಯ ಸಂಘ ಗದಗ |
| ೧೧ | ವಧುವರ | ಎಚ್. ಟಿ. ಮಹಾಂತೇಶ ಶಾಸ್ತ್ರಿ | ಭಾಸ್ಕರ | ತರುಣ ನಾಟ್ಯ ಸಂಘ ಖೇಡಗಿ |
| ೧೨ | ರಾಜ ಮೆಚ್ಚಿದ ದಾಸಿ | ಕೆ. ಎನ್. ಸಾಳುಂಕೆ | ರಾಜಕುಮಾರ | ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ |
| ೧೩ | ಕೆಚ್ಚೆದೆಯ ವೀರ | ಎಸ್. ಎಂ. ಖೇಡಗಿ | ಯುವರಾಜ | ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ |
| ೧೪ | ಹೂವಿನ ಅಂಗಡಿ | ಕೆ. ಎನ್. ಸಾಳುಂಕೆ | ಚೆಟ್ಟಿಯಾರ್ | ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ |
| ೧೫ | ಭಾಗ್ಯ ಬಂತು ಬುದ್ಧಿ ಹೋಯ್ತು | ಕೆ. ಎನ್. ಸಾಳುಂಕೆ | ಶ್ರೀಪತಿ | ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ |

| ಕ್ರ ನಂ | ನಾಟಕದ ಹೆಸರು | ಲೇಖಕರು | ಪಾತ್ರ | ನಾಟಕ ಸಂಘ |
|---|---|---|---|---|
| ೧೭ | ಹುಚ್ಚ | ಕೆ. ಎನ್. ಸಾಳುಂಕೆ | ಸೋಮಶೇಖರ | ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ |
| ೧೮ | ತಾಳಿಯ ತಕರಾರು | ಕೆ. ಎನ್. ಸಾಳುಂಕೆ | ಮಂಜು | ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ |
| ೧೯ | ಕಣ್ಣಿದ್ದರೂ ಬುದ್ಧಿ ಬೇಕು | ಕೆ. ಎನ್. ಸಾಳುಂಕೆ | ವಕೀಲ | ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ |
| ೨೦ | ಸಂಗೊಳ್ಳಿ ರಾಯಣ್ಣ | ಎಸ್. ಎಂ. ಖೇಡಗಿ | ಪಿಕರಿಂಗ | ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ |
| ೨೧ | ಸಂಗೊಳ್ಳಿ ರಾಯಣ್ಣ | ಎಸ್. ಎಂ. ಖೇಡಗಿ | ರಾಯಣ್ಣ | ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ |
| ೨೨ | ಹೇಳಿದರೆ ಹೆತ್ತವರಾಣೆ | ಎಸ್. ಎಂ. ಖೇಡಗಿ | ರುಸ್ತುಂ | ಪಂಚಾಕ್ಷರಿ ವಿಜಯ ನಾಟ್ಯ ಸಂಘ, ಚಿತ್ತರಗಿ |
| ೨೩ | ದೇವರಾಟ ತಿಳಿದಿಲ್ಲ | ಎಸ್. ಎಂ. ಖೇಡಗಿ | ಬಸವರಾಜ | ರಾಘವೇಂದ್ರ ನಾಟ್ಯ ಸಂಘ |
| ೨೪ | ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ | ಎಸ್. ಎಂ. ಖೇಡಗಿ | ಹರೀಶ | ಹೊಳೆ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೨೫ | ದೇವರಾಟ ತಿಳಿದಿಲ್ಲ | ಎಸ್. ಎಂ. ಖೇಡಗಿ | ಹರೀಶ | ಹೊಳೆ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೨೬ | ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ | ಎಸ್. ಎಂ. ಖೇಡಗಿ | ಸರ್ದಾರಜಿ | ಹೊಳೆ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೨೭ | ಪಾಪದ ದೇಹ ಪುಣ್ಯದ ಜೀವ | ಎಸ್. ಎಂ. ಖೇಡಗಿ | ಕಾಳಿಂಗ | ಹೊಳೆ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೨೮ | ನನ್ನ ಗಂಡನ ಹೆಂಡತಿ | ಎಸ್. ಎಂ. ಖೇಡಗಿ | ಪ್ರಶಾಂತ | ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೨೯ | ನನ್ನ ಗಂಡನ ಹೆಂಡತಿ | ಎಸ್. ಎಂ. ಖೇಡಗಿ | ದಿವಾಕರ | ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೩೦ | ನನ್ನ ಗಂಡನ ಹೆಂಡತಿ | ಎಸ್. ಎಂ. ಖೇಡಗಿ | ಗಂಗಾಧರ | ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೩೧ | ಮಾತು ಅಂಗಾರ ಮೌನ ಬಂಗಾರ | ಎಸ್. ಎಂ. ಖೇಡಗಿ | ವಾಸುದೇವ | ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |

| | | | | |
|---|---|---|---|---|
| ೩೨ | ಚಂದ್ರಿಯ ಚೆಲ್ಲಾಟ ಶೆಟ್ಟಿಯ ಹಾರಾಟ | ಬಿ. ಆರ್. ಅರಿಶಿಣಗೋಡಿ | ನಾಗರಾಜ | ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೩೩ | ಹೆಣ್ಣು ಮಗಳು | ಬಿ. ಆರ್. ಅರಿಶಿಣಗೋಡಿ | ಗಿರೀಶ | ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೩೪ | ನಿಮ್ಮ ಹೆಂಡತಿ ನಾನಲ್ಲ | ಎಸ್. ಎಂ. ಖೇಡಗಿ | ಪ್ರಶಾಂತ | ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೩೫ | ನನ್ನ ಗಂಡನ ಹೆಂಡತಿ | ಎಸ್. ಎಂ. ಖೇಡಗಿ | ಗಂಗಾಧರಪ್ಪ | ಗುರುಕುಮಾರೇಶ್ವರ ನಾಟ್ಯ ಸಂಘ ಹಾನಗಲ್ಲ |
| ೩೬ | ಗೌರಿ ಹೋದಳು ಗಂಗೆ ಬಂದಳು | ಎಸ್. ಎಂ. ಖೇಡಗಿ | ಮಾನಡಗೌಡ | ಗುರುಕುಮಾರೇಶ್ವರ ನಾಟ್ಯ ಸಂಘ ಹಾನಗಲ್ಲ |
| ೩೭ | ಗೌರಿ ಹೋದಳು ಗಂಗೆ ಬಂದಳು | ಎಸ್. ಎಂ. ಖೇಡಗಿ | ಸಿದ್ದನಗೌಡ | ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೩೮ | ಚಿತ್ರಾಂಗದಾ | ಕಂ, ಹಣಮಂತರಾಯ | ಅರ್ಜುನ | ರಂಗಭೂಮಿ ಕಲಾವಿದರ ಸಂಘ ವಿಜಾಪುರ |
| ೩೯ | ರಕ್ತ ರಾತ್ರಿ | ಕಂ, ಹಣಮಂತರಾಯ | ಅಶ್ವತ್ಥಾಮ | ರಂಗಚೇತನ ಸಂಸ್ಥೆ ವಿಜಾಪುರ |
| ೪೦ | ಎಚ್ಚರ ತಂಗಿ ಎಚ್ಚರ | ನಾ. ದೇ. ಕೃತ | ಡಾ. ಗುಣಶೇಖರ | ಗುರುಕುಮಾರೇಶ್ವರ ನಾಟ್ಯ ಸಂಘ ಹಾನಗಲ್ಲ |
| ೪೧ | ಎಚ್ಚರ ತಂಗಿ ಎಚ್ಚರ | ನಾ. ದೇ. ಕೃತ | ಎಸ್.ಪಿ. ಅಶೋಕ | ಗುರುಕುಮಾರೇಶ್ವರ ನಾಟ್ಯ ಸಂಘ ಹಾನಗಲ್ಲ |
| ೪೨ | ಬಸ್ ಕಂಡಕ್ಟರ್ | ಬಿ. ಆರ್. ಅರಿಶಿಣಗೋಡಿ | ಪ್ರದೀಪ | ಗುರುಕುಮಾರೇಶ್ವರ ನಾಟ್ಯ ಸಂಘ ಹಾನಗಲ್ಲ |
| ೪೩ | ಬಸ್ ಕಂಡಕ್ಟರ್ | ಬಿ. ಆರ್. ಅರಿಶಿಣಗೋಡಿ | ಜಗದೀಶ | ಗುರುಕುಮಾರೇಶ್ವರ ನಾಟ್ಯ ಸಂಘ ಹಾನಗಲ್ಲ |
| ೪೪ | ಗೆಜ್ಜೆ ಕಟ್ಟಿದರೂ ಲಜ್ಜೆ ಬಿಟ್ಟಿಲ್ಲ | ಎಸ್. ಎಂ. ಖೇಡಗಿ | ಡಾಕ್ಟರ ಶೇಖರ | ಸಂಘಮೇಶ್ವರ ನಾಟ್ಯ ಸಂಘ ಆಶಾಪೂರ |
| ೪೫ | ಗರಗದ ಮಡಿವಾಳೇಶ್ವರ ಮಹಾತ್ಮೆ | ಎಸ್. ಎಂ. ಖೇಡಗಿ | ಕಲ್ಲಪ್ಪಶೆಟ್ಟಿ | ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ |
| ೪೬ | ಕುರುಕ್ಷೇತ್ರ | ಕಂ, ಹಣಮಂತರಾಯ | ದುರ್ಯೋಧನ | ಬಸವೇಶ್ವರ ನಾಟ್ಯ ಸಂಘ ಖೇಡಗಿ |
| ೪೭ | ಹೆಣ್ಣಿನ ಜೀವನ | ಎಚ್. ಟಿ. ಮಹಾಂತೇಶ ಶಾಸ್ತ್ರಿ | ವಿದ್ಯಾಧರ | ಕರ್ನಾಟಕ ಕಲಾಸಂಘ ಯಂಕಂಚಿ |
| ೪೮ | ಪ್ರಜಾಸರ್ಕಾರ | ಎಚ್. ಟಿ. ಮಹಾಂತೇಶ ಶಾಸ್ತ್ರಿ | ಸದಾಶಿವ | ಬಸವಲಿಂಗೇಶ್ವರ ನಾಟ್ಯ ಸಂಘ ಪಟ್ಟದಕಲ್ಲು |

## ಶ್ರೀಎಸ್. ಎಮ್. ಖೇಡಗಿ ಇವರಿಗೆ ಲಭಿಸಿದ ಪ್ರಶಸ್ತಿ ಹಾಗೂ ಸನ್ಮಾನಗಳು

1) ಶ್ರೀ ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ ಕ್ಯಾಂಪ್ ಗೋಕಾಕ, ಸಂಗೊಳ್ಳಿ ರಾಯಣ್ಣ ನಾಟಕ ಪ್ರಾರಂಭಕ್ಕೆ ನಿಂಗಣ್ಣ ಸಣ್ಣಕ್ಕಿ ಅವರಿಂದ ಸನ್ಮಾನ. 1977

2) ಮಂಜುನಾಥ ಯುವಕ ನಾಟ್ಯ ಸಂಘ, ಕಂಪಸಾಗರ, ನಾಟಕ ಉತ್ಸವದ ಬೆಳ್ಳಿ ಹಬ್ಬದಲ್ಲಿ ಕವಿರತ್ನ ಬಿರುದು ಹಾಗೂ ಸನ್ಮಾನ ಶ್ರೀ ಏಣಗಿ ಬಾಳಪ್ಪನವರಿಂದ. 1981

3) ಶ್ರೀ ಬಿ. ಆರ್. ಅರಿಷಿಣಗೋಡಿ ಇವರ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಕ್ಯಾಂಪ್ ಗುಲಬರ್ಗಾದಲ್ಲಿ ಸನ್ಮಾನ 1983

4) ಶ್ರೀ ಬಿ. ಆರ್. ಅರಿಷಿಣಗೋಡಿ ಇವರ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಕ್ಯಾಂಪ್ ಧಾರವಾಡದಲ್ಲಿ ಸನ್ಮಾನ 1984

5) ಗುಬ್ಬಿ ವೀರಣ್ಣ ಶತಮಾನೋತ್ಸವ ಬೆಂಗಳೂರು ಈ ಕಾರ್ಯಕ್ರಮ ದಲ್ಲಿ ಡಾ॥ ರಾಜಕುಮಾರ ಅವರಿಂದ ಸನ್ಮಾನ 1992

6) ಶ್ರೀ ಶರಣಬಸಪ್ಪ ಅಪ್ಪಾ ಗುಲಬರ್ಗಾ ಇವರಿಂದ ಉಡಚ್ಯಾಣದಲ್ಲಿ ಶಂಕರಲಿಂಗ ಮಹಾತ್ಮೆ ನಾಟಕ ಪ್ರಾರಂಭೋತ್ಸವದಲ್ಲಿ ಸನ್ಮಾನ. 1992

7) ಉದಯೋನ್ಮುಖ ಬರಹಗಾರರ ಸಂಘ, ದೇವಲಗಾಣಗಾಪುರ ಇವರಿಂದ ಶರಣ ಸಾಹಿತಿ ಬಿರುದು ನೀಡಿ ಸನ್ಮಾನ. 1993

8) ಕರ್ನಾಟಕ ನಾಟಕ ಆಕಾಡೆಮಿ ಬೆಂಗಳೂರು ಇವರಿಂದ ಆಕಾಡೆಮಿ ಪ್ರಶಸ್ತಿ ಹಾಗೂ ಸನ್ಮಾನ ಡಾ॥ ಯು. ಆರ್. ಅನಂತಮೂರ್ತಿ ಇವರಿಂದ 1994

9) ಕಂದಗಲ್ ಹನುಮಂತರಾಯರ ಉತ್ಸವ ಸ್ಮೃತಿ ಸಮಾರಂಭ ವಿಜಾಪುರದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ ಅಶೋಕಕುಮಾರ ಮನೋಳಿ ಇವರಿಂದ ಸನ್ಮಾನ. 1995

10) ಕಂದಗಲ್ ಸ್ಮೃತಿ ನಾಟಕೋತ್ಸವ ಬೀಳಗಿ ಬಿಜಾಪುರ ಈ ಕಾರ್ಯಕ್ರಮದಲ್ಲಿ ಗೌರವ ಸನ್ಮಾನ 1995

11) ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ರಂಗ ಸಂಭ್ರಮ ಕಾರ್ಯಕ್ರಮ ವಿಜಾಪುರದಲ್ಲಿ ಗೌರವ ಸನ್ಮಾನ 1995

12) ಅಖಿಲ ಕರ್ನಾಟಕ ವೃತ್ತಿ ರಂಗಭೂಮಿ ಸಮ್ಮೇಳನ ದಾವಣಗೇರಿ ಯಲ್ಲಿ ಶಾಕರಾದ ಶ್ರೀ ಶ್ಯಾಮನೂರ ಶಿವಶಂಕರಪ್ಪ ಅವರಿಂದ ಸನ್ಮಾನ. 1996

13) ಮಡಿವಾಳೇಶ್ವರ ಮಹಾತ್ಮೆ ನಾಟಕ ಪ್ರಾರಂಭೋತ್ಸವದಲ್ಲಿ ಪ್ರೊ॥ ವ್ಹಿ. ಜಿ. ಮಾರಿಹಾಳ ಇವರಿಂದ ಸನ್ಮಾನ. 1997

14) ಕಿತ್ತೂರು ಚೆನ್ನಮ್ಮ ರಾಣಿ ವಿಜಯೋತ್ಸವ ಸಂಘ, ಚೆನ್ನಮ್ಮನ ಕಿತ್ತೂರಿನಲ್ಲಿ ಗರಗದ ಸಿಂಪಿ ಲಿಂಗಣ್ಣ ಅಧ್ಯಯನ ಕೇಂದ್ರ, ಚಡಚಣ ಇವರಿಂದ ಸನ್ಮಾನ. 1998

15) ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಮ್. ಕೃಷ್ಣ ಇವರ ಅಮೃತ ಹಸ್ತದಿಂದ ಸನ್ಮಾನ ಹಾಗೂ ರಾಜ್ಯೋತ್ಸವ ಪ್ರಶಸ್ತಿ. 2000

16) ಕನ್ನಡ ಮಿತ್ರ ಮಂಡಳಿ, ಪುಣೆ ಇವರಿಂದ ಪಿ. ಸಿ. ಎಮ್. ಪಿ. ನಾಟ್ಯ ಮಂದಿರದಲ್ಲಿ ಚಿಂಚವಾಡ ಇವರಿಂದ ಸನ್ಮಾನ 2000

17) ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ, ಹಾನಗಲ್, ಕ್ಯಾಂಪ್ ಮಹಾಲಿಂಗಪುರದಲ್ಲಿ ಡಾ॥ ಪಂಡಿತ ಪುಟ್ಟರಾಜ ಗವಾಯಿಗಳ ಅಮೃತ ಹಸ್ತದಿಂದ ಸನ್ಮಾನ 2000

18) ಕನ್ನಡ ಮಿತ್ರ ಬಳಗ ರತ್ನಾಗಿರಿ(ಮಹಾರಾಷ್ಟ್ರ) ಖಾತು ನಾಟ್ಯ ಮಂದಿರದಲ್ಲಿ ಸನ್ಮಾನ 2001

19) ಪಂಚಾಕ್ಷರಿ ಸಂಗೀತ ಪಾಠ ಶಾಲೆ, ವಿಜಾಪುರ ಇಲ್ಲಿ ಶಾಸಕರಾದ ಶ್ರೀ ಶಿವಾನಂದ ಪಾಟೀಲ ಇವರಿಂದ ಸನ್ಮಾನ. 2001

20) ನಾಗರಿಕ ವೇದಿಕೆ ಖೇಡಗಿ ಅಭಿಮಾನಿಗಳ ಸಂಘ ಇವರಿಂದ ಸನ್ಮಾನ 2001

21) ಎಸ್. ಎಮ್. ಖೇಡಗಿ ನಾಟಕ ಉತ್ಸವ ಹಾಗೂ ಅಭಿಮಾನಿ ಸಂಘ ವಿಜಾಪುರ ಇವರ ಕಾರ್ಯಕ್ರಮದಲ್ಲಿ ಲೋಕಸಭಾ ಸದಸ್ಯರಾದ ಮಾನ್ಯ ಶ್ರೀ ಬಸನಗೌಡ. ಆರ್. ಪಾಟೀಲ(ಯತ್ನಾಳ) ಇವರಿಂದ ಗೌರವ ಸನ್ಮಾನ 2001

22) ಜಿಲ್ಲಾ ಆಡಳಿತ ವಿಜಾಪುರ ಇವರಿಂದ ಸ್ವಾತಂತ್ರ್ಯೋತ್ಸವದಲ್ಲಿ ಜಿಲ್ಲಾ ಉಸ್ತುವಾರಿ ಮತ್ತು ಸಚಿವರಾದ ಶ್ರೀ ಬಿ. ಎಸ್. ಪಾಟೀಲ (ಸಾಸನೂರ) ಇವರಿಂದ ಪ್ರಶಸ್ತಿ ಪತ್ರ ಹಾಗೂ ಸನ್ಮಾನ. 2002

23) ಮಧುರಚನ್ನ ಶತಮಾನೋತ್ಸವ ವಿಜಪುರದಲ್ಲಿ ಗೌರವ ಸನ್ಮಾನ. ಕರ್ನಾಟಕ ನಾಟಕ ಅಕಾಡೆಮಿ ರಜತ ರಂಗೋತ್ಸವ ಕಾರ್ಯಕ್ರಮ ದಲ್ಲಿ ಗೌರವ ಸನ್ಮಾನ. 2003

24) ವೃತ್ತಿ ರಂಗ ಕಲಾವೀದರ ಸಮಾವೇಶ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು 2003

25) ಕರ್ನಾಟಕ ನಾಟಕ ಅಕಾಡೆಮಿ ಮತ್ತು ಸ್ನೇಹ ರಂಗ ಇಳಕಲ್ ವೃತ್ತಿರಂಗೋತ್ಸವ ಕಾರ್ಯಕ್ರಮದಲ್ಲಿ ಗೌರವ ಸನ್ಮಾನ. 2005

26) ದಾವಣಗೇರಿಯಲ್ಲಿ ಪಂಡಿತ ಪುಟ್ಟರಾಜ ಗವಾಯಿಗಳಿಂದ ಸನ್ಮಾನ 2005

27) ಸ್ವಾಮಿ ಸಮರ್ಥ ನಾಟ್ಯ ಸಂಘ ಅಕ್ಕಲಕೋಟ ಇವರಿಂದ ಗೌರವ ಸನ್ಮಾನ. 2005

28) ಡಾ॥ ಎಂ. ಎಂ. ಕಲಬುರ್ಗಿ ಸಂಶೋಧಕರು ಇವರ ಖರೆ ಖರೇ ಸಂಗ್ಯಾ ಬಾಳ್ಯಾ ನಾಟಕ ಪ್ರದರ್ಶನದಲ್ಲಿ ಸನ್ಮಾನ. 2005

29) ಗ್ರಾಮ ರಂಗ ಸಂಭ್ರಮ ಪೌರಾಣಿಕ ನಾಟಕೋತ್ಸವ ಗುಳೇಗುಡ್ಡ ಕಾರ್ಯಕ್ರಮದಲ್ಲಿ ಶಾಸಕರು ಮೇಟಿ ಇವರಿಂದ ಗೌರವ ಸನ್ಮಾನ 2005

30) ಪೌರಾಣಿಕ ನಾಟಕೋತ್ಸವ ಹಾರುಗೇರಿ, (ಚಿತ್ರಾಂಗದ ನಾಟಕ) ಶ್ರೀ ಸನದಿ ಇವರಿಂದ ಗೌರವ ಸನ್ಮಾನ 2006

31) ಕರ್ನಾಟಕ ನಾಟಕ ಅಕಾಡೆಮಿ ಹಾಗೂ ರಂಗಭಾರತಿ ಹೂವಿನ ಹಡಗಲಿಯಲ್ಲಿ ಸನ್ಮಾನ. 2006

32) ಕರ್ನಾಟಕ ಕಲಾವೈಭವ ಬೆಂಗಳೂರು ಚಿತ್ರ ನಟ ಪ್ರೇಮ ಹಾಗೂ ಸುಧೀರ ಮಾಲತಿ ಇವರಿಂದ ಗೌರವ ಸನ್ಮಾನ. 2007

33) ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಕಲಾಚೇತನ ಸಂಸ್ಥೆ ವಿಜಾಪುರ ಇವರಿಂದ ಗೌರವ ಸನ್ಮಾನ... 2007

34) ದಾನಮ್ಮದೇವಿ ಚಲನಚಿತ್ರದ 100ನೇ ದಿನದ ಸಮಾರಂಭದಲ್ಲಿ ಗೌರವ ಸನ್ಮಾನ. 2007

35) ಶ್ರೀ ಗಂಧ ಪುಸ್ತಕ ಬಿಡುಗಡೆಯ ಕಾರ್ಯಕ್ರಮ ಗೋಕಾಕದಲ್ಲಿ ಮಾನ್ಯ ಎಂ. ಪಿ. ಪ್ರಕಾಶ ಇವರಿಂದ ಗೌರವ ಸನ್ಮಾನ. 2008

36) ನಾಗರಿಕ ವೇದಿಕೆ ಖೇಡಗಿ ಬಸವರಾಜೇಂದ್ರ ಶಿವಯೋಗಿ ಇವರಿಂದ ಸನ್ಮಾನ 2009

37) ರಾಜ್ಯದ ಅಲ್ಪಸಂಖ್ಯಾತರ ಕಾರ್ಯಾಗಾರ ವಿಜಾಪುರದಲ್ಲಿ ಶ್ರೀ ಸಂಗನಬಸವ ಸ್ವಾಮೀಜಿ ಇವರಿಂದ ಸನ್ಮಾನ 2009

38) ಶ್ರೀ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ ಇವರಿಂದ ಕೂಡಲಸಂಗಮದಲ್ಲಿ ಶ್ರೀ ಪಾರ್ವತಮ್ಮ ರಾಜಕುಮಾರ ಇವರಿಂದ ಗೌರವ ಸನ್ಮಾನ. 2009

39) ಕೃಷಿ ವಿಶ್ವವಿದ್ಯಾಲಯ ಧಾರವಾಡ ಹಾಗೂ ಅಂತರ ವಿಶ್ವವಿದ್ಯಾಲಯ ಯುವಜನೋತ್ಸವ ಕಾರ್ಯಕ್ರಮದಲ್ಲಿ ಗೌರವ ಸನ್ಮಾನ. 2009

40) ಮಹಾರಾಷ್ಟ್ರ ನದಾಫ್ಗ ಯುಥ್ ಸೋಶಿಯಲ್ ಫಾರ್ಮರ್ ಸಂಸ್ಥೆ ಸೋಲಾಪೂರ ಅಧ್ಯಕ್ಷರು ಶ್ರೀ ಇಪ್ತೇಕರ ಇವರಿಂದ ಗೌರವ ಸನ್ಮಾನ. 2010

41) ಇಂಡಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ ಶಾಸಕರಾದ ಸಾರ್ವಭೌಮ ಬಗಲಿ ಇವರಿಂದ ಸನ್ಮಾನ. 2010

42) ರಂಗಮೇಳ ಸಂಸ್ಥೆ ವಿಜಾಪುರ ನೀನಾಸಂ ಪದವೀಧರಡಿ. ಎಚ್. ಕೋಲಾರ ಇವರಿಂದ ಸನ್ಮಾನ. 2010

43) ಗುಬ್ಬಿ ವೀರಣ್ಣ ನಾಟಕ ಕಂಪನಿ ಇವರು ಮೈಸೂರಿನಲ್ಲಿ ಮೇಯರ್ ಇವರಿಂದ ಸನ್ಮಾನ. 2010

44) ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಾಪುರ ಅಧ್ಯಕ್ಷ ಶ್ರೀ ಎಸ್. ಬಿ. ಜಿದ್ದಿ, ಮಾಜಿ ಎಮ್. ಎಲ್. ಸಿ. ಇವರಿಂದ ಸನ್ಮಾನ ಪತ್ರ ಹಾಗೂ ಗೌರವ ಸನ್ಮಾನ. 2011


*****



ಶ್ರೀ ಎಸ್. ಎಮ್. ಖೇಡಗಿ ಸ್ಥಾಪಿತ ವೃತ್ತಿ (ಹವ್ಯಾಸಿ) ರಂಗಚೇತನ ಸಂಸ್ಥೆ
(ರಿ) ಬಿಜಾಪುರ.
ಸ್ಥಾಪನೆ-೧೯೯೨ , ರ. ನಂ-೨೪೭



ನಾಟಕ ರಚನೆಯಲ್ಲಿ ನಿರತರಾದ ಎಸ್. ಎಮ್. ಖೇಡಗಿ



ಶ್ರೀ ಎಸ್. ಎಮ್. ಖೇಡಗಿ
ತರುಣರಿದ್ದಾಗಿನ ಚಿತ್ರ



ಎಸ್. ಎಮ್. ಖೇಡಗಿಯವರಿಂದ ಸ್ಥಾಪಿತವಾದ ವೃತ್ತಿರಂಗಭೂಮಿ ನಾಟಕಗಳ ನಟರಾಜ ಪುಸ್ತಕಾಲಯ ವಿಜಾಪುರ ಇದರ ಉದ್ಘಾಟನಾ ಸಮಾರಂಭ. (೨೦೦೨)



ಖೇಡಗಿಯವರು ಪತ್ನಿ , ಮಕ್ಕಳು ಮತ್ತು ಮೊಮ್ಮಕಳೊಂದಿಗೆ.




ಪತ್ನಿ ಶ್ರೀಮತಿ ಮಮತಾಜ್ ಬೇಗಮ್(ಸಲೀಮಾ) ಮೊಮ್ಮಗಳು
ಶಿಫಾಳೊಂದಿಗೆ ಶ್ರೀ ಎಸ್. ಎಮ್. ಖೇಡಗಿಯವರು.



ಎಸ್. ಎಮ್. ಖೇಡಗಿಯವರು ಕೆಚ್ಚೆದೆಯ ವೀರ ನಾಟಕದ
ಯುವರಾಜನ ಪಾತ್ರದಲ್ಲಿ.



ಗುಬ್ಬಿ ವೀರಣ್ಣ ನೆನಪು ಕಾರ್ಯಕ್ರಮದಲ್ಲಿ(ಬೆಂಗಳೂರು) ಪದ್ಮಶ್ರೀ
ಚಿಂದೋಡಿ ಲೀಲಾ ಇವರೊಂದಿಗೆ ಸಂಭಾಷಣಾ
ನಿರತ ಎಸ್. ಎಮ್. ಖೇಡಗಿಯವರು.



ಮೈಸೂರಿನಲ್ಲಿ ಜೇವರಗಿ ರಾಜಣ್ಣ ಇವರ ಸಂಸ್ಥೆಯಲ್ಲಿ ಸನ್ಮಾನ.
ಎನ್. ಬಸವರಾಜ್, ನಾಟಕ ಅಕಾಡೆಮಿ ಅಧ್ಯಕ್ಷ ಶ್ರೀ ರಾಜಾರಾಮ ಹಾಗೂ
ಮಾಲತಿ ಸುಧೀರ್ ಇವರೊಂದಿಗೆ ಎಸ್. ಎಮ್. ಖೇಡಗಿಯವರು.



ಚೆನ್ನಮನ ಕಿತ್ತೂರಿನಲ್ಲಿ ಗರಗದ ಮಡಿವಾಳೇಶ್ವರ ಮಹಾತ್ಮೆ ನಾಟಕದ ೧೦೧ನೇ ಪ್ರಯೋಗದಲ್ಲಿ ಪ್ರೊ ವ್ಹಿ. ಜಿ. ಮಾರಿಹಾಳ ಇವರಿಂದ ಸನ್ಮಾನ(೧೯೮೭).




ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ ಹಾನಗಲ್(ಬಿಜಾಪುರ) ಎಚ್ಚರ ತಂಗಿ ಎಚ್ಚರ ನಾಟಕದ ಎಸ್. ಪಿ ಪಾತ್ರದಲ್ಲಿ ಎಸ್. ಎಮ್. ಖೇಡಗಿಯವರು.



ರಂಗಕರ್ಮಿ ಪ್ರಸನ್ನ ಇವರ ನಾಟಕ ಶಾಲೆ ಸ್ಥಾಪನೆ ನಿಮಿತ್ತ ಹಮ್ಮಿಕೊಂಡ
ನಿರಶನಕ್ಕೆ ಎಸ್. ಎಮ್. ಬೇಡಗಿಯವರ ಬೆಂಬಲ.



ಎನ್. ಬಸವರಾಜ ಅವರ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ ಇದರ
೪೫ನೆಯ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ
ಎಸ್. ಎಮ್. ಬೇಡಗಿಯವರು.



ಮುಖ್ಯಮಂತ್ರಿ ಎಸ್. ಎಮ್. ಕೃಷ್ಣ ಇವರಿಂದ ಎಸ್. ಎಮ್.
ಖೇಡಗಿಯವರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ. (೨೦೦೦).



ಡಾ. ರಾಜಕುಮಾರ ಅವರಿಂದ ಗುಬ್ಬಿ ವೀರಣ್ಣ ನೆನಪಿನ ಕಾರ್ಯಕ್ರಮದಲ್ಲಿ
ಶ್ರೀ ಎಸ್. ಎಮ್. ಖೇಡಗಿಯವರಿಗೆ ಸನ್ಮಾನ.



ಕಂದಗಲ್ಲ ಹನುಮಂತರಾಯರ ರಕ್ತರಾತ್ರಿ ನಾಟಕದ ಅಶ್ವತ್ಥಾಮನ ಪಾತ್ರದಲ್ಲಿ ಎಸ್. ಎಮ್. ಖೇಡಗಿ.



ಎಸ್. ಎಮ್. ಖೇಡಗಿಯವರಿಗೆ ಸಂದ ಪ್ರಶಸ್ತಿಗಳು.



ಯು. ಅರ್. ಅನಂತಮೂರ್ತಿ ಇವರಿಂದ ಅಕಾಡೆಮಿ ಪ್ರಶಸ್ತಿ ಸ್ವೀಕರಿಸುತ್ತಿರುವ ಎಸ್. ಎಮ್. ಖೇಡಗಿ. (೧೯೯೪)



ಚಿತ್ರಾಂಗದಾ ನಾಟಕದಲ್ಲಿ ಅರ್ಜುನ ಪಾತ್ರಧಾರಿ ಖೇಡಗಿಯವರು ಜಯಲಕ್ಷ್ಮಿ ಪಾಟೀಲರೊಂದಿಗೆ.




ಖೇಡಗಿಯವರ ಪರಿಕಲ್ಪನೆಯ ರಂಗಬಾವುಟ



ಶ್ರೀ ಎಸ್. ಎಮ್. ಖೇಡಗಿಯವರು